


ಮಕ್ಕಳ ರಾಮಾಯಣ

ಮಧುರಂ ಭೂತಲಿಂಗಮ್

ಪ್ರಕಾಶನ ವಿಭಾಗ

ಮಕ್ಕಳ ರಾಮಾಯಣ

ಇಂಗ್ಲಿಷ್ ಮೂಲ :
ಮಧುರಂ ಭೂತಲಿಂಗಮ್

ಕನ್ನಡ ಅನುವಾದ :
ಶಾ. ಬಾಲೂರಾವ್

ಚಿತ್ರಗಳು :
ಬಾಣೇ ಪ್ರಸನ್ನ

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ
ಭಾರತ ಸರ್ಕಾರ

ಜನವರಿ 1981 (January 1981)
ಪೌಷ 1902 (Pausha 1902)

CHILDREN'S RAMAYANA (Kannada)

ಬೆಲೆ : ರೂ. 8.50

ನಿರ್ದೇಶಕರು, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ, ಭಾರತ ಸರಕಾರ, ಪಾಟಿಯಾಲ ಹೌಸ್, ನವದೆಹಲಿ – 110 001 ಇವರಿಂದ ಪ್ರಕಾಶಿತ.

ಮಾರಾಟ ಕೇಂದ್ರಗಳು:– ಪ್ರಕಾಶನ ವಿಭಾಗ
ಸೂಪರ್ ಬಜಾರ್, ಕನ್ನಾಟ್ ಸರ್ಕಸ್, ನವದೆಹಲಿ – 110 001
ಕಾಮರ್ಸ್ ಹೌಸ್, ಕರೀಂ ಭಾಯ್ ರೋಡ್, ಬಲ್ಲಾರ್ಡ್ ಪೀರ್, ಮುಂಬೈ – 400 038
8, ಎಸ್‌ಪ್ಲನೇಡ್ ಈಸ್ಟ್, ಕಲ್ಕತ್ತ – 700 001
ಶಾಸ್ತ್ರಿ ಭವನ, 35, ಹ್ಯಾಡೋಸ್ ರೋಡ್, ಮದ್ರಾಸ್ – 600 006
ಬಿಹಾರ್ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಬಿಲ್ಡಿಂಗ್, ಅಶೋಕ ರಾಜಪಥ, ಪಾಟ್ನ – 800 004
ಪ್ರೆಸ್ ರೋಡ್, ತಿರುವನಂತಪುರ

ಮಣಿಪಾಲ ಪವರ್ ಪ್ರೆಸ್, ಮಣಿಪಾಲ ಇವರಿಂದ ಮುದ್ರಿತ.

ಚಿಕ್ಕವರಿದ್ದಾಗ

ನನ್ನಿಂದ ಈ ಕಥೆ ಹೇಳಿಸಿ ಕೇಳಿದ

ರವಿ ಮತ್ತು ವಿದ್ಯಾ ಅವರಿಗೆ

ಈ ಪುಸ್ತಕದ ಬಗ್ಗೆ

ಇಂದಿನ ಮಕ್ಕಳಿಗೆಂದು ಬರೆದಿರುವ ಈ ಪುಸ್ತಕದಲ್ಲಿ ರಾಮಾಯಣ ಮಹಾಕಾವ್ಯದ ಮುಖ್ಯ ಕಥೆಯನ್ನು ಆದಷ್ಟು ಸರಳವಾಗಿ ಹೇಳಲು ಪ್ರಯತ್ನಿಸಿದ್ದೇನೆ. ಕಾಲಮಾನ್ಯವಾದ ಈ ದೀರ್ಘ ಕಾವ್ಯದ ಕರ್ತೃ ವಾಲ್ಮೀಕಿ ಋಷಿ. ಸಂಸ್ಕೃತ ಸಾಹಿತ್ಯದಲ್ಲಿ ಇದು ತನ್ನ ಬಗೆಯ ಮೊದಲನೆಯ ಕಾವ್ಯ. ಕೆಲವು ಇತಿಹಾಸಜ್ಞರ ಪ್ರಕಾರ, ವಾಲ್ಮೀಕಿ ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿದ್ದವನು. ಅವನ ಚಿಕ್ಕಂದಿನ ಬದುಕು ಪ್ರಾಪಂಚಿಕವಾಗಿತ್ತೆಂದು ಹೇಳುತ್ತಾರೆ. ಪ್ರಾಯಶಃ ಅದು ದುಷ್ಟತನದಿಂದಲೂ ಕೂಡಿತ್ತೇನೊ. ಆದರೆ, ಮುಂದೆ ಜ್ಞಾನೋದಯವಾದಂತೆ, ವಾಲ್ಮೀಕಿ ತಪಸ್ಸಿನ ಜೀವನಕ್ಕೆ ತೊಡಗಿದ. ಅವನು ಆದರ್ಶ ದೊರೆ ರಾಮನ ಕಥೆಯನ್ನು ಭವಿಷ್ಯತ್ತಿನ ಜನತೆಗಾಗಿ ಬರೆಯಲು ತೊಡಗಿದುದು ದಿವ್ಯ ಸ್ಫೂರ್ತಿಯಿಂದ ಎಂದು ಜನ ನಂಬುತ್ತಾರೆ.

ಎಲ್ಲ ಮಹಾಕಾವ್ಯಗಳಂತೆ ರಾಮಾಯಣದ ಕಥೆಯನ್ನು ಸಹ ಚಾರಿತ್ರಿಕ ಸತ್ಯವನ್ನು ಕೇಂದ್ರವಾಗಿಟ್ಟು ಅದರ ಸುತ್ತ ಕಟ್ಟಲಾಗಿದೆ. ಅದರಲ್ಲಿ ಪ್ರಾಚೀನ ಭಾರತೀಯ ನಾಗರಿಕತೆಯಲ್ಲಿನ ಪೌರ, ನೈತಿಕ ಮತ್ತು ತಾತ್ವಿಕ ಮೌಲ್ಯಗಳನ್ನು ಕಲ್ಪನಾತ್ಮಕ ಕಾವ್ಯದಲ್ಲಿ ಬಿತ್ತರಿಸಲಾಗಿದೆ. ಈವೊತ್ತಿನವರೆಗೂ ರಾಮಾಯಣ ಸರ್ವತ್ರವಾದ ತನ್ನ ಸೊಗಸನ್ನು ಉಳಿಸಿಕೊಂಡು ಬಂದಿದೆ. ಭಾರತೀಯರ ಮೇಲೆ ಅದು ಬೀರಿರುವ ಪ್ರಭಾವವಂತೂ ಅನನ್ಯ.

ರಾಮ ಪರಮಪುರುಷನಾದ ದೇವರ ಅವತಾರವೆಂದು ಜನ ಒಪ್ಪಿಕೊಂಡಿದ್ದಾರೆ. ಅವನ ದಿವ್ಯಶಕ್ತಿಯನ್ನು ಒಪ್ಪಿದರೆ ಮಾತ್ರ ಕಥೆಯಲ್ಲಿ ನಡೆಯುವ ಅನೇಕ ಅದ್ಭುತಗಳು ಸಾಧ್ಯವಾಗುತ್ತವೆ. ಆದರೆ, ಮೂಲವಾಗಿ ವಾಲ್ಮೀಕಿ ರಾಮನನ್ನು ಒಬ್ಬ ಮಾನವನನ್ನಾಗಿ, ದೊರೆಯನ್ನಾಗಿ ಚಿತ್ರಿಸಿದ್ದಾನೆ. ಇಲ್ಲಿ ನಾನು ಆ ಒತ್ತನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.

ಮಧುರಮ್ ಭೂತಲಿಂಗಮ್

ಒಳಪಿಡಿ

	ಪುಟ
ಈ ಪುಸ್ತಕದ ಬಗ್ಗೆ	
ಎರಡು ಹಕ್ಕಿಗಳು	1
ರಾಮನ ಜನನ	6
ನಾಲ್ವರು ಅಣ್ಣತಮ್ಮಂದಿರು	7
ಖುಷಿಯಾದ ರಾಜ	12
ಸೀತೆಯನ್ನು ಗೆದ್ದದ್ದು	16
ವಿಷ್ಣು ಧನುಸ್ಸು	23
ಕೈಕೆಯಿಯ ಎರಡು ವರಗಳು	27
ರಾಮ ಅಯೋಧ್ಯೆ ಬಿಟ್ಟು ಹೋದದ್ದು	32
ಚಿತ್ರಕೂಟದಲ್ಲಿ	35
ಭರತ ರಾಮನನ್ನು ಹುಡುಕಿದ್ದು	38
ಶೂರ್ಪಣಖಿ	43
ಸೀತೆ ಮತ್ತು ಚಿನ್ನದ ಜಿಂಕೆ	47
ರಾಮನ ದುಃಖ	51
ಸುಗ್ರೀವನೊಂದಿಗೆ ಸ್ನೇಹ	53
ರಾಮನ ಮುದ್ರೆಯುಂಗುರ	57
ಲಂಕಾದಹನ	61
ಸಂಕಟ ಕಾಲದ ಸ್ನೇಹಿತ ವಿಭೀಷಣ	64
ಲಕ್ಷ್ಮಣ ಮತ್ತು ಇಂದ್ರಜಿತು	69
ರಾವಣನ ಸಾವು	73
ಭರತ ಮಿಲನ	76

ಎರಡು ಹಕ್ಕಿಗಳು

ರಾಮಾಯಣವನ್ನು ಹೇಗೆ ಬರೆಯಲಾಯಿತು ಎಂಬುದರ ಬಗ್ಗೆ ಕಥೆ ಇದು.

ಸಾವಿರಾರು ವರ್ಷಗಳ ಹಿಂದೆ ಒಬ್ಬ ಮುದುಕನಿದ್ದ. ಅವನು ಕಾಡಿನಲ್ಲಿ ಒಬ್ಬನೇ ವಾಸವಾಗಿದ್ದ. ಅವನು ತುಂಬ ವಿವೇಕಿ. ಅಲ್ಲಿ ಕಾಡಿನಲ್ಲಿ ಹಲವಾರು ತರಹದ ಕಾಡುಮೃಗ ಗಳ ನಡುವೆ ಒಂಟಿಯಾಗಿ ವಾಸಮಾಡಿಕೊಂಡಿರಲು ಇವನಿಗೆ ಭಯವೆನಿಸುತ್ತಿರಲಿಲ್ಲ. ಅವನು ಆ ಪ್ರಾಣಿಗಳನ್ನು ತುಂಬ ದಯದಿಂದ ಕಂಡು ಪ್ರೀತಿಸುತ್ತಿದ್ದ. ಅವು ಸಹ ಅವನ ಜತೆ ಸ್ನೇಹ ಬೆಳೆಸಿ ಅವನಲ್ಲಿ ನಂಬಿಕೆ ಇಟ್ಟಿದ್ದವು.

ಆ ಮುದುಕನಿಗೆ ಮಕ್ಕಳಿರಲಿಲ್ಲವೇನೋ, ಅಥವಾ ಅವರು ತಮ್ಮನ್ನು ತಾವು ನೋಡಿ ಕೊಳ್ಳುವಷ್ಟು ದೊಡ್ಡವರಾಗಿದ್ದರೇನೋ. ಆಗಿನ ಕಾಲದಲ್ಲಿ ಜನ ತಮ್ಮ ಮುದಿವಯಸ್ಸಿನಲ್ಲಿ ಕಾಡಿಗೆ ಹೋಗಿ ನೆಲಸುತ್ತಿದ್ದರು. ದೇವರ ಧ್ಯಾನ ಮಾಡುತ್ತಾ, ವಿದ್ಯೆ ಕಲಿಯಲು ಬಂದವರಿಗೆ ವಿದ್ಯೆ ಕಲಿಸುತ್ತಾ ತಮ್ಮ ಉಳಿದ ಜೀವನವನ್ನು ಕಳೆಯುತ್ತಿದ್ದರು. ಜನ ಅಂತಹವರನ್ನು ಋಷಿಗಳೆಂದು ಕರೆಯುತ್ತಿದ್ದರು.

ಒಂದು ದಿನ ಆ ಮುದಿ ಋಷಿ ಹೊಳೆಯ ಬದಿಯಲ್ಲಿ ನಡೆದು ಹೋಗುತ್ತಿದ್ದಾಗ ಅವನಿಗೆ ಮರದ ಮೇಲೆ ಎರಡು ಹಕ್ಕಿಗಳು ಕುಳಿತಿದ್ದುದು ಕಾಣಿಸಿತು. ಅವು ಸಂತೋಷ ದಿಂದ ಪರಸ್ಪರ ಪ್ರೀತಿ ಮಾಡುತ್ತಿದ್ದವು. ಆ ದೃಶ್ಯವನ್ನು ಕಂಡು ಋಷಿಯ ಎದೆ ಹರ್ಷ ದಿಂದ ತುಂಬಿತು. ಅವನು ನಿಂತು ಆ ಹಕ್ಕಿಗಳನ್ನು ಹರಸಿದ.

ಅದೇ ಹೊತ್ತಿಗೆ ಆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಬೇಡನೂ ಆ ಹಕ್ಕಿಗಳನ್ನು ನೋಡಿದ. ಅವನ ಎದೆಯೂ ಹರ್ಷದಿಂದ ತುಂಬಿತು. ಆದರೆ ಅದರ ಕಾರಣವೇ ಬೇರೆ. "ಬೆಳಗಾಗ ಎಂತಹ ಅದೃಷ್ಟ ನನ್ನದು," ಬೇಡ ತನಗೆ ತಾನೇ ಹೇಳಿಕೊಂಡ. "ಇಲ್ಲಿ ಒಟ್ಟಿಗೆ ಎರಡು ಹಕ್ಕಿಗಳು ಎಷ್ಟು ತೆಪ್ಪಗೆ ಕುಳಿತಿವೆಯೆಂದರೆ ಅವುಗಳನ್ನು ನಾನು ಕಣ್ಣು ಮುಚ್ಚಿಯೂ ಕೆಡವಬಹುದು." ಬೇಡ ಬಿಲ್ಲನ್ನು ಹುರಿಮಾಡಿ, ಗುರಿಯಿಟ್ಟು ಬಾಣ ಬಿಟ್ಟ. ಆ ಬಡಪಾಯಿ ಹಕ್ಕಿಗಳಲ್ಲೊಂದು ಸತ್ತು ಕೆಳಗುರುಳಿತು. ಮೌನದಿಂದಿದ್ದ ಆ ಕಾಡು ಇದ್ದಕ್ಕಿದ್ದಂತೆ ಅದರ ಜತೆ ಹಕ್ಕಿಯ ಆರ್ತನಾದದಿಂದ ತುಂಬಿತು.

ತನ್ನ ಜತೆ ಹಕ್ಕಿ ಸತ್ತುದಕ್ಕೆ ಚೀರಿಡುತ್ತಿದ್ದ ಒಂಟಿ ಹಕ್ಕಿಯ ಗೋಳನ್ನು ಕಂಡು ಋಷಿಗೆ ಕನಿಕರವಾಯಿತು. ಅವನು ಬೇಡನ ಕಡೆ ತಿರುಗಿ, ದುಃಖದಿಂದ ಹೇಳಿದ, "ಸಂತೋಷದಲ್ಲಿದ್ದ ಆ ಅರಿಯದ ಹಕ್ಕಿಯನ್ನು ನೀನು ಹೇಗಾದರೂ ಕೊಂದೆ?" ದಯಾಳುವಾದ ಆ ಋಷಿಯ ಎದೆ ಕರಗಿ ಅವನು ಸತ್ತ ಹಕ್ಕಿಯನ್ನು ಕುರಿತು ಪ್ರೀತಿದುಃಖಗಳಿಂದ ಕೂಡಿದ ಒಂದು ಹಾಡನ್ನು ಹಾಡತೊಡಗಿದ. ಆ ಹಾಡು ಎಷ್ಟು ಸುಂದರವಾಗಿತ್ತೆಂದು ಅವನಿಗೇ ತಿಳಿಯದು. ಆದರೆ ಬ್ರಹ್ಮ ಅದನ್ನು ಕಂಡುಕೊಂಡ.

ಸೃಷ್ಟಿಕರ್ತನಾದ ಬ್ರಹ್ಮ ತ್ರಿಮೂರ್ತಿಗಳಲ್ಲೊಬ್ಬ. ಅವನು ಆಗ ರಾಮನ ಅದ್ಭುತ ಕಥೆಯನ್ನು ಹೇಳಬಲ್ಲ ಒಬ್ಬ ಕವಿಗಾಗಿ ಹುಡುಕುತ್ತಿದ . ಸತ್ತ ಹಕ್ಕಿಯನ್ನು ಕುರಿತು ಋಷಿಯ



ಕಾಡುಮೃಗಗಳ ನಡುವೆ ಒಂಟಿಯಾಗಿ ವಾಸಮಾಡಲು ಅವನಿಗೆ ಭಯವೆನಿಸುತ್ತಿರಲಿಲ್ಲ



ಮರದ ಮೇಲೆ ಎರಡು ಹಕ್ಕಿಗಳು ಪರಸ್ಪರ ಪ್ರೀತಿ ಮಾಡುತ್ತ ಕುಳಿತಿದ್ದುದು ಕಾಣಿಸಿತು

ದುಃಖಗೀತೆಯನ್ನು ಕೇಳಿದೊಡನೆಯೇ ಬ್ರಹ್ಮ ತನಗೆ ತಾನೇ ಹೇಳಿಕೊಂಡ, "ಇದೋ, ನಾನು ಹುಡುಕುತ್ತಿದ್ದ ಕವಿ ಕೊನೆಗೂ ಸಿಕ್ಕಿದ."

ಬ್ರಹ್ಮ ಋಷಿಗೆ ವಂದಿಸಿ, ಆತನಿಗೆ ರಾಮನ ದಿವ್ಯ ಜೀವನವನ್ನು ಕುರಿತು ಹೇಳಿದ. "ಆ ಮಹಾಪುರುಷನ ಕಥೆಯನ್ನು ಕಾವ್ಯ ರೂಪದಲ್ಲಿ ಹೇಳಬಹುದಾದವನು ನೀನೊಬ್ಬನೇ. ದಯವಿಟ್ಟು ಈ ಕೆಲಸವನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನೀನು ಅದನ್ನು ಮಾಡಿದ್ದಾದರೆ ಮುಂದೆ ಸಹಸ್ರಾರು ವರ್ಷಗಳವರೆಗೆ ಜನ ನಿನ್ನ ಕಾವ್ಯವನ್ನು ನೆನಪಿಟ್ಟುಕೊಂಡು ಹಾಡುತ್ತಾರೆ."

ಈ ಮಾತುಗಳನ್ನು ಕೇಳಿ ಋಷಿಯ ಮನಸ್ಸು ಕರಗಿತು. ರಾಮನ ಕಥೆಯನ್ನು ಕಾವ್ಯ ರೂಪದಲ್ಲಿ ಬರೆಯುವುದರಲ್ಲಿ ತನ್ನ ಉಳಿದ ಜೀವನವನ್ನು ಕಳೆಯುವುದಾಗಿ ಅವನು ನಿರ್ಧರಿಸಿದ. ಆ ಋಷಿಯ ಹೆಸರು ವಾಲ್ಮೀಕಿ. ರಾಮನನ್ನು ಕುರಿತು ಅವನು ಬರೆದ ಮಹಾಕಾವ್ಯಕ್ಕೆ ರಾಮಾಯಣವೆಂದು ಹೆಸರಾಯಿತು. ಆ ಮಹಾಕಾವ್ಯದ ಮೊದಲಿನ ಒಂದು ಸುಂದರ ಶ್ಲೋಕದಲ್ಲಿ ಬ್ರಹ್ಮ ಹೇಳಿದ ಮಾತು ಹೀಗಿದೆ:

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ
ತಾವತ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ ॥

ಇದರ ಅರ್ಥ:—

ಭೂಮಿಯ ಮೇಲೆ ಬೆಟ್ಟ ಗುಡ್ಡಗಳು ನಿಂತಿರುವವರೆಗೆ, ನದಿಗಳು ಹರಿಯುತ್ತಿರುವವರೆಗೆ ರಾಮಾಯಣದ ಕಥೆ ಲೋಕದಲ್ಲಿ ಪ್ರಚಾರದಲ್ಲಿರುತ್ತದೆ.



ದಶರಥನಿಗೆ ಚೆಲುವೆಯರಾದ ಮೂವರು ಹೆಂಡತಿಯರಿದ್ದರು

ರಾಮನ ಜನನ

ಬಹಳ ಹಿಂದೆ, ಅಯೋಧ್ಯೆಯಲ್ಲಿ ದಶರಥನೆಂಬ ಒಬ್ಬ ದೊಡ್ಡ ದೊರೆಯಿದ್ದ. ಅವನು ಎಷ್ಟು ಒಳ್ಳೆಯವನಾಗಿದ್ದನೆಂದರೆ ಯಾರೂ ಯಾವ ದೊರೆಯನ್ನೂ ಪ್ರೀತಿಸದಷ್ಟು ಜನ ಅವನನ್ನು ಪ್ರೀತಿಸುತ್ತಿದ್ದರು. ದಶರಥ ಶೂರ, ಪರಾಕ್ರಮಿ. ಜತೆಗೆ, ಅವನು ಘನವಂತ, ದಯಾಳು. ಭೂಲೋಕದ ಇತರ ದೊರೆಗಳು ಅವನಿಗೆ ಮನ್ನಣೆ ಕೊಡುತ್ತಿದ್ದರು, ದೇವತೆಗಳು ಅವನನ್ನು ಮರ್ಯಾದೆಯಿಂದ ಕಾಣುತ್ತಿದ್ದರು.

ದೇವತೆಗಳು ಅಂದರೆ ಯಾರು ಎಂದು ನೀವು ಕೇಳಬಹುದು. ಸ್ವರ್ಗದಲ್ಲಿ ವಾಸಿಸುತ್ತಿದ್ದ ಸಜ್ಜನರು ಅವರು. ಮುಪ್ಪು ಸಾವುಗಳಿಲ್ಲದೆ ಅವರು ಸದಾ ಸುಖಿಯಾಗಿ ಬಾಳುತ್ತಿದ್ದರು. ಅವರು ಸದಾ ಸುಖಿಯಾಗಿದ್ದರು ಅಂದರೆ ತಪ್ಪಾದೀತೇನೊ. ಯಾಕೆಂದರೆ, ಒಳ್ಳೆಯ ಜನ ಯಾವಾಗಲೂ ಕೆಟ್ಟವರ ಬಗ್ಗೆ ಚಿಂತಿಸುತ್ತಿರುತ್ತಾರೆ. ಜತೆಗೆ, ಆಗ ದೇವತೆಗಳು ಕ್ರೂರ ರಾಕ್ಷಸರಿಂದ ತೊಂದರೆಯನ್ನು ಅನುಭವಿಸುತ್ತಿದ್ದರು. ರಾಕ್ಷಸರು ಅಂದರೆ ಯಾರು? ಅವರ ದೊರೆ ರಾವಣ ಹೇಗೆ ಅವರಲ್ಲೆಲ್ಲ ಹೆಚ್ಚು ಶಕ್ತಿಶಾಲಿಯಾಗಿದ್ದ ಎಂದು ಮುಂದೆ ನೋಡೋಣ.

ದಶರಥನಿಗೆ ಮೂವರು ಹೆಂಡತಿಯರಿದ್ದರು. ಅವನು ಅವರನ್ನು ತುಂಬ ಪ್ರೀತಿಸುತ್ತಿದ್ದ. ಆಗಿನ ಕಾಲದಲ್ಲಿ ರಾಜರು ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳುತ್ತಿದ್ದರು. ದಶರಥನಿಗೆ ಸುಖ ಕೊಡಲು ಎಲ್ಲವೂ ಇತ್ತು. ಆದರೂ ಅವನು ಅಸುಖಿಯಾಗಿದ್ದ. ಇದಕೆ ಕಾರಣವೆಂದರೆ ಅವನಿಗೆ ಮಕ್ಕಳಿರಲಿಲ್ಲ. ಅವನಿಗೆ ವಯಸ್ಸಾಗುತ್ತಿತ್ತು. ಪ್ರಜೆಗಳನ್ನು ಆಳುವುದರಲ್ಲಿ ತನಗೆ ನೆರವಾಗಿ, ಅವರನ್ನು ಅಪಾಯದಿಂದ ಕಾಪಾಡಬಲ್ಲ ಒಬ್ಬ ಮಗನಿಗಾಗಿ ಅವನು ಹಾತೊರೆಯುತ್ತಿದ್ದ. ತಮಗೆ ಮಕ್ಕಳಿಲ್ಲದ್ದಕ್ಕೆ ಮೂವರು ರಾಣಿಯರಿಗೂ ದುಃಖವಾಗಿತ್ತು. ಅಯೋಧ್ಯೆಯ ಪ್ರಜೆಗಳಿಗೂ ಹಾಗೆಯೇ. "ಮುದಿದೊರೆ ಸತ್ತ ಮೇಲೆ ನಮ್ಮ ಪಾಡೇನು?" ಎಂದು ಅವರು ಕೇಳುತ್ತಿದ್ದರು. ದೊರೆ ಸಂತಾನಕ್ಕಾಗಿ ಅನೇಕ ವರ್ಷಕಾಲ ಪ್ರಾರ್ಥಿಸಿದ. ಕೊನೆಗೆ ದೇವರು ಅವನ ಇಚ್ಛೆಯನ್ನು ನೆರವೇರಿಸಿದ.

ಮೂವರು ರಾಣಿಯರೂ ಗಂಡುಮಕ್ಕಳನ್ನು ಹೆತ್ತರು. ಹಿರಿಯ ರಾಣಿ ಕೌಸಲ್ಯೆಯ ಮಗನಿಗೆ ರಾಮನೆಂದು ಹೆಸರಿಟ್ಟರು. ಕಿರಿಯವಳಾದ ಕೈಕೆಯ ಮಗ ಭರತ. ನಡುವಿನ ಸುಮಿತ್ರೆಯ ಮಕ್ಕಳು ಲಕ್ಷ್ಮಣ ಮತ್ತು ಶತ್ರುಘ್ನರು. ರಾಮ ಹುಟ್ಟಿದ ಆ ಸಂತೋಷದ ದಿವಸಕ್ಕೆ 'ರಾಮನವಮಿ'ಯೆಂದು ಹೆಸರಾಯಿತು. ದೊರೆಗೂ ರಾಣಿಯರಿಗೂ ಆನಂದವೋ ಆನಂದ. ತಮ್ಮ ದೊರೆಯ ಸೌಭಾಗ್ಯವನ್ನು ಕಂಡು ಅಯೋಧ್ಯೆಯ ಜನರೂ ಆನಂದ ಪಟ್ಟರು. ಆವೊತ್ತು ಅಯೋಧ್ಯೆಯಲ್ಲಿ ಎಲ್ಲೆಲ್ಲೂ ಆಟವಿನೋದಗಳು ನಡೆದವು. ಜನ ಹಾಡಿ ಕುಣಿದಾಡಿದರು. ಊರಿಗೆ ಊರೇ ದೀಪದಿಂದ ಬೆಳಗಿತು.


ನಾಲ್ವರು ಅಣ್ಣತಮ್ಮಂದಿರು

ದಶರಥನ ನಾಲ್ವರು ಮಕ್ಕಳೂ ಎತ್ತರಕ್ಕೆ, ಚೆಲುವಾಗಿ, ದಷ್ಟಪುಷ್ಟರಾಗಿ, ಶೂರರಾಗಿ ಬೆಳೆದರು. ಅವರು ಓದು ಬರಹದಲ್ಲಿ ಮುಂದಾಗಿದ್ದರು. ಆಟದಲ್ಲಿಯೂ ಅಷ್ಟೇ. ಆಗಿನ ಕಾಲದಲ್ಲಿ, ಹುಡುಗರು ಬಟ್ಟೆಯಿಂದ ಮಾಡಿದ ಚೆಂಡಾಡುತ್ತಿದ್ದರು. ಆದರೆ ಈ ರಾಜ ಕುಮಾರರ ನಿಜವಾದ ಆಟವೆಂದರೆ ಬೇಟೆ, ಕುದುರೆ ಸವಾರಿ, ಮುಷ್ಟಿ ಯುದ್ಧ, ಕತ್ತಿವರಸೆ, ಬಿಲ್ಲಾಟ. ಅವರ ಗುರುಗಳು ಋಷಿ ವಸಿಷ್ಠರು. ವಸಿಷ್ಠರು ಅವರಿಗೆ ವೇದ ಮುಂತಾದ ಪವಿತ್ರ ಗ್ರಂಥಗಳನ್ನು ಪಾಠ ಮಾಡಿಸುವುದರ ಜತೆಗೆ, ಕಾದಾಡುವುದನ್ನೂ ರಾಜ್ಯವಾಳುವು ದನ್ನೂ ಹೇಳಿಕೊಟ್ಟರು.



ಆಗಿನ ಕಾಲದಲ್ಲಿ ಹುಡುಗರು ಬಟ್ಟೆಯಿಂದ ಮಾಡಿದ ಚೆಂಡಾಡುತ್ತಿದ್ದರು

ನಾಲ್ವರು ಅಣ್ಣತಮ್ಮಂದಿರಲ್ಲಿ ರಾಮ ಲಕ್ಷ್ಮಣರು ಸದಾ ಒಟ್ಟಿಗಿರುತ್ತಿದ್ದರು. ಭರತ ಶತ್ರುಘ್ನರರು ಇನ್ನೊಂದು ಜೋಡಿ. ಹೀಗಂದ ಮಾತ್ರಕ್ಕೆ ಅಣ್ಣತಮ್ಮಂದಿರೆಲ್ಲರೂ ಪರಸ್ಪರ ಪ್ರೀತಿಸುತ್ತಿರಲಿಲ್ಲವೆಂದಲ್ಲ. ರಾಮ ಭರತರ ನಡುವೆ ಎಷ್ಟು ಪ್ರೀತಿಯಿತ್ತೆಂದು ಮುಂದೆ ನಿಮಗೆ ತಿಳಿಯುತ್ತದೆ. ಆದರೆ ಲಕ್ಷ್ಮಣ ಯಾವಾಗಲೂ ರಾಮನಿಗೆ ನಿಷ್ಠನಾಗಿದ್ದು ಹೋದ ಲ್ಲೆಲ್ಲಾ ಅವನನ್ನು ಹಿಂಬಾಲಿಸುತ್ತಿದ್ದ.



ಜನ ಹಾಡಿ ಕುಣಿದಾಡಿದರು. ಊರಿಗೆ ಊರೇ ದೀಪದಿಂದ ಬೆಳಗಿತು

ತನ್ನ ನಾಲ್ವರು ಮಕ್ಕಳೂ ಬೆಳೆದು ದೊಡ್ಡವರಾಗುತ್ತಿದ್ದುದನ್ನು ಕಂಡು ಮುದಿ ದೊರೆಗೆ ಸಂತೋಷ ಹಾಗೂ ಹೆಮ್ಮೆಯುಂಟಾಗುತ್ತಿತ್ತು. ರಾಜಕುಮಾರರು ಸಹ ತಂದೆಯನ್ನು ಪ್ರೀತಿಸುತ್ತಿದ್ದುದೇ ಅಲ್ಲದೆ ತಾವು ಅವನಿಗೆ ಒಳ್ಳೆಯ ಮಕ್ಕಳಾಗಿದ್ದೇವೆಂದು ಹೆಮ್ಮೆಪಡುತ್ತಿದ್ದರು. ದೊರೆಗೆ ಎಲ್ಲ ಮಕ್ಕಳ ಬಗ್ಗೆಯೂ ಪ್ರೀತಿಯಿದ್ದರೂ ಅವರಲ್ಲಿ ರಾಮ ಹೆಚ್ಚು ಅಚ್ಚುಮೆಚ್ಚು. ಯಾಕೆಂದರೆ ತಂದೆಯ ಇಷ್ಟಗಳನ್ನು ಅವನು ಅವು ಏನೆಂದು ಹೇಳುವ ಮೊದಲೇ ಪೂರೈಸುತ್ತಿದ್ದ.

ರಾಜಕುಮಾರರು ಹದಿನಾರು ವರ್ಷದವರಿದ್ದಾಗ ವಿಶ್ವಾಮಿತ್ರನೆಂಬ ಸುಪ್ರಸಿದ್ಧ ಋಷಿ ಅಯೋಧ್ಯೆಗೆ ಬಂದ. ಅಂತಹ ದೊಡ್ಡ ಋಷಿ ತನ್ನ ಅತಿಥಿಯಾಗಿ ಬಂದುದು ದಶರಥನಿಗೆ ತುಂಬಾ ಸಂತೋಷ ಕೊಟ್ಟಿತು. ದೊರೆ ಆತನನ್ನು ಆದರದಿಂದ ಬರಮಾಡಿಕೊಂಡು, ತನ್ನ ಸಂತೋಷದ ಭರದಲ್ಲಿ ಅವನಿಗೆ ಬೇಕಾದ ಸಹಾಯ ಮಾಡುವುದಾಗಿ ಮಾತು ಕೊಟ್ಟ. ವಿಶ್ವಾಮಿತ್ರ ತಾನು ತನ್ನ ಆಶ್ರಮದಲ್ಲಿ ಶಾಂತವಾಗಿ ವಾಸವಾಗಿರುವಾಗ ರಾಕ್ಷಸ ಬಂದು ಕಾಟ ಕೊಡುತ್ತಿರುವುದಾಗಿ ದಶರಥನಿಗೆ ದೂರು ಹೇಳಿದ.

ರಾಕ್ಷಸರು ಯಾರೆಂದು ಈಗ ನೋಡೋಣ. ಅವರು ತುಂಬ ಬಲಿಷ್ಠರೂ ಕುರೂಪಿಗಳೂ ಆದ ಕ್ರೂರಜನ. ಜನರಿಗೆ ಅವರನ್ನು ಕಂಡರೆ ಭಯ. ಲಂಕೆಯಲ್ಲಿ ರಾಜ್ಯವಾಳುತ್ತಿದ್ದ ಅವರ ದೊರೆ ರಾವಣ ಅವರಲ್ಲೆಲ್ಲಾ ತುಂಬ ಶಕ್ತಿಶಾಲಿಯಾದವನು. ಜನರಷ್ಟೇ ದೇವತೆಗಳು ಸಹ ಆತನಿಗೆ ಹೆದರಿ, ಅವನನ್ನು ದ್ವೇಷಿಸುತ್ತಿದ್ದರು. ಇಷ್ಟಾದರೂ ಅವನು ಹಲವಾರು ವರ್ಷ ಕಾಲ ಭಕ್ತಿಯಿಂದ ತಪಸ್ಸುಮಾಡಿ ದೇವರಿಂದ ಅನೇಕ ವರಗಳನ್ನು ಪಡೆದಿದ್ದ. ಈ ವರಗಳ ಫಲವಾಗಿ ಅವನು ಇದ್ದಿದ್ದೂ ಹೆಚ್ಚು ಶಕ್ತಿಶಾಲಿಯಾದ. ಅವನ ಸೊಕ್ಕು ಜಂಬ ತಡೆಯದಷ್ಟಾಯಿತು. ಇತರ ದೊರೆಗಳನ್ನು ಕಂಡರೆ ಅವನಿಗೆ ಅನಾದರ. ಜನರ ಬಗ್ಗೆ ಕ್ರೌರ್ಯದಿಂದ ವರ್ತಿಸುತ್ತಿದ್ದ. ಕಾಲ ಕಳೆದಂತೆ ಅವನ ಜಂಬ, ಕ್ರೌರ್ಯ, ಸ್ವಾರ್ಥಗಳು ಹೆಚ್ಚುತ್ತಾ ಹೋದವು. ಕೆಲಸದಲ್ಲಿ ತೊಡಗಿದ ಜನರನ್ನು, ಆಟವಾಡುವ ಮಕ್ಕಳನ್ನು, ಕೊನೆಗೆ ಆಶ್ರಮದ ಋಷಿಗಳನ್ನು ಅವನು ಪೀಡಿಸತೊಡಗಿದ. ಭಯಪೀಡಿತರಾದ ಜನ ಅವನಲ್ಲಿ ಯಾವುದೋ ಮಂತ್ರಶಕ್ತಿಯಿದೆ, ಅವನು ಹತ್ತು ತಲೆ, ಇಪ್ಪತ್ತು ಕೈಗಳ ದೈತ್ಯ ಎಂದೆಲ್ಲ ನಂಬತೊಡಗಿದರು.

ಈ ರಾಕ್ಷಸರನ್ನು ಬಗ್ಗುಬಡಿಯಲು ರಾಮನ ಸಹಾಯ ಕೇಳಿ ವಿಶ್ವಾಮಿತ್ರ ದಶರಥನಲ್ಲಿಗೆ ಬಂದಿದ್ದ. ವಿಶ್ವಾಮಿತ್ರನ ಕೋರಿಕೆಯನ್ನು ಕೇಳಿ ಮುದಿದೊರೆ ನಡುಗಿಹೋದ. ಹುಡುಗ ರಾಮನಿನ್ನೂ ಚೆನ್ನಾಗಿ ಪಳಗಿದ ರಾವಣನ ದುಷ್ಟ ಮಿತ್ರರಿಗೆ ಸರಿಸಾಟಿಯಲ್ಲವೆಂದು ದಶರಥ ಬಲ್ಲ. ತನ್ನ ಮುದ್ದು ಮಗನಿಗೆ ಏನು ಅಪಾಯ ತಗಲುವುದೋ ಎಂದು ಅವನು ಹೆದರಿದ. ರಾಮನನ್ನು ಕಳಿಸಿಕೊಡದಿದ್ದರೆ ಋಷಿಗೆ ಕೋಪ ಬರುವುದೆಂದು ಅವನು ಬಲ್ಲ. ಆದರೂ ಅವನನ್ನು ಕಳಿಸದೆ ಉಳಿಸಿಕೊಳ್ಳುವ ದೃಢ ಮನಸ್ಸು ಅವನದು.

ದೊರೆಯ ಉತ್ತರವನ್ನು ಕೇಳಿ ವಿಶ್ವಾಮಿತ್ರನ ಮುಖ ಕೋಪದಿಂದ ಕೆಂಪಾಯಿತು. ಆಗ ರಾಜಕುಮಾರರ ಗುರು ವಸಿಷ್ಠರು ದೊರೆಗೆ ಶಾಂತಿಯಿಂದ ಸಮಾಧಾನ ಹೇಳಿದರು:



ರಾವಣ ಹತ್ತು ತಲೆ, ಇಪ್ಪತ್ತು ಕೈಗಳ ದೈತ್ಯ ಎಂದು ಜನ ನಂಬಿದರು

"ರಾಮನ ಬಗ್ಗೆ ಚಿಂತೆ ಬೇಡ. ವಿಶ್ವಾಮಿತ್ರ ಎಷ್ಟು ಶಕ್ತಿಶಾಲಿಯೆಂದು ನಾನು ಬಲ್ಲೆ. ಯುದ್ಧ ವಿದ್ಯೆಯನ್ನು ಚೆನ್ನಾಗಿ ತಿಳಿದವನಾದ್ದರಿಂದ ಬೇಕೆಂದರೆ ಅವನೇ ಸ್ವತಃ ರಾಕ್ಷಸರನ್ನು ಸದೆ ಬಡಿಯಬಲ್ಲ. ಆದರೂ ಅವನು ರಾಮನನ್ನು ಕರೆದೊಯ್ಯುವೆನೆನ್ನುತ್ತಾನೆ. ತನಗೆ ತಿಳಿದ ಯುದ್ಧಕಲೆಯ ಗುಟ್ಟನ್ನು ರಾಮನಿಗೆ ತಿಳಿಸಿಕೊಡಬಯಸುವುದೇ ಇದಕ್ಕೆ ಕಾರಣವಿರಬೇಕು. ಹೆದರಬೇಡ, ದಶರಥ. ರಾಮನನ್ನು ವಿಶ್ವಾಮಿತ್ರನ ಜತೆ ಕಳಿಸಿಕೊಡು." ವಸಿಷ್ಠರ ಈ ಬುದ್ಧಿ ಮಾತುಗಳನ್ನು ಕೇಳಿ ರಾಮನನ್ನು ವಿಶ್ವಾಮಿತ್ರನ ಜತೆ ಕಳಿಸಿಕೊಡಲು ದೊರೆ ಒಪ್ಪಿದ.

ರಾಮನ ಸಂಗಡ ಲಕ್ಷ್ಮಣನೂ ಹೊರಡಲು ಸಿದ್ಧನಾದನೆಂದು ನೀವು ಈಗಾಗಲೇ ಊಹಿಸಿರಬೇಕು.

ವಿಶ್ವಾಮಿತ್ರನ ಜತೆ ಕಾಡಿನಲ್ಲಿ ಹೋಗುವಾಗ ರಾಜಕುಮಾರರು ಚೆನ್ನಾಗಿ ಕಾಲ ಕಳೆದರು. ವಿಶ್ವಾಮಿತ್ರ ಅವರಿಗೆ ಉದ್ದಕ್ಕೂ ದಾರಿಯಲ್ಲಿ ಹಲವಾರು ಕಥೆಗಳನ್ನು ಹೇಳಿದ್ದ. ಅದರಲ್ಲಿ ಕೆಲವು ರಾಮನ ಮನೆತನದ ಹಿಂದಿನ ದೊರೆಗಳದ್ದಾಗಿದ್ದವು. ನೀವು ಕಥೆ ಕೇಳಬಯಸುವಂತೆಯೇ ರಾಮನೂ ಆ ಕಥೆಗಳನ್ನು ಕೇಳಬಯಸಿದನೆಂಬುದರಲ್ಲಿ ಅನುಮಾನವಿಲ್ಲ. ರಾಮನ ಸಾಹಸದ ಜೀವನ ಹೀಗೆ ಷುರುವಾಯಿತು.

ಋಷಿಯಾದ ರಾಜ

ಹಿಂದೆ ಒಂದಾನೊಂದು ಕಾಲದಲ್ಲಿ, ವಿಶ್ವಾಮಿತ್ರ ಋಷಿಯಾಗುವ ಮೊದಲು ರಾಜನಾಗಿದ್ದ. ಅವನು ಬಲಿಷ್ಠನೂ ಸಮರ್ಥನೂ ಆಗಿದ್ದು, ಯುದ್ಧದಲ್ಲಿ ನಿಪುಣನೆಂದು ಹೆಸರಾಗಿದ್ದ. ಒಂದು ದಿನ ವಿಶ್ವಾಮಿತ್ರ ರಾಜ ಕಾಡಿನಲ್ಲಿ ಬೇಟೆಯಾಡುತ್ತಾ ಹೋಗುತ್ತಿದ್ದಾಗ ಒಬ್ಬ ಋಷಿಯ ಆಶ್ರಮಕ್ಕೆ ಬಂದ. ಅದನ್ನು ನೋಡಿ ತನಗೆ ಹಸಿವು ಬಳಲಿಕೆಗಳಾಗಿದ್ದುದರ ನೆನಪಾಗಿ ಅಲ್ಲಿಯೇ ವಿಶ್ರಮಿಸಿಕೊಳ್ಳೋಣವೆನ್ನಿಸಿತು. ಆ ಆಶ್ರಮ ದಶರಥನ ಮಕ್ಕಳ ಗುರುವಾದ ವಸಿಷ್ಠ ಋಷಿಗಳದ್ದು.

ವಸಿಷ್ಠ ಋಷಿಗಳಿಗೆ ವಿಶ್ವಾಮಿತ್ರ ರಾಜನನ್ನು ಕಂಡು ಸಂತೋಷವಾಯಿತು. ವಿಶ್ವಾಮಿತ್ರ ಆಶ್ರಮದಲ್ಲಿ ಕೊಂಚ ಹೊತ್ತು ವಿಶ್ರಮಿಸಿಕೊಂಡ. ಅಲ್ಲಿಂದ ಹೊರಡಲು ಅನುವಾಗುತ್ತಿದ್ದಾಗ ವಸಿಷ್ಠರು ಅವನನ್ನೂ ಅವನ ಸಂಗಡಿಗರನ್ನೂ ಊಟಮಾಡಿ ಹೋಗಿ ಎಂದು ಕೇಳಿಕೊಂಡರು. ಋಷಿಗಳು ಬಡವರು, ಗೆಡ್ಡೆಗೆಣಸು, ಹಣ್ಣುಹಂಪಲುಗಳ ಮೇಲೆ ಬದುಕುವವರು ಎಂದು ವಿಶ್ವಾಮಿತ್ರನಿಗೆ ಗೊತ್ತಿತ್ತು. ಅಂತಹ ವಸಿಷ್ಠರು ರಾಜನ ಇಡೀ ಪರಿವಾರಕ್ಕೆ ಹೇಗೆ ಊಟಕ್ಕೆ ಇಕ್ಕುವರು? ವಿಶ್ವಾಮಿತ್ರ ಬಹಳ ವಿನಯದಿಂದಲೇ ವಸಿಷ್ಠರ ಆಮಂತ್ರಣವನ್ನು ನಿರಾಕರಿಸಿದ. ಆದರೆ ವಸಿಷ್ಠರು ಬಲವಂತ ಮಾಡಿದರು. ವಿಶ್ವಾಮಿತ್ರ ಊಟಕ್ಕೆ ಉಳಿಯಲೇಬೇಕಾಯಿತು.

ಸದ್ಯದಲ್ಲಿಯೇ ದೊರೆಯ ಪರಿವಾರದ ಸಾವಿರಾರು ಜನರಿಗೆ ಅದ್ಭುತ ಔತಣ ಬಡಿಸಲಾಯಿತು. ಆ ರುಚಿಕಟ್ಟಾದ ಔತಣ ಉಣ್ಣುತ್ತ ಬಡ ಋಷಿಗೆ ಇಂತಹ ಔತಣ ಹಾಕಲು ಹೇಗೆ ಸಾಧ್ಯವಾಯಿತೆಂದು ವಿಶ್ವಾಮಿತ್ರ ಯೋಚಿಸತೊಡಗಿದ.

ತುಂಬ ಹೊತ್ತು ಯೋಚಿಸಿ ಉತ್ತರ ಹೊಳೆಯದೆ ಕೊನೆಗೆ ವಿಶ್ವಾಮಿತ್ರ ವಸಿಷ್ಠರನ್ನೇ ಅದರ ಗುಟ್ಟೇನೆಂದು ಕೇಳಿದ. ಮುದಿ ಋಷಿಗಳು ಬಾಗಿಲ ಹೊರಗೆ ನಿಂತಿದ್ದ ಒಂದು ಹಸುವಿನ ಕಡೆ ಬೊಟ್ಟುಮಾಡಿ ತೋರಿಸಿದರು. ಅದರ ಹೆಸರು ನಂದಿನಿ, ಅದು ದೈವಸಮಾನವಾದ ಕಾಮಧೇನುವಿನ ಹೊಟ್ಟೆಯಲ್ಲಿ ಹುಟ್ಟಿದ ಹಸು. ವಸಿಷ್ಠರ ಭಕ್ತಿ ಹಾಗೂ ಸದ್ಗುಣಗಳಿಗೆ ಮೆಚ್ಚಿ ದೇವರು ಅದನ್ನು ಅವರಿಗೆ ಬಹುಮಾನವಾಗಿ ಕೊಟ್ಟಿದ್ದ. ನಂದಿನಿ ವಸಿಷ್ಠರು ಏನನ್ನು ಬಯಸಿದರೂ ಅದನ್ನು ಕೊಡುತ್ತಿತ್ತು. ವಸಿಷ್ಠರಿಗೆ ತಮಗಾಗಿ ಏನೂ ಬೇಕಾಗಿರಲಿಲ್ಲ. ಯಾಕೆಂದರೆ ಅವರು ಋಷಿಗಳು, ಎಲ್ಲವನ್ನು ಬಿಟ್ಟು ತಪಸ್ಸು ಮಾಡಲು ಅವರು ಕಾಡು ಸೇರಿದ್ದರು. ಆದರೆ ಅವರು ಲೋಕಕಲ್ಯಾಣ ಮಾಡಲೆಂದು ಶಕ್ತಿಯನ್ನು ಬಯಸಿದ್ದರು. ಈ ಕಾರಣಕ್ಕಾಗಿ ದೇವರು ಅವರಿಗೆ ಇಷ್ಟಾರ್ಥಗಳನ್ನು ಸಲ್ಲಿಸುವ ಆ ಹಸುವನ್ನು ಕೊಟ್ಟಿದ್ದ. ವಸಿಷ್ಠರು ಅದನ್ನು ಕೇವಲ ಒಳ್ಳೆಯದಕ್ಕಷ್ಟೇ ಉಪಯೋಗಿಸುವರೆಂದು ದೇವರಿಗೆ ಗೊತ್ತಿತ್ತು.



ಆ ಹಸು ದೈವಸಮಾನವಾದ ಕಾಮಧೇನುವಿನ ಹೊಟ್ಟೆಯಲ್ಲಿ ಹುಟ್ಟಿದ ನಂದಿನಿ

ವಿಶ್ವಾಮಿತ್ರ ತಾನು ರಾಜನಾದ ಕಾರಣ ಆ ಹಸು ತನಗೆ ಹೆಚ್ಚು ಉಪಯೋಗವಾಗುವುದೆಂದು ಯೋಚಿಸಿದ. ನಂದಿನಿಯನ್ನು ಕೊಟ್ಟರೆ ಬದಲಾಗಿ ಅಪಾರ ಸಿರಿಸಂಪತ್ತುಗಳನ್ನು ಕೊಡುವುದಾಗಿ ಹೇಳಿದ. ವಸಿಷ್ಠರು ತಮ್ಮ ಮೆಚ್ಚಿನ ಹಸುವನ್ನು ತೊರೆಯಲು ಒಪ್ಪಲಿಲ್ಲ. ಆಗ ತನ್ನ ದೊರೆತನದ ಹಿರಿಮೆಯ ಬಗ್ಗೆ ಸೊಕ್ಕಿದ ವಿಶ್ವಾಮಿತ್ರ ಹಸುವನ್ನು ಬಲವಂತವಾಗಿ ಎಳೆದು ತನ್ನಿರೆಂದು ತನ್ನ ಜನರಿಗೆ ಅಪ್ಪಣೆ ಮಾಡಿದ.

ವಿಶ್ವಾಮಿತ್ರನ ಜನ ನಂದಿನಿಯನ್ನು ಹಿಡಿಯಲು ಹೋದಾಗ ಆ ಬಡಪಾಯಿ ಹಸು ತನ್ನ ದಣಿಯ ರಕ್ಷಣೆ ಬೇಡಿ ಅರಚತೊಡಗಿತು. ತಮ್ಮ ಪ್ರೀತಿಯ ಹಸುವಿನ ದುಃಸ್ಥಿತಿ, ವಿಶ್ವಾಮಿತ್ರನ ದುರಾಸೆಗಳನ್ನು ನೋಡಿದ ವಸಿಷ್ಠರು ಆತನಿಗೆ ತಕ್ಕ ಬುದ್ಧಿ ಕಲಿಸಲು ದೃಢ ಮನಸ್ಸು ಮಾಡಿದರು. ವಿಶ್ವಾಮಿತ್ರನ ಕಡೆಯವರನ್ನು ಸೋಲಿಸಲು ಬೇಕಾದಷ್ಟು ದೊಡ್ಡ ಸೇನೆಯನ್ನು ಕೊಡೆಂದು ನಂದಿನಿಗೆ ಅಪ್ಪಣೆ ಮಾಡಿದರು. ನಂದಿನಿ ಕೊಟ್ಟ ಮಾಯಾಸೇನೆ

ವಿಶ್ವಾಮಿತ್ರನ ಕಡೆಯವರನ್ನು ಹೊಡೆದು ಸೋಲಿಸಿತು. ವಿಶ್ವಾಮಿತ್ರ ನಾಚಿಕೆಯಿಂದ ಕಾಡು ಬಿಟ್ಟು ಓಡಿಹೋದ.

ತನ್ನ ರಾಜ್ಯಕ್ಕೆ ಹಿಂದಿರುಗಿದ ಮೇಲೆ ವಿಶ್ವಾಮಿತ್ರ ವಸಿಷ್ಠರ ಗೆಲುವು, ತನ್ನ ಸೋಲುಗಳನ್ನು ಕುರಿತು ಯೋಚಿಸಿದ. ಭಕ್ತಿ ತಪಸ್ಸುಗಳ ಶಕ್ತಿ ಎಷ್ಟೆಂಬುದನ್ನು ಅವನು ಕಣ್ಣಾರೆ ಕಂಡಿದ್ದ. ವಸಿಷ್ಠರಂತೆಯೇ ತಾನೂ ತಪಸ್ಸಿಗೆ ತೊಡಗಿ, ಅವರಿಗೆ ಅವಮಾನ ಮಾಡಲು ಅವರಿಗಿಂತ ಉತ್ತಮ ವರಗಳನ್ನು ಪಡೆಯುವುದಾಗಿ ನಿರ್ಧರಿಸಿದ.

ವಿಶ್ವಾಮಿತ್ರ ದೀರ್ಘಕಾಲ ಭಕ್ತಿಯಿಂದ ತಪಸ್ಸು ಮಾಡಿದ್ದರ ಫಲವಾಗಿ ದೇವರಿಗೆ ಮೆಚ್ಚಿಗೆಯಾಗಿ ವಿಶ್ವಾಮಿತ್ರ ಕೋರಿದ ವರ ಸಿಕ್ಕಿತು. ನಾಡಿನಲ್ಲಿ ಅವನಿಗೆ ಸಮಾನರಾದವರು ಇನ್ನೊಬ್ಬರಿಲ್ಲವೆಂಬಂತೆ ದೇವರು ಅವನನ್ನು ಧನುರ್ವಿದ್ಯೆಯಲ್ಲಿ ನಿಪುಣನನ್ನಾಗಿ ಮಾಡಿದ. ವಿಶ್ವಾಮಿತ್ರನಿಗೆ ಸಂತೋಷವಾಯಿತು. ತಾನಿನ್ನು ವಸಿಷ್ಠರನ್ನು ಸುಲಭವಾಗಿ ಸೋಲಿಸಬಹುದು ಎಂದುಕೊಂಡು, ದೊಡ್ಡ ಸೇನೆಯೊಂದಿಗೆ ವಸಿಷ್ಠರ ಆಶ್ರಮಕ್ಕೆ ದಾಳಿಯಿಟ್ಟು, ಆ ಶಾಂತ ಸ್ಥಳವನ್ನು ಸಂಪೂರ್ಣವಾಗಿ ನಾಶಮಾಡಿದ. ಕಾಡಿನ ಪ್ರಾಣಿಗಳ ಗೋಳನ್ನು ಕಂಡು ವಸಿಷ್ಠರಿಗೆ ದುಃಖವಾಯಿತು. ಇತರ ಋಷಿಗಳು ಅವರಿಗೆ ಮೊರೆಯಿಟ್ಟರು. ಆಗ ವಸಿಷ್ಠರು ಒಂದು ಕೋಲನ್ನೆತ್ತಿಕೊಂಡು, ತಮ್ಮೆಲ್ಲ ದೈವಿಕಶಕ್ತಿಯಿಂದ ಅದು ವಿಶ್ವಾಮಿತ್ರನನ್ನೂ ಆತನ ಕಡೆಯವರನ್ನೂ ಅಟ್ಟಿಸಿಕೊಂಡು ಹೋಗುವಂತೆ ಮಾಡಿದರು. ವಿಶ್ವಾಮಿತ್ರನ ಸೇನೆ ಮಣ್ಣು ಮುಕ್ಕಿತು.

ಈಗ ಕೊನೆಗೂ ವಿಶ್ವಾಮಿತ್ರನಿಗೆ ನಿಜವಾದ ಭಕ್ತಿಯ ಅರ್ಥ ದೇವರ ಮೇಲಿನ ಪ್ರೀತಿಗಾಗಿ ದೇವರ ಧ್ಯಾನ ಮಾಡುವುದೇ ಹೊರತು, ಸ್ವಂತಕ್ಕಾಗಿ ಏನನ್ನಾದರೂ ಪಡೆಯುವುದಕ್ಕಲ್ಲ ಎಂದು ಅರಿವಾಯಿತು. ಆಮೇಲೆ ಅವನು ದೀರ್ಘಕಾಲ ಶ್ರದ್ಧೆಯಿಂದ ತಪಸ್ಸು ಮಾಡಿದ. ಈ ಸಲ ದೇವರು ಆತನ ತಪಸ್ಸಿಗೆ ನಿಜವಾಗಿ ಮೆಚಿ , ಅವನನ್ನು ಋಷಿಯನ್ನಾಗಿ ಮಾಡಿದ.



ವಸಿಷ್ಠರ ಕೋಲು ವಿಶ್ವಾಮಿತ್ರನನ್ನೂ ಅವನ ಕಡೆಯವರನ್ನೂ ಅಟ್ಟಿಸಿಕೊಂಡು ಹೋಯಿತು

ಸೀತೆಯನ್ನು ಗೆದ್ದದ್ದು

ವಿಶ್ವಾಮಿತ್ರನೂ ರಾಜಕುಮಾರರೂ ಅನೇಕ ದಿನಗಳ ಕಾಲ ನಡೆದು ನಡೆದು ಒಂದು ದಟ್ಟವಾದ ಕಾಡಿಗೆ ಬಂದರು. ಅಲ್ಲಿ ತಕ್ಷಣ ಅವರ ಸುತ್ತಲೂ ಕಲ್ಲು ಬಂದು ಬೀಳತೊಡಗಿತು. ಕತ್ತೆತ್ತಿ ನೋಡಿದರೆ ಒಬ್ಬ ಭೂತಾಕಾರದ ವಿಕಾರರೂಪಿ ರಾಕ್ಷಸಿ ಮೇಲೆ ಮೋಡಗಳ ಕಡೆಯಿಂದ ಅವರ ಮೇಲೆ ಕಲ್ಲು ತೂರುತ್ತಾ ಅವರ ಕಡೆಗೇ ನುಗ್ಗಿ ಬರುತ್ತಿದ್ದುದು ಕಾಣಿಸಿತು.

" ಯಾರದು? " ಎಂದು ರಾಮ ಕೇಳಿದ.

"ಅವಳು ತಾಟಕಿ. ಈ ಕಾಡಿನ ಋಷಿಗಳಿಗೆಲ್ಲ ಅವಳು ಮಹಾ ಭೀತಿಯಾಗಿದ್ದಾಳೆ. ಅನೇಕ ಮಂತ್ರತಂತ್ರಗಳನ್ನು ಬಲ್ಲಳು. ಅವಳು ಅವನ್ನು ಅವರ ಮೇಲೆ ಪ್ರಯೋಗಿಸುತ್ತಾಳೆ. ನೀನು ರಾಜಕುಮಾರನಾದ ಕಾರಣ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವುದು ನಿನ್ನ ಕರ್ತವ್ಯ" ಎಂದು ವಿಶ್ವಾಮಿತ್ರಋಷಿ ರಾಮನಿಗೆ ವಿವರಿಸಿ ಹೇಳಿ, ತಾಟಕಿಯನ್ನು ಕೊಂದು ಋಷಿಗಳನ್ನು ಅಪಾಯದಿಂದ ಪಾರು ಮಾಡೆಂದು ಒತ್ತಾಯ ಮಾಡಿದ.

ರಾಮ ಬತ್ತಳಿಕೆಯಿಂದ ಒಂದು ಬಾಣವನ್ನು ಸೆಳೆದು, ಒಂದು ಕ್ಷಣ ಅನುಮಾನಿಸಿ ಕೇಳಿದ, "ಒಬ್ಬ ಹೆಂಗಸನ್ನು ಕೊಲ್ಲೆಂದು ನೀವು ಹೇಗೆ ತಾನೆ ಹೇಳುತ್ತಿದ್ದೀರಿ?"

ವಿಶ್ವಾಮಿತ್ರಋಷಿ ಹೇಳಿದ, "ಈ ವಿಷಯದಲ್ಲಿ ಗಂಡಸು, ಹೆಂಗಸು ಎಂಬ ವ್ಯತ್ಯಾಸವಿಲ್ಲ. ತಾಟಕಿ ನಿರ್ದಯದಿಂದ ಅನೇಕ ಜನರನ್ನು ಕೊಂದಿದ್ದಾಳೆ. ಅನುಮಾನಿಸಬೇಡ, ರಾಮ."

ವಿಶ್ವಾಮಿತ್ರನ ಒತ್ತಡದ ನುಡಿಗಳನ್ನು ಕೇಳಿ ರಾಮ ಬಿಲ್ಲು ಹೂಡಿ, ತಾಟಕಿಯ ಕಡೆ ಗುರಿಯಿಟ್ಟು ಹೊಡೆದ. ಆ ದೈತ್ಯಾಕಾರದ ರಾಕ್ಷಸಿ ನೆಲಕ್ಕೆ ಉರುಳಿಬಿದ್ದಳು. ರಾಮನ ಬಿಲ್ಲುಗಾರಿಕೆಯನ್ನು ಕಂಡು ಋಷಿಗೆ ಸಂತೋಷವಾಯಿತು. ಆ ಸಂತೋಷದಲ್ಲಿ ಅವನು ರಾಮನಿಗೆ ಧನುರ್ವಿದ್ಯೆಯ ಇನ್ನೂ ಹಲವಾರು ಗುಟ್ಟುಗಳನ್ನು ಹೇಳಿಕೊಟ್ಟ.

ತಾಟಕಿಯನ್ನು ಕೊಂದ ಮೇಲೆ ರಾಜಕುಮಾರರು ಋಷಿಯೊಂದಿಗೆ ಹಲವಾರು ಹೊಸ ಹೊಸ ಸ್ಥಳಗಳಿಗೆ ಭೇಟಿ ಕೊಟ್ಟರು. ಹೀಗೆ ಪ್ರಯಾಣ ಮಾಡುತ್ತಾ ಕೊನೆಗೆ ಮಿಥಿಲಾಪಟ್ಟಣಕ್ಕೆ ಬಂದರು.

ಮಿಥಿಲೆಯ ಜನಕ ಒಬ್ಬ ರಾಜರ್ಷಿ. ದೇವಮಾನವರಿಬ್ಬರಿಂದಲೂ ಅವನು ಗೌರವ ಪಡೆದಿದ್ದ. ಅವನಿಗೆ ಸೀತೆಯೆಂಬ ಮಗಳಿದ್ದಳು. ಅವಳು ಮಹಾ ಚೆಲುವೆ. ಅವಳು ಚೆಲುವಾಗಿದ್ದಷ್ಟೇ ಗುಣವಂತೆಯೂ ಆಗಿದ್ದಳು. ಜನರಿಗೆ ಅವಳನ್ನು ಕಂಡರೆ ಹೆಮ್ಮೆ. ಅವನು



ತಾಟಕಿ ಕಾಡಿನ ಋಷಿಗಳಿಗೆಲ್ಲಾ ದೊಡ್ಡ ಭೀತಿಯಾಗಿದ್ದಳು



ದೇಶದಲ್ಲಿ ಸೀತೆಯಷ್ಟು ಚೆಲುವೆಯಾದ ಇನ್ನೊಬ್ಬ ರಾಜಕುಮಾರಿಯಿರಲಿಲ್ಲ

ನಾಡಿನಲ್ಲಿ ಅತ್ಯಂತ ಉತ್ತಮನೂ ಪರಾಕ್ರಮಿಯೂ ಆದವನಿಗೆ ಅವಳನ್ನು ಕೊಟ್ಟು ಮದುವೆ ಮಾಡಬಯಸಿದ್ದ. ಆದರೆ ಅವಳಿಗೆ ಯೋಗ್ಯನಾದ ವರ ಯಾರೆಂದು ಹೇಗೆ ಪತ್ತೆಹಚು ವುದು? ಜನಕನಿಗೆ ತನ್ನಲ್ಲಿದ್ದ ಶಿವ ಧನುಸ್ಸಿನ ನೆನಪಾಯಿತು. ಆ ಧನುಸ್ಸಿಗೆ ಹೆದೆಯೇರಿಸುವ ಮೊತ್ತಮೊದಲ ರಾಜಕುಮಾರನಿಗೆ ಅವಳನ್ನು ಕೊಟ್ಟು ಮದುವೆ ಮಾಡುವುದಾಗಿ ಅವನು ಡಂಗುರ ಸಾರಿಸಿದ್ದ.

ಶಿವ ಧನುಸ್ಸು ಎಷ್ಟು ದೊಡ್ಡದಾಗಿತ್ತೆಂದರೆ ಹಲವರು ಒಟ್ಟಾಗಿ ಅದಕ್ಕೆ ಹೆದೆಯೇರಿ ಸುವುದು ಹಾಗಿರಲಿ, ಅದನ್ನು ಅಲ್ಲಾಡಿಸಲು ಸಹ ಆಗುತ್ತಿರಲಿಲ್ಲ. ಹಲವಾರು ವರ್ಷಗಳ ಹಿಂದೆ ಶಿವ ಅದನ್ನು ಜನಕನ ತಂದೆಗೆ ಕೊಟ್ಟಿದ್ದ.

ಆ ಧನುಸ್ಸಿನ ವಿಷಯವಾಗಿ ವಿಶ್ವಾಮಿತ್ರ ಕೇಳಿದ್ದ. ಅವನು ರಾಜಕುಮಾರರನ್ನು ಜನಕರಾಜನಲ್ಲಿಗೆ ಕರೆದೊಯ್ದು, ಅವರು ಯಾರೆಂದು ಪರಿಚಯ ಮಾಡಿಕೊಟ್ಟ. ಆಮೇಲೆ "ಈ ಹುಡುಗರು ನಿನ್ನ ಧನುಸ್ಸನ್ನು ನೋಡಬಯಸುತ್ತಾರೆ" ಎಂದು ಹೇಳಿದ.

ಜನಕ ಅನುಮಾನಿಸಿದ, ಏಕೆಂದರೆ ಆ ಪ್ರಚಂಡ ಧನುಸ್ಸಿನ ಮುಂದೆ ಅನೇಕ ಕ್ಷತ್ರಿಯ ರಾಜರು ನಡುಗಿಹೋಗಿದ್ದುದನ್ನು ಅವನು ನೋಡಿದ್ದ. "ಈ ರಾಜಕುಮಾರರಿಗಿನ್ನೂ ಚಿಕ್ಕ ವಯಸ್ಸು. ಇಷ್ಟು ಕೋಮಲರಾದವರಿಗೆ ಬಿಲ್ಲನ್ನು ಎತ್ತುವುದು ಹೇಗೆ ಸಾಧ್ಯ?" ಎಂದು ಯೋಚಿಸಿದ. ಆದರೆ ಋಷಿಯ ಮಾತನ್ನು ತೆಗೆದುಹಾಕುವಂತಿರಲಿಲ್ಲ. ಬಿಲ್ಲನ್ನು ಹೊರ ತರುವಂತೆ ತನ್ನ ಜನರಿಗೆ ಅಪ್ಪಣೆ ಮಾಡಿದ.


ಅನೇಕ ಜನ ಸೇರಿ ಆ ದೊಡ್ಡ ಬಿಲ್ಲಿದ್ದ ಅಸಾಧ್ಯವಾದ ಪೆಟ್ಟಿಗೆಯನ್ನು ಎಳೆದು ತಂದರು. ಅದನ್ನು ನೋಡಿ ರಾಜಕುಮಾರರಿಗೆ ಮೈ ನವಿರೆದ್ದಿತು.

ರಾಮು ಪೆಟ್ಟಿಗೆ ತೆಗೆಯಬಹುದೆ ಎಂದು ಕೇಳಿದ. ಋಷಿ ನಕ್ಕು ತಲೆ ಅಲ್ಲಾಡಿಸಿದ.

ರಾಮು ಆ ಹೆಬ್ಬಿಲ್ಲನ್ನು ಅತ್ಯಂತ ಆಶ್ಚರ್ಯದಿಂದ ನೋಡುತ್ತಾ ನಿಂತುಕೊಂಡ. ಜನಕ ವಿಶ್ವಾಮಿತ್ರನ ಕಡೆ ತಿರುಗಿ ಹೇಳಿದ: "ಅಬ್ಬಾ! ಈ ಬಿಲ್ಲಿನಿಂದಾಗಿ ಅದೆಷ್ಟು ತಾಪತ್ರಯ ಪಡಬೇಕಾಯಿತು! ಕ್ಷತ್ರಿಯ ರಾಜರಿಗೆಲ್ಲ ಅವರಿಗೆ ಇದಕ್ಕೆ ಹೆದೆಯೇರಿಸುವ ಕಷ್ಟ ಕೊಟ್ಟೆ ನೆಂದು ನನ್ನ ಮೇಲೆ ಕೋಪ. ಅದರಿಂದಾಗಿ ಅನೇಕ ವರ್ಷಗಳಿಂದ ನನ್ನ ಮೇಲೆ ಯುದ್ಧ ನಡೆಸಿದ್ದಾರೆ. ಪ್ರತಿಯೊಬ್ಬ ಕ್ಷತ್ರಿಯ ರಾಜನಿಗೂ ಸೀತೆಯ ಕೈ ಹಿಡಿಯುವ ಬಯಕೆ. ಬಿಲ್ಲಿಗೆ ಹೆದೆಯೇರಿಸಲು ಪ್ರಯತ್ನ ಪಟ್ಟವರು ಅದೆಷ್ಟು ಮಂದಿಯೊ! ಆದರೆ ಒಬ್ಬ ರಿಗಾದರೂ ಇದನ್ನು ಎತ್ತಲು ಸಹ ಆಗಿಲ್ಲ. ಇದಕ್ಕೆ ಹೆದೆಯೇರಿಸಬಲ್ಲವರು ಇಡೀ ಜಗತ್ತಿ ನಲ್ಲಿಯೇ ಇಲ್ಲವೇನೊ ಎಂದು ಅನುಮಾನ ಉಂಟಾಗಿದೆ. ಮನುಷ್ಯಮಾತ್ರದವನು ಶಿವನ ಧನುಸ್ಸನ್ನು ಎತ್ತಬಲ್ಲನೆ? ಪ್ರಾಯಶಃ ಈ ಪರೀಕ್ಷೆ ಒಡ್ಡಿದುದು ನನ್ನ ಮೂರ್ಖತನವೇನೊ!"

ರಾಮು ವಿನಯದಿಂದ ಕೇಳಿದ, "ನಾನು ಎತ್ತಬಹುದೆ?"


ಜನಕರಾಜ ಹೇಳಿದ, "ಖಂಡಿತ ಪ್ರಯತ್ನಿಸಬಹುದು."



ಅನೇಕ ಜನ ಸೇರಿ ಆ ದೊಡ್ಡ ಬಿಲ್ಲಿದ್ದ ಪೆಟ್ಟಿಗೆಯನ್ನು ಎಳೆದು ತಂದರು

ಎಲ್ಲರೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು. ಆದರೆ ವಿಶ್ವಾಮಿತ್ರನ ಹೊರತು ಬೇರೆ ಯಾರಿಗೂ ರಾಮ ಅದನ್ನು ಎತ್ತಬಹುದೆಂದು ಅನಿಸಿರಲಿಲ್ಲ. ಇದ್ದಕ್ಕಿದ್ದಂತೆ ಆಕಾಶವನ್ನು ಮುಟ್ಟುವಷ್ಟು ದೊಡ್ಡದಾದ ಒಂದು ಭೀಕರ ಶಬ್ದ ಗಾಳಿಯನ್ನು ಸೀಳಿತು. ಸಮುದ್ರಗಳು ಭೋರ್ಗರೆದವು, ನದಿಗಳು ನೊರೆಗರೆದವು, ಪರ್ವತಗಳು ನಡುಗಿದವು, ಇಡೀ ಭೂಮಿಯೇ ಕಂಪಿಸಿತು.

ರಾಮ ಬಿಲ್ಲನ್ನೆತ್ತಿ ಅದಕ್ಕೆ ಹೆದೆಯೇರಿಸಲೆಂದು ಬಗ್ಗಿಸಿದಾಗ ಅದನ್ನು ಎರಡು ತುಂಡಾಗಿ ಮುರಿದಿದ್ದ. ರಾಮ ಮುಖ ಕೆಂಪಗೆ ಮಾಡಿಕೊಂಡು ಬಿಲ್ಲಿನ ತುಂಡುಗಳನ್ನು ಕೈಯಲ್ಲಿ ಹಿಡಿದು ನಿಂತಿರುವಾಗ ಜನಕನ ಕಣ್ಣಿಂದ ಆನಂದಬಾಷ್ಪ ಹರಿಯುತ್ತಿತ್ತು.



ರಾಮ ಆ ಬಿಲ್ಲನ್ನು ಎರಡು ತುಂಡಾಗಿ ಮುರಿದ

ಆಸ್ಥಾನದಲ್ಲಿ ಎಲ್ಲರಿಗೂ ಆಶ್ಚರ್ಯದಿಂದ ಉಸಿರು ಬಿಗಿಯಿತು. ಕೊನೆಗೂ ವೀರನೊಬ್ಬ ಬಂದು ತನ್ನ ಮೆಚ್ಚಿನ ಮಗಳ ಕೈ ಹಿಡಿಯಲು ಯೋಗ್ಯನೆಂದು ಸಾಧಿಸಿ ತೋರಿಸಿದುದಕ್ಕೆ ಜನಕರಾಜನಿಗೆ ಸಂತೋಷವಾಗಿತ್ತು.

ವಿಷ್ಣು ಧನುಸ್ಸು

ರಾಮನ ವಿಜಯದ ಸುದ್ದಿಯನ್ನು ಕೇಳಿದ ತಂದೆ ದಶರಥ ತನ್ನ ಪತ್ನಿಯರು ಹಾಗೂ ಪರಿವಾರದ ಜನರೊಂದಿಗೆ ಮಿಥಿಲೆಗೆ ಧಾವಿಸಿದ.

ಜನಕ ಅವನನ್ನು ಆನಂದದಿಂದ ಎದುರುಗೊಂಡ. ರಾಜಯೋಗ್ಯವಾದ ವೈಭವದೊಂದಿಗೆ ವಿವಾಹ ನೆರವೇರಿತು. ರಾಮ ಸೀತೆಯ ಕೈ ಹಿಡಿದ. ಲಕ್ಷ್ಮಣ ಸೀತೆಯ ತಂಗಿ ಊರ್ಮಿಳೆಯನ್ನು ಮದುವೆಯಾದ. ಭರತ, ಶತ್ರುಘ್ನರು ಮಾಂಡವಿ, ಶ್ರುತಕೀರ್ತಿಯರನ್ನು ಮದುವೆಯಾದರು. ಮದುವೆಯ ಸಮಾರಂಭಗಳೆಲ್ಲವೂ ಮುಗಿದ ಮೇಲೆ ದಶರಥ ಜನಕನಿಂದ ಬೀಳ್ಕೊಂಡ. ಮಕ್ಕಳು ಸೊಸೆಯರೊಂದಿಗೆ ಅವನು ಮನೆಯ ಕಡೆ ನಡೆದಾಗ ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅವರು ಅಯೋಧ್ಯಾಮುಖವಾಗಿ ಅರೆದಾರಿ ಬಂದಿದ್ದಾಗ, ಎದುರಿಗೆ ಪರಶುರಾಮನೆಂಬ ಒಬ್ಬ ಋಷಿ ಅವರನ್ನು ತಡೆದ. ಅವನು ಇದ್ದಕ್ಕಿದ್ದಂತೆಯೇ ಅವರ ಮುಂದೆ ಕಾಣಿಸಿಕೊಂಡಿದ್ದ. ಅವನ ಕೈಯಲ್ಲಿ ಒಂದು ದೊಡ್ಡ ಬಿಲ್ಲಿತ್ತು, ಮುಖ ಕೋಪದಿಂದ ಕೆಂಪಾಗಿತ್ತು.

ಪರಶುರಾಮ ತಿರಸ್ಕಾರದಿಂದಲೇ ರಾಮನಿಗೆ ಹೇಳಿದ, "ಶಿವಧನುಸ್ಸು ನಿನಗೆ ತುಂಬ ಸುಲಭವಾಗಿತ್ತೆಂದು ಕೇಳಿದೆ. ಇದೋ, ವಿಷ್ಣು ಧನುಸ್ಸು ಬಾ, ಧೈರ್ಯವಿದ್ದರೆ ಪ್ರಯತ್ನಿಸಿ ನೋಡು." ಪರುಶುರಾಮ ಬಿಲ್ಲನ್ನು ರಾಮನ ಕೈಗೆ ತಳ್ಳಿ, ಅವನ ಕಡೆ ಕೋಪದಿಂದ ದುರುಗುಟ್ಟಿ ನೋಡಿದ.

ಪರುಶುರಾಮ ಜಮದಗ್ನಿಯೆಂಬ ಋಷಿಯ ಮಗ. ಜಮದಗ್ನಿ ತಪಸ್ಸಿನಲ್ಲಿದ್ದಾಗ ಒಬ್ಬ ದೊರೆ ಅವನನ್ನು ಕೊಂದಿದ್ದ. ಆ ದೊರೆಯ ಮೇಲೆ ಸೇಡು ತೀರಿಸಿಕೊಳ್ಳಲು ದೇಶದಲ್ಲಿರುವ ಎಲ್ಲ ಕ್ಷತ್ರಿಯರಾಜರನ್ನು ಕೊಲ್ಲುವುದಾಗಿ ಪರಶುರಾಮ ಶಪಥ ಮಾಡಿದ್ದ. ದಶರಥನಿಗೆ ಪರಶುರಾಮನ ಶಪಥ ವಿಷಯ ತಿಳಿದಿತ್ತು. ಅವನು ರಾಮನ ರಕ್ಷಣೆಯ ಬಗ್ಗೆ ಹೆದರಿದ್ದ. ಈಗ ಪರಶುರಾಮ ಎದುರಿಗೆ ಬಂದು ನಿಂತದ್ದನ್ನು ನೋಡಿ ಅವನ ಮುಖ ಭಯದಿಂದ ಬಿಳಿಚಿಕೊಂಡಿತು.

ಪರಶುರಾಮ ತನ್ನ ಶಪಥವನ್ನು ಉಳಿಸಿಕೊಳ್ಳಲು ಕಷ್ಟಪಟ್ಟು ಒಳ್ಳೆಯ ಯೋಧನಾಗಿದ್ದ. ವಿಶ್ವಾಮಿತ್ರನಂತೆಯೇ ಆತನೂ ಧನುರ್ವಿದ್ಯೆಯಲ್ಲಿ ನಿಪುಣನಾಗಲು ದೀರ್ಘಕಾಲ ತಪಸ್ಸು ಮಾಡಿ ದೇವರಿಂದ ವರ ಗಿಟ್ಟಿಸಿಕೊಂಡಿದ್ದ. ಆಮೇಲೆ ಒಬ್ಬರಾದ ಮೇಲೆ ಒಬ್ಬರಂತೆ ಕ್ಷತ್ರಿಯ ರಾಜರನ್ನು ಹುಡುಕಿಕೊಂಡುಹೋಗಿ ಕೊಂದಿದ್ದ. ಹಾಗೆ ಕೊಲ್ಲಲ್ಪಟ್ಟವರ ತಲೆ ಎಣಿಸುವುದು ಅವನಿಗೊಂದು ಆಟವಾಗಿತ್ತು. ಈಗ ಅವನು ತನ್ನ ದೊಡ್ಡ ಪಟ್ಟಿಗೆ ಇನ್ನೂ ಒಂದು ತಲೆ ಸೇರುವುದು ಖಂಡಿತವೆಂಬ ಜಂಬದಿಂದ ರಾಮನ ಮುಂದೆ ನಿಂತಿದ್ದ. ಪರಶುರಾಮನ ವಿಷ್ಣುಧನುಸ್ಸು ಶಿವಧನುಸ್ಸಿನಂತೆಯೇ ಅಗಾಧವಾದದ್ದೂ ಬಲವಾದದ್ದೂ ಆಗಿತ್ತು. ಅದನ್ನು ವಿಷ್ಣು ಪರಶುರಾಮನ ತಂದೆಗೆ ಹಲವಾರು ವರ್ಷಗಳ ಹಿಂದೆ ಕೊಟ್ಟಿದ್ದ.



ಅವನ ಕೈಯಲ್ಲಿ ದೊಡ್ಡ ಬಿಲ್ಲಿತ್ತು. ಮುಖ ಕೋಪದಿಂದ ಕೆಂಪಾಗಿತ್ತು

ಪರಶುರಾಮ ರಾಮನ ಕಡೆ ಕ್ರೂರನಾಗಿ ನೋಡಿದ. ಆದರೆ ರಾಮು ಮಾತ್ರ ಮೃದುವಾಗಿ ನಕ್ಕ. ಪರಶುರಾಮನ ಕೈಯಿಂದ ಬಿಲ್ಲನ್ನು ಸುಲಭವಾಗಿ ತೆಗೆದುಕೊಂಡು, ಅದಕ್ಕೆ ಬಾಣ ಹೂಡುತ್ತಾ, "ಹೇಳು, ಎಲ್ಲಿಗೆ ಗುರಿಯಿಡಲಿ? ನಿನ್ನ ಎದೆಗೆ ಇಡಲೆ? ಒಮ್ಮೆ, ಬಿಲ್ಲಿಗೆ ಬಾಣ ಹೂಡಿದ ಮೇಲೆ ಅದನ್ನು ಹೊಡೆದೇ ತೀರಬೇಕೆಂದು ನಿನಗೆ ಗೊತ್ತಿದೆ" ಅಂದ ರಾಮು.

ರಾಮು ಅಷ್ಟು ಸುಲಭವಾಗಿ ಬಿಲ್ಲು ತೆಗೆದುಕೊಂಡು ಕೈಯಾಡಿಸಿದ್ದನ್ನು ನೋಡಿ ಪರಶುರಾಮ ಬೆಚ್ಚಿದ. ಅವನು ಕೊಂಚ ಹೊತ್ತು ನಿಶ್ಚಲನಾಗಿ ನಿಂತಿದ್ದ. ಆಮೇಲೆ ನಾಚಿಕೆ ಯಿಂದ ಮುಖ ತಗ್ಗಿಸಿ, ಸಣ್ಣ ಧ್ವನಿಯಲ್ಲಿ ಹೇಳಿದ, "ರಾಮು, ನಿನ್ನ ಸಾಹಸ ದೊಡ್ಡದು, ನಿನ್ನ ಕರುಣೆ ಅದಕ್ಕಿಂತ ದೊಡ್ಡದು. ನಾನು ನಿನಗೆ ಸಾಟಿಯಲ್ಲವೆಂದು ಬಲ್ಲೆ, ಬಾಣವನ್ನು ಹಿಮಾಲಯ ಪರ್ವತದ ಕಡೆ ಬಿಡು. ನಾನು ಅದನ್ನು ಹಿಂಬಾಲಿಸಿ ಹೋಗುತ್ತೇನೆ."

ವಿಷ್ಣುಧನುಸ್ಸಿನಿಂದ ಹೊರಟ ಬಾಣ ಸರ್ರನೆ ಪರ್ವತಮುಖವಾಗಿ ಹೋಯಿತು. ಪರಶುರಾಮ ಅದನ್ನು ಹಿಂಬಾಲಿಸಿ ಹಿಮಾಲಯ ಸೇರಿ ಅಲ್ಲಿ ಮತ್ತೊಮ್ಮೆ ದೀರ್ಘಕಾಲ ತಪಸ್ಸಿಗೆ ತೊಡಗುವವನಾಗಿದ್ದ. ದಶರಥ ಆತಂಕ ಕಳೆಯಿತೆಂದು ನಿಟ್ಟುಸಿರು ಬಿಟ್ಟ.



ಪರಶುರಾಮ ಬಾಣವನ್ನು ಹಿಂಬಾಲಿಸಿ ಹಿಮಾಲಯಕ್ಕೆ ಹೋದ

ರಾಮು ಅಯೋಧ್ಯೆಗೆ ಹಿಂದಿರುಗಿ ಸೀತೆಯೊಂದಿಗೆ ಸುಖವಾಗಿ ಬಾಳತೊಡಗಿದ. ಅಯೋಧ್ಯೆಯ ಜನ ಅವನನ್ನು ತುಂಬ ಪ್ರೀತಿಸುತ್ತಿದ್ದರು. ಅವನು ಅವರ ಕಷ್ಟಸುಖ ಗಳಲ್ಲಿ ಒಂದಾಗಿದ್ದುದೇ ಇದಕ್ಕೆ ಕಾರಣ. ಅವರು ಕಷ್ಟದಲ್ಲಿದ್ದಾಗ ಅವನು ಅವರಿಗೆ ನೆರ ವಾಗುತ್ತಿದ್ದ. ಅರ್ಹರಲ್ಲದವರಿಗೂ ಅವನು ದಯೆ ತೋರುತ್ತಿದ್ದ. ಹೀಗಾಗಿ ಅಯೋಧ್ಯೆಯ ಜನ ಅವನು ಸದಾ ತಮ್ಮ ಕಣ್ಣಮುಂದೆ ಇರಬೇಕೆಂದು ಬಯಸಿದ್ದರೆ ಅದು ಆಶ್ಚರ್ಯವೇನಲ್ಲ.

ರಾಮ ಪ್ರಜೆಗಳ ಹೃದಯವನ್ನು ಗೆದ್ದದ್ದನ್ನು ಕಂಡು, ದಶರಥ ಅವನಿಗೇ ಪಟ್ಟ ಕಟ್ಟಲು ನಿರ್ಧರಿಸಿದ. "ಇನ್ನು ಮುಂದೆ ರಾಮ ನಿಮ್ಮ ದೊರೆ, ನಾನಿನ್ನು ವಾನಪ್ರಸ್ಥಕ್ಕೆ ಹೋಗಿ ತಪಸ್ಸಿಗೆ ತೊಡಗುತ್ತೇನೆ" ಎಂದು ದಶರಥ ಸಾರಿದ. ಆ ಸುದ್ದಿ ಕೇಳಿ ಪ್ರಜೆಗಳಿಗೆ ತುಂಬ ಸಂತೋಷವಾಯಿತು. ಅಯೋಧ್ಯೆ ಆನಂದೋತ್ಸವಗಳಲ್ಲಿ ಮುಳುಗಿತು.

ಕೈಕೆಯಿಯ ಎರಡು ವರಗಳು

ಕೈಕೆಯಿ ದಶರಥನ ರಾಣಿಯರಲ್ಲೆಲ್ಲಾ ಕಿರಿಯವಳು, ಅವನಿಗೆ ತುಂಬ ಅಚ್ಚುಮೆಚ್ಚಾಗಿದ್ದವಳು. ದಶರಥನಿಗೆ ತನ್ನ ರಾಣಿಯರೆಲ್ಲರೂ ಮೆಚ್ಚಿಗೆಯೇ, ಆದರೆ ಅವರಲ್ಲಿ ಅವನು ಕೈಕೆಯಿಯನ್ನು ವಿಶೇಷವಾಗಿ ಪ್ರೀತಿಸುತ್ತಿದ್ದ. ರಾಮನಂತೆಯೇ ಅವಳೂ ದೊರೆಯ ಮನಸ್ಸನ್ನು ಬೇಗ ಕಂಡುಕೊಳ್ಳುತ್ತಿದ್ದಳು. ಹಿರಿಯಳಾದ ಕೌಸಲ್ಯೆ ಸದ್ಗುಣಿ, ದೈವಭಕ್ತೆ. ಸುಮಿತ್ರೆ ವಿವೇಕಿ, ದಯಾಳು. ಇಷ್ಟಾದರೂ ದೊರೆಗೆ ಕೈಕೆಯಿಯೇ ಹೆಚ್ಚು ಪ್ರಿಯ. ಅವಳು ಏನನ್ನೇ ಕೇಳಲಿ ದಶರಥ ಇಲ್ಲವೆನ್ನುತ್ತಿರಲಿಲ್ಲ.

ರಾಮ ದೊರೆಯಾಗಲಿದ್ದಾನೆಂಬ ಸುದ್ದಿಯನ್ನು ಕೈಕೆಯಿಗೆ ತಿಳಿಸಿದವಳು ಅವಳ ದಾಸಿ ಮಂಥರೆ. ಮೊದಲು ಸುದ್ಧಿ ಕೇಳಿದಾಗ ಅವಳಿಗೆ ಮಿತಿಮೀರಿದ ಸಂತೋಷವೇ ಆಯಿತು.

ಆದರೆ ಮಂಥರೆ ಕೈಕೆಯಿಯ ಕಡೆ ಅನುಕಂಪ, ತಿರಸ್ಕಾರಗಳಿಂದ ನೋಡುತ್ತಾ "ಅದೇಕೆ ಅಷ್ಟೊಂದು ಸಂತೋಷ ಪಡ್ತಿರಪ್ಪ? ನಿಮಗೆ ಮುಂದೆ ದುಃಖ ಕಾದಿರೋದು ನನಗೆ ಗೊತ್ತಿದೆ. ರಾಮ ದೊರೆಯಾದರೆ ನಿಮ್ಮನ್ನೂ ನಿಮ್ಮ ಮಗನನ್ನೂ ದೇಶ ಬಿಟ್ಟು ಅಟ್ತಾನೆ, ನೋಡ್ತಿರಿ" ಅಂದಳು.


ಕೈಕೆಯಿ ಕೋಪದಿಂದ ದಾಸಿಯ ಕಡೆ ತಿರುಗಿ ಅರಚಿದಳು, "ಛೀ, ದುಷ್ಟೆ! ರಾಮನ ಬಗ್ಗೆ ಹಾಗೆಲ್ಲ ಅನ್ನೋಕ್ಕೆ ನಿನಗೆ ಅದೆಷ್ಟು ಧೈರ್ಯ."

ಆದರೆ ಮಂಥರೆ ಬಿಡಲಿಲ್ಲ, "ಭರತಪ್ಪ ಊರಲ್ಲಿಲ್ಲದೇ ಇರೋವಾಗ ರಾಮನಿಗೆ ಪಟ್ಟ ಕಟ್ಟೋಕ್ಕೆ ಮುದಿದೊರೆಗಳಿಗೆ ಯಾಕಿಷ್ಟು ಆತುರ? ಭರತಪ್ಪ ಅಡ್ಡಿ ಬರದೇ ಇರಲಿ ಅಂತಾನೇ ಅಲ್ವೆ ಅವರನ್ನ ಸೋದರಮಾವನ ಮನೆಗೆ ಕಳಿಸಿರೋದು. ಅಷ್ಟು ಗೊತ್ತಾಗೋಲ್ವೆ?"

ಕೈಕೆಯಿಯ ಮುಖ ಸಿಂಡರಿಸಿತು. ಅಲ್ಲಿ ಶಂಕೆಯ ಮೋಡ ಮುತ್ತಿತು. ಯಜಮಾನಿಯ ಮನಸ್ಸು ಬದಲಾಗುತ್ತಿರುವುದನ್ನು ಕಂಡು ದುಷ್ಟೆ ಮಂಥರೆಗೆ ಸಂತೋಷವಾಯಿತು. ಅವಳು ಒತ್ತಾಯಿಸುತ್ತ ಹೋದಳು. "ಬಡಪಾಯಿ ಭರತಪ್ಪ! ಅವರಿಗೆ ಏನು ಗತಿ ಕಾದಿದೆ ಅಂತ ಯೋಚಿಸಿದಾಗ ನನ್ನ ಗಂಟಲು ಬಿಗಿಯುತ್ತೆ. ರಾಣಿ ಕೈಕೆಯಿಯ ಮಗನಿಗೆ ಎಂಥ ದುರವಸ್ಥೆ!" ಈಗ ಕೈಕೆಯಿ ಮಂಥರೆ ಹೇಳುವುದನ್ನು ಕಿವಿಗೊಟ್ಟು ಕೇಳುತ್ತಿದ್ದಳು.

ಭಯ ನಮ್ಮನ್ನು ಹೀಗೆಲ್ಲ ವಿಚಿತ್ರವಾಗಿ ಆಡಿಸುತ್ತದೆ, ಕೈಕೆಯಿ ತನ್ನ ಹಾಗೂ ಭರತನ ಬಗ್ಗೆ ಆತಂಕ ಪಡತೊಡಗಿದಳು. ರಾಮ ದೊರೆಯಾದ ಮೇಲೆಯೂ ತನ್ನನ್ನು ಮೊದಲಿನಂತೆ ವಿಶ್ವಾಸದಿಂದ ಕಾಣುವನೇ? ಭರತನನ್ನು ಚೆನ್ನಾಗಿ ನೋಡಿಕೊಳ್ಳುವನೆ? ತಾನು

ಮುಂದೆಯೂ ಸುಖವಾಗಿರುವ ನಂಬಿಕೆ ಇದೆಯೇ? ಮಂಥರೆ ಅವಳ ಶಂಕೆಗಳಿಗೆ ಉತ್ತೇಜನ ಕೊಟ್ಟಳು. ಅವು ಹೆಚ್ಚುತ್ತಾ ಹೋದಂತೆ ರಾಮನ ಸದ್ಗುಣಗಳು ಮರೆತು ಹೋದವು; ಅವಳ ಭಯ ಭೀತಿಗಳಷ್ಟೇ ಉಳಿದುಕೊಂಡವು. ಅವಳಿಗೆ ತಾನೂ ಭರತನೂ ಸುಖದಿಂದಿರ ಬೇಕಾದರೆ ರಾಮ ದೊರೆಯಾಗಕೂಡದು ಎಂದು ಅನ್ನಿಸಿತು. ಅವಳು ಈಗ ಕಣಕ್ಕಿಳಿಯಲು ನಿರ್ಧರಿಸಿದಳು, "ದೊರೆಯನ್ನು ಕಂಡಾಗ ನನಗೆ ಬರಬೇಕಾದ ಎರಡು ವರಗಳನ್ನು ನಡೆಸಿ ಕೊಡೆಂದು ಕೇಳುತ್ತೇನೆ" ಎಂದು ತನಗೆ ತಾನೇ ಗಟ್ಟಿಮನಸ್ಸಿನಿಂದ ಹೇಳಿಕೊಂಡಳು.



ಈಗ ಕೈಕೆಯಿ ಮಂಥರೆ ಹೇಳುವುದನ್ನು ಕಿವಿಗೊಟ್ಟು ಕೇಳುತ್ತಿದ್ದಳು

ಕೈಕೆಯಿಗೆ ಸುದ್ದಿ ತಿಳಿಸೋಣವೆಂದು ದಶರಥ ಹರ್ಷಚಿತ್ತನಾಗಿ ಅವಳಿದ್ದಲ್ಲಿಗೆ ಬಂದ. ಆದರೆ ಅವಳು ಕಣ್ಣೀರು ಸುರಿಸುತ್ತಿರುವುದನ್ನು ಕಂಡು ಅವನ ಮನಸ್ಸು ಕಲಕಿತು.

"ಏನು ಸಮಾಚಾರ ಪ್ರಿಯೆ? ಯಾಕೆ, ಆರೋಗ್ಯ ಸರಿಯಿಲ್ಲವೆ? ಅಥವಾ ಯಾರಾದರೂ ನಿನ್ನ ಮನಸ್ಸು ನೋಯಿಸಿದರೆ?" ದಶರಥ ಕಳವಳದ ಧ್ವನಿಯಲ್ಲಿ ಕೇಳಿದ.

ದೊರೆಯ ಆತಂಕದ ಧ್ವನಿಯನ್ನು ಕೇಳಿ ಕೈಕೆಯಿ ಕಣ್ಣೊರಸಿಕೊಂಡಳು. ಅವನು ಹಿಂದೆಂದೋ ವಾಗ್ದಾನ ಮಾಡಿದ್ದ ಎರಡು ವರಗಳನ್ನು ಈಗ ನಡೆಸಿಕೊಡಬೇಕೆಂದು ಆ ಕ್ಷಣ ಕೇಳಿಯೇಬಿಟ್ಟಳು.

" ಅಷ್ಟೆಯೇ? " ದೊರೆ ಹೇಳಿದ, " ನಮ್ಮ ಪ್ರೀತಿಯ ರಾಮನ ಆಣೆ! ಕೊಟ್ಟ ವರಗಳನ್ನು ನಡೆಸಿಕೊಡುತ್ತೇನೆ. ಏಳು, ಮುಖದಲ್ಲಿ ನಗೆ ತಂದುಕೊ, ನೀನು ಅಸುಖಿಯಾಗಿರುವುದನ್ನು ಕಂಡರೆ ನನಗೆ ನೋವಾಗುತ್ತದೆ."

ಕೈಕೆಯಿಯ ಧೈರ್ಯ ಹೆಚ್ಚಿತು. ತಾನು ಏನನ್ನು ಕೇಳಿದರೂ ದೊರೆ ಕೊಡುವನೆಂದು ಅವಳಿಗೆ ಅನ್ನಿಸಿತು. ಅವಳು ನಿರ್ಭೀತಳಾಗಿ ಕೇಳಿದಳು, " ನಾನು ಬೇಡುವ ಮೊದಲ ವರವೆಂದರೆ ನೀವು ಭರತನಿಗೆ ಪಟ್ಟ ಕಟ್ಟಬೇಕು, ರಾಮನಿಗಲ್ಲ."

ಅದನ್ನು ಕೇಳಿ ದಶರಥ ಭೀತಿಯಿಂದ ಹಿಮ್ಮೆಟ್ಟಿ, ಕಟ್ಟುನಿಟ್ಟಾದ ಧ್ವನಿಯಲ್ಲಿ ಹೇಳಿದ, "ನೀನನ್ನುತ್ತಿರುವುದು ಏನು, ಕೈಕೆಯಿ?"

ಆದರೆ ಅವನು ಮಾತು ಮುಗಿಸುವ ಮೊದಲೇ ಕೈಕೆಯಿ ಬಾಯಿಹಾಕಿದಳು, "ತಾಳಿ, ತಾಳಿ ಇನ್ನೂ ಒಂದು ವರವಿದೆ. ಅದೆಂದರೆ ರಾಮ ಇವತ್ತೇ ಅಯೋಧ್ಯೆ ಬಿಟ್ಟು ಹೋಗಬೇಕು, ಹದಿನಾಲ್ಕು ವರ್ಷ ವನವಾಸ ಮಾಡಬೇಕು."

ದಶರಥ ಈ ಕಟುವಾದ ಮಾತುಗಳನ್ನು ಕೇಳಿದ. ಆದರೆ ಅವನಿಗೆ ತನ್ನ ಕಿವಿಯನ್ನು ತಾನೇ ನಂಬಲಾಗಲಿಲ್ಲ. "ಇಂಥಾದ್ದನ್ನು ಕೇಳಲು ನಿನಗೇನು ಹುಚ್ಚು ಹಿಡಿಯಿತೆ, ಕೈಕೆಯಿ? ನಾನು ಬದುಕಿರುವುದು ಕೇವಲ ರಾಮನಿಗಾಗಿ ಎಂದು ಕಾಣೆಯಾ? ಅಲ್ಲದೇ ರಾಮನನ್ನು ಅಷ್ಟೊಂದು ಪ್ರೀತಿಸುವ ಭರತ ಅವನ ಕಿರೀಟ ತೊಡಲು ಒಪ್ಪುವನೆ?"

ಕೈಕೆಯಿ ಕ್ರೂರವಾಗಿ ನಕ್ಕಳು, "ವರ ಕೊಡುವುದಾಗಿ ಮಾತು ಕೊಟ್ಟಿದ್ದೀರಿ, ದೊರೆ, ಭರತ ರಾಜನಾಗಲೇ ಬೇಕು, ರಾಮ ಕಾಡಿಗೆ ಹೊಗಲೇ ಬೇಕು."

ದಶರಥನ ಮುಖ ಭೀತಿ ದುಃಖಗಳಿಂದ ಬಿಳಿಚಿಕೊಂಡಿತು. ಆದರೆ ಕೈಕೆಯಿ ಕರಗಲಿಲ್ಲ. ದಶರಥ ಬಿಗಿದ ಗಂಟಲಿನಿಂದ ಗೋಗರೆದ, "ರಾಮನಿಗೆ ನೀನು ಹೇಗೆ ತಾನೆ ಹೀಗೆ ಮಾಡಬಲ್ಲೆ, ಕೈಕೆಯಿ? ಅವನು ನಿನಗೆ ಏನು ಕೆಟ್ಟದ್ದು ಬಗೆದಿದ್ದಾನೆ? ನಿನ್ನನ್ನು ತಾಯಿಯಂತೆ ಪ್ರೀತಿಸಿದ್ದಾನೆ. ನೀನು ಅವನನ್ನು ಕಾಡಿಗೆ ಏಕೆ ಅಟ್ಟಬೇಕು? ನಿನಗೆ ಬೇಕಾದರೆ ಭರತ ದೊರೆಯಾಗಲಿ, ಚಿಂತಿಲ್ಲ. ಆದರೆ ರಾಮ ಇಲ್ಲೇ ಇರಲು ಒಪ್ಪಿಕೊ."

ಕೈಕೆಯಿ ಬಗ್ಗಲಿಲ್ಲ. ಮುದಿದೊರೆಯ ಮುಖ ಕಣ್ಣೀರಿನಿಂದ ಒದ್ದೆಯಾಯಿತು. ಅವನು ಥಟ್ಟನೆ ಮೂರ್ಛೆ ಹೋದ. ಕೈಕೆಯಿ ರಾಮನಿಗೆ ಹೇಳಿಕಳಿಸಿದಳು.

ಆ ಕಾಲದಲ್ಲಿ ದೊರೆಗಳು ತಾವು ಕೊಟ್ಟ ವಚನವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ತಮ್ಮ ಪ್ರಜೆಗಳಿಗೆ ತಾವು ಮೇಲ್ಪಂಕ್ತಿಯಾಗಬೇಕೆಂದು ಅವರ ಯೋಚನೆ. ರಾಮನ ಮನೆತನದವರಂತೂ ಜೀವಕ್ಕಿಂತ ಮರ್ಯಾದೆಗೆ ಹೆಚ್ಚು ಬೆಲೆ ಕೊಟ್ಟಿದ್ದರು.

ರಾಮ ಬಂದಾಗ ದಶರಥನ ದುಃಖ ಉಕ್ಕಿಬಂದು "ರಾಮ! ರಾಮ! ಪ್ರೀತಿಯ ರಾಮ!" ಅನ್ನುವುದರ ಹೊರತು ಆತನ ಬಾಯಿಂದ ಬೇರೆ ಮಾತೇ ಹೊರಡದಾಯಿತು. ವರಗಳ ಬಗ್ಗೆ ಅವನಿಗೆ ತಿಳಿಸಿದವಳು ಕೈಕೆಯಿ.

ಒಂದು ಕ್ಷಣಕಾಲ ಸಹ ಅನುಮಾನಿಸದೆ ರಾಮ ಉತ್ತರ ಕೊಟ್ಟ, "ನೀನು ಹೇಳಿದಂತಾಗಲಮ್ಮ!" ಅವನು ರೇಗಲಿಲ್ಲ, ಕೂಗಲಿಲ್ಲ, ಅಸುಖಿಯಾದಂತೆಯೂ ಕಾಣಲಿಲ್ಲ. ಅವನ ಮುಖದಲ್ಲಿ ಎಂದಿನಂತೆ ಅದೇ ಶಾಂತವಾದ ಮುಗುಳು ನಗೆ ಬೆಳಗುತ್ತಿತ್ತು, ಅವನ ಧ್ವನಿಯಲ್ಲಿ ಅದೇ ಲವಲವಿಕೆಯಿತ್ತು. ಅವನು ತುಟಿ ಪಿಟಕ್ಕೆನ್ನದೆ ಹೇಳಿದ ಮಾತಿಗೆ ಒಪ್ಪಿರುವುದನ್ನು ಕಂಡು ಕೈಕೆಯಿಗೂ ಅಚ್ಚರಿಯಾಯಿತು. ಅವಳಿಗೆ ತನ್ನ ಕಣ್ಣು ಕಿವಿಗಳನ್ನೆ ನಂಬಲಾಗಲಿಲ್ಲ. ಅವನು ಎಲ್ಲಿ ಮನಸ್ಸು ಬದಲಾಯಿಸುವನೋ ಎಂದು ಅವಳಿಗೆ ಭಯ ಹುಟ್ಟಿತು.

ಕೂತಲ್ಲಿಂದ ಏಳಲು ಪ್ರಯತ್ನಿಸುತ್ತಾ ದಶರಥ "ಹಾ ರಾಮ!" ಎಂದು ಅರಚಿದ.

ರಾಮ ಒಮ್ಮೆ ಪ್ರೀತಿಯಿಂದ ತಂದೆಯ ಕಡೆ ನೋಡಿದ. "ಅಪ್ಪಾ ನೀವು ತಾಯಿಗೆ ಕೊಟ್ಟ ಮಾತನ್ನು ಪೂರೈಸಲು ನಾನು ಸಹಾಯ ಮಾಡಿಯೇ ತೀರಬೇಕು" ಅನ್ನುತ್ತ ತಲೆ ತಗ್ಗಿಸದೆ ಅಲ್ಲಿಂದ ಹೊರಟ.

ರಾಮ ಹೇಗೆ ನಗುನಗುತ್ತ ಪಟ್ಟ ಬಿಟ್ಟುಕೊಟ್ಟನೆಂದು ಎಷ್ಟೋ ಕವಿಗಳು ಹಾಡಿದಾರೆ. ಆದರೆ ಅವರು ಯಾರಿಗೂ ವಾಲ್ಮೀಕಿಯನ್ನು ಮೀರಿಸಲಾಗಿಲ್ಲ.



" ಹಾ ರಾಮ!" ಎಂದು ದಶರಥ ಅರಚಿದ

ರಾಮ ಅಯೋಧ್ಯೆ ಬಿಟ್ಟು ಹೋದದ್ದು

ರಾಮ ಕಾಡಿಗೆ ಹೋಗುವನೆಂಬ ಸುದ್ದಿ ಅಯೋಧ್ಯೆಯಲ್ಲೆಲ್ಲಾ ಬೆಂಕಿಯಂತೆ ಹರಡಿತು. ದುಃಖದಿಂದ ಪಟ್ಟಣಕ್ಕೆ ಕತ್ತಲು ಕವಿಯಿತು. ಹೆಂಗಸರು, ಮಕ್ಕಳು, ಕೊನೆಗೆ ದೊಡ್ಡವರೂ ಸಹ ತಮ್ಮ ಮೆಚ್ಚಿನ ರಾಜಕುಮಾರನಿಂದ ಬೇರೆಯಾಗಬೇಕಲ್ಲ ಎಂದು ಅಳತೊಡಗಿದರು. ಮರಗಳು ಬಾಗಿದವು, ಹೂಗಳು ಬಾಡಿದವು. ಹಕ್ಕಿಗಳು ಆಕಾಶದಲ್ಲಿ ಮೌನವಾಗಿ ಹಾರಾಡಿದವು.

ಅರಮನೆಯಲ್ಲಿ, ಎರಡನೆಯ ರಾಣಿ ವಿವೇಕಿ ಸುಮಿತ್ರೆ ಕೌಸಲ್ಯೆಯನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಳು. ಹದಿನಾಲ್ಕು ವರ್ಷಕಾಲ ಮಗನನ್ನು ಬಿಟ್ಟಿರಬೇಕಲ್ಲ ಎಂದು ಯೋಚಿಸಿದಾಗ ಕೌಸಲ್ಯೆಗೆ ಬುದ್ಧಿ ಭ್ರಮಣೆಯಾದಂತಾಯಿತು. ಅವಳ ದುಃಖವನ್ನು ನೋಡಿ ಲಕ್ಷ್ಮಣನಿಗೆ ಕೋಪ ತಡೆಯಲಾಗಲಿಲ್ಲ. ದಶರಥ ತನ್ನ ತಂದೆಯೆಂಬುದನ್ನು ಮರೆತು "ಅವರಿಗೇನು ಹುಚ್ಚು ಹಿಡಿಯಿತೆ? ದುಷ್ಟ ಕೈಕೆಯಿಯನ್ನು ಶಿಕ್ಷಿಸದೆ ಬಿಟ್ಟೇನೆ? ನನ್ನ ಕೈಯಲ್ಲಿ ಬಿಲ್ಲಿರುವವರೆಗೆ ಯಾರು ತಾನೆ ಅಣ್ಣನನ್ನು ಕಾಡಿಗೆ ಕಳಿಸುತ್ತಾರೆ, ನೋಡೋಣ?" ಎಂದು ಕೂಗಾಡುತ್ತ, ತನ್ನ ಹೆಬ್ಬಿಲ್ಲನ್ನು ಎತ್ತಿಕೊಂಡು ಕೋಪದಿಂದ ದಶರಥನ ಅರಮನೆಯ ಕಡೆ ನುಗ್ಗಿದ.

ರಾಮ ಪ್ರೀತಿಯ ನಗೆ ಬೀರುತ್ತಾ ಅವನನ್ನು ತಡೆದ. "ಲಕ್ಷ್ಮಣ, ವಿವೇಚನೆ ಕಳೆದುಕೊಳ್ಳುತ್ತಿದ್ದಿ. ನಮ್ಮ ತಂದೆ ಕೈಕೆಯಿಗೆ ಕೊಟ್ಟ ಭಾಷೆ ತಪ್ಪುವುದು ನಿನಗೆ ಇಷ್ಟವೆ? ಬಿಲ್ಲನ್ನು ಆ ಕಡೆ ತೆಗೆದಿಡು" ಅಂದ.

ಅದನ್ನು ಕೇಳಿ ಲಕ್ಷ್ಮಣನ ಕಣ್ಣಲ್ಲಿ ನೀರೂರಿತು. ಆತನು ಹೇಳಿದ, "ನೀನು ಕಾಡಿಗೆ ಹೋಗುವುದೇ ಆದರೆ, ನನ್ನನ್ನೂ ಕರೆದುಕೊಂಡು ಹೋಗಬೇಕು. ನಿನ್ನನ್ನು ಬಿಟ್ಟು ನಾನು ಬದುಕಿರಲಾರೆ." ರಾಮನಿಗೆ ಲಕ್ಷ್ಮಣ ತನ್ನ ಜೀವಕ್ಕಿಂತ ಹೆಚ್ಚು ಬೇಕಾದವನು. ಅವನು ತಮ್ಮನ ಮಾತನ್ನು ತೆಗೆದು ಹಾಕುವುದಾದರೂ ಹೇಗೆ?

ರಾಮ ಅಳುತ್ತಿದ್ದ ತಾಯಿ ಕೌಸಲ್ಯೆಗೆ ಪ್ರೀತಿಯಿಂದ ಧೈರ್ಯ ಸಮಾಧಾನಗಳನ್ನು ಹೇಳಿ, ಅಲ್ಲಿಂದ ಹೊರಟು ಸೀತೆಯನ್ನು ಬೀಳ್ಕೊಳ್ಳಲು ಬಂದ. ಅವಳಿಗೆ ಸುದ್ದಿ ತಿಳಿಸುವುದಾದರೂ ಹೇಗೆ? ಅದನ್ನು ಕೇಳಿ ಅವಳು ಹೇಗೆ ವರ್ತಿಸುವಳು? ತಾನು ಹೋದ ಮೇಲೆ ಅವಳ ಬದುಕು ಅದೆಷ್ಟು ಒಂಟಿಯಾಗುತ್ತದೆ? ರಾಮ ಭಾರವಾದ ಹೃದಯದಿಂದ ಅವಳ ಕೋಣೆಗೆ ಬಂದ. ಸೀತೆ ಅವನ ಮುಖ ಕಂಡೊಡನೆಯೇ ಏನೋ ಪ್ರಮಾದವಾಗಿದೆಯೆಂದು ಊಹಿಸಿದಳು.

"ಏನಾಯಿತು, ದೊರೆ? ಏನೋ ಯೋಚನೆಯಲ್ಲಿದ್ದೀರಲ್ಲ, ಏನದು?" ಅವಳು ಕೇಳಿದಳು.

ರಾಮ ಹೇಳಿದ, “ಸೀತಾ ನಾನು ಇಲ್ಲದಾಗ ನಿನ್ನನ್ನು ನೀನು ನೋಡಿಕೊ, ವೃಥಾ ಚಿಂತಿಸಬೇಡ. ಭರತನಿಗೆ ನನ್ನನ್ನು ಕಂಡರೆ ಪ್ರೀತಿಯಿದೆ. ನೀನು ನನಗೆ ಪ್ರಾಣವೆಂದು ಅವನು ಬಲ್ಲ. ಅವನು ತನ್ನ ಜೀವ ಕೊಟ್ಟಾದರೂ ನಿನ್ನನ್ನು ನೋಡಿಕೊಳ್ಳುತ್ತಾನೆ. ನೀನು ಸಹ ಅವನನ್ನು ತಮ್ಮನಂತೆ ಕಾಣಬೇಕು. ಅವನು ದೊರೆಯಾದನೆಂದು ಸಂತೋಷದಿಂದಿರಬೇಕು.”

ಅದನ್ನು ಕೇಳಿ ಆ ಕೋಮಲೆ ರಾಜಕುಮಾರಿ ಎಲೆಯಂತೆ ತರತರನೆ ನಡುಗಿದಳು. ಕಣ್ಣೀರು ತುಂಬಿ ಅವಳ ದೃಷ್ಟಿ ಮಂಕಾಯಿತು. “ಅಯ್ಯೋ, ನನ್ನ ರಾಮ ತನ್ನ ಸೀತೆಯನ್ನು ಹಿಂದೆ ಬಿಟ್ಟು ಹೋಗುತ್ತಾನೆಯೆ? ಹಾಗೇಕೆ? ಅವನಿಗೆ ಈಗ ಹೆಂಡತಿಯ ಬಗ್ಗೆ ಲಕ್ಷ್ಯವಿಲ್ಲವೆ?” ಎಂದು ಸೀತೆ ಬಿಕ್ಕಿಬಿಕ್ಕಿ ಅಳತೊಡಗಿದಳು.

“ಸೀತ, ನಾನು ನಿನ್ನ ಮೇಲಿನ ಪ್ರೀತಿಯಿಂದಾಗಿಯೇ ನಿನಗೆ ದೇಶಾಂತರವಾಸದ ಕಷ್ಟ ತಪ್ಪಿಸಬಯಸುತ್ತೇನೆ. ವನವಾಸವೆಂದರೆ ಏನೆಂದು ನಿನಗೆ ಗೊತ್ತಿದೆಯೇ? ಒರಟಾದ ಮುಳ್ಳು ದಾರಿಗಳು, ಕಾಡುಪ್ರಾಣಿಗಳು, ಕತ್ತಲ ರಾತ್ರಿಗಳು? ಯಾವಾಗಲೂ ಮೃದುವಾದ ಹಾಸಿಗೆಯ ಮೇಲೆ ಮಲಗಿ ಅಭ್ಯಾಸವಾದ ನಿನ್ನಂತಹ ರಾಜಕುಮಾರಿಗೆ ಗಡಸು ನೆಲದ ಮೇಲೆ ಮಲಗುವುದೆಂದರೆ ಹೇಗೆ ಸಾಧ್ಯ? ನಿನ್ನ ಕೋಮಲವಾದ ಪಾದ ಕಲ್ಲು ದಾರಿಯ ಮೇಲೆ ಹೇಗೆ ನಡೆಯಬಲ್ಲದು? ನೀನು ಇಲ್ಲೇ ಉಳಿಯಬೇಕು. ಸೀತೆ, ಹದಿನಾಲ್ಕು ವರ್ಷ ಮುಗಿಸಿ ಬೇಗನೆ ಹಿಂದಿರುಗುತ್ತೇನೆಂದು ಮಾತು ಕೊಡುತ್ತೇನೆ.”

“ಕಾಡು ಪ್ರಾಣಿಗಳು! ಕತ್ತಲ ರಾತ್ರಿಗಳು! ಮುಳ್ಳು ದಾರಿಗಳು!” ಸೀತೆ ಮೃದುವಾಗಿ ನಕ್ಕಳು. “ನೀವು ಜತೆಗಿರುವಾಗ ಇದಕ್ಕೆಲ್ಲಾ ಹೆದರುವೆನೆಂದುಕೊಂಡಿರಾ? ಅದೆಷ್ಟೇ ಕಷ್ಟದ ಜೀವನವಾಗಲಿ, ನಾನು ನಿಮ್ಮ ಜತೆ ಬರದೇ ಇರಲಾರೆ. ದಯವಿಟ್ಟು ಇಲ್ಲವೆನ್ನಬೇಡಿ. ನಿಮ್ಮನ್ನು ಬಿಟ್ಟು ಒಂಟಿಯಾಗಿ ಬಾಳುವುದು ಸಾಧ್ಯವಿಲ್ಲ.”

ಸೀತೆಯ ಮೃದುಮಾತಿನ ಮೇರೆಗೆ ಇಲ್ಲವೆನ್ನುವವರು ಯಾರು? ರಾಮನಿಗಂತೂ ಅದು ಸಾಧ್ಯವಿರಲಿಲ್ಲ. ಅವನು ಪ್ರೀತಿಯಿಂದ ನಕ್ಕು ಅವಳನ್ನು ಅಪ್ಪಿಕೊಳ್ಳುತ್ತಾ ಹೇಳಿದ, “ನಿನ್ನನ್ನು ಹಿಂದೆ ಬಿಟ್ಟು ನಾನು ಸಹ ಇರಲಾರೆ. ನಿನಗೆ ತುಂಬ ಕಷ್ಟವಾಗುವುದೆಂದು ಹೆದರಿ ಹಾಗೆ ಹೇಳಿದೆ. ಹೋಗು, ದೂರ ಪ್ರಯಾಣಕ್ಕೆ ಸಿದ್ಧಳಾಗು.” ಸೀತೆಯ ಮುಖ ಸಂತೋಷದಿಂದ ಬೆಳಗಿತು. ಅವಳು ಪ್ರಯಾಣಕ್ಕೆ ಸಿದ್ಧತೆ ಮಾಡತೊಡಗಿದಳು. ತನ್ನಲ್ಲಿದ್ದುದೆಲ್ಲವನ್ನೂ ಬಡಬಗ್ಗರಿಗೆ ಹಂಚಿ, ತೀರಾ ಸಾಧಾರಣವಾದ ಬಟ್ಟೆ ತೊಟ್ಟಳು.

ಈ ನಡುವೆ, ಲಕ್ಷ್ಮಣ ತಾಯಿ ಸುಮಿತ್ರೆಗೆ ವಿಷಯ ಹೇಳಲು ಹೋದ.

ಆ ವಿವೇಕಿ ಹೆಂಗಸು ಹೇಳಿದಳು, “ಮಗು ರಾಮನಿಗೆ ಜತೆಯಾಗಿ ನಿಲ್ಲಲು ಸಾಧ್ಯವಾದದ್ದು ನಿನ್ನ ಸೌಭಾಗ್ಯ. ಸೀತೆಯನ್ನು ತಾಯಿಯಂತೆ ಕಂಡುಕೊ, ರಾಮನನ್ನು ತಂದೆಯಂತೆ ಪ್ರೀತಿಸು. ಆಗ ವನವಾಸ ಸಹ ಇಲ್ಲಿನ ಅಯೋಧ್ಯೆಯ ಜೀವನದಷ್ಟೇ ಸಂತೋಷ ಕೊಡುತ್ತದೆ. ಹೋಗು, ಸುಖದಿಂದ ಬಾಳು; ದೇವರು ಕಾಪಾಡಲಿ.”

ಸುಮಿತ್ರೆಗೆ ತುಂಬ ದುಃಖವಾಗಿತ್ತು, ಆದರೆ ಅದನ್ನು ತೋರಿಸಿಕೊಂಡಿದ್ದರೆ ಲಕ್ಷ್ಮಣನಿಗೂ ನೋವಾಗುತ್ತಿತ್ತು. ಆದ್ದರಿಂದ ಬುದ್ಧಿವಂತೆಯಾದ ಅವಳು ನಗುಮುಖ ಹಾಕಿಕೊಂಡು ಉಲ್ಲಾಸದ ಧ್ವನಿಯಲ್ಲಿ ಮಗನನ್ನು ಬೀಳ್ಕೊಟ್ಟಳು.

ರಾಮ, ಲಕ್ಷ್ಮಣ, ಸೀತೆ ಮೂವರೂ ರಥ ಹತ್ತಿದರು. ಸಾರಥಿ ಸುಮಂತ್ರ ಅದನ್ನು ನಡೆಸಿಕೊಂಡು ಹೊರಟ. ಅಯೋಧ್ಯೆಯ ಜನ ಗಟ್ಟಿಯಾಗಿ ಕೂಗುತ್ತ ರಥವನ್ನು ತಡೆದು ನಿಲ್ಲಿಸಲು ಪ್ರಯತ್ನಿಸಿದರು. ಆ ಗದ್ದಲವನ್ನು ಕೇಳಿ ದುರ್ದೈವಿ ದಶರಥ "ತಾಳು, ರಾಮ! ಒಂದು ಕ್ಷಣ ತಾಳು" ಎಂದು ಕೂಗುತ್ತಾ ಅರಮನೆ ಬಿಟ್ಟು ಓಡಿಬಂದ. ರಥ ಧೂಳಿನ ಮೋಡವೆಬ್ಬಿಸುತ್ತ ಹೊರಟು ಹೋಯಿತು. ದಶರಥ ಮೂರ್ಛೆ ಬಂದು ಕೆಳಗುರುಳಿದ. ಕೌಸಲ್ಯೆ ಕೈಕೆಯಿಯರು ಅವನನ್ನು ಎತ್ತಿ ನಿಲ್ಲಿಸಿದರು. ಕೈಕೆಯಿಯ ಕೈ ತಾಕಿದೊಡನೆಯೇ ದಶರಥ ಕಣ್ಣುಬಿಟ್ಟು, ನಿಶ್ಯಕ್ತನಾಗಿದ್ದರೂ " ನಡಿ ಆಚೆ, ನನ್ನನ್ನು ಮುಟ್ಟಬೇಡ. ಮತ್ತೆ ಎಂದೆಂದಿಗೂ ನಿನ್ನ ಮುಖ ನೋಡಲು ಇಷ್ಟವಿಲ್ಲ" ಎಂದು ಗಟ್ಟಿಯಾಗಿ ಅರಚಿದ. ಅವನು ಕೈಕೆಯಿಯನ್ನು ನೋಡಿದುದು ಅದೇ ಕೊನೆ.

ಚಿತ್ರಕೂಟದಲ್ಲಿ

ಸುಮಂತ್ರನ ರಥ ರಾಮನನ್ನು ಗಂಗಾನದಿಯ ತೀರಕ್ಕೆ ಕರೆತಂದಿತು. ಅಲ್ಲಿ ಹತ್ತಿರದಲ್ಲೇ ಗುಹನೆಂಬ ಬೇಡರ ದೊರೆ ವಾಸಿಸುತ್ತಿದ್ದ. ಅವನು ದಶರಥನ ಸ್ನೇಹಿತ, ರಾಮ ರಾಜಕುಮಾರನೆಂದು ಬಲ್ಲವನು. ಈಗ ರಾಮ ಬಚ್ಚ ಬಡಯಾತ್ರಿಕನಂತೆ ಬಟ್ಟೆ ತೊಟ್ಟು ಕಾಡಿನಲ್ಲಿ ಅಲೆದಾಡುತ್ತಿರುವುದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು.

ನಡೆದ ವಿಷಯವನ್ನು ಕೇಳಿ ಅವನು ಹೇಳಿದ, "ನೀನು ಇಲ್ಲಿ ನನ್ನೊಡನೆ ಇದ್ದುಬಿಡು ರಾಮ. ನನ್ನ ರಾಜ್ಯ ನನ್ನ ಸಿರಿಸಂಪತ್ತು, ನನ್ನ ಜೀವ ಎಲ್ಲವೂ ನಿನ್ನ ಸೇವೆಗೆ ಮೀಸಲು. ನಾನು ಹೇಳುವುದಿಷ್ಟೆ, ನನ್ನ ಜತೆ ಇದ್ದುಬಿಡು."

ರಾಮನಿಗೆ ಗುಹನ ಸ್ನೇಹವನ್ನು ಕಂಡು ಎದೆ ಕರಗಿತು. "ನೀನು ನನ್ನನ್ನು ಎಷ್ಟು ಪ್ರೀತಿಸುವೆಯೆಂದು ಬಲ್ಲೆ, ಆದರೆ ಇಲ್ಲಿರುವುದು ಸಾಧ್ಯವಿಲ್ಲ. ಕೈಕೆಯಿಗೆ ನಾನು ವನವಾಸಿಯಾಗಿ ಬರುವುದಾಗಿ ಮಾತು ಕೊಟ್ಟಿದ್ದೇನೆ. ಅದನ್ನು ನಡೆಸಲೇ ಬೇಕು. ಮುಂಜಾನೆ ನದಿ ದಾಟಲು ಒಂದು ದೋಣಿ ಹೊಂದಿಸಿಕೊಡು, ಸಾಕು" ಎಂದು ರಾಮ ಹೇಳಿದ. ಗುಹ ಹಾಗೆಯೇ ಮಾಡಿದ.

ಆ ರಾತ್ರಿ ರಾಮಸೀತೆಯರು ಒಂದು ಮರದಡಿ ಮಲಗಿದರು. ಇಡೀ ರಾತ್ರಿ ಲಕ್ಷ್ಮಣ ಕಾವಲು ಕಾಯುತ್ತಿದ್ದ. ಗುಹನೂ ಅವನ ಜತೆ ಸೇರಿಕೊಂಡ. ಅವರಿಬ್ಬರೂ ತಮಗೆ ಅತ್ಯಂತ ಪ್ರೀತಿಪಾತ್ರನಾಗಿದ್ದ ರಾಮನನ್ನು ಕುರಿತು ಮಾತಾಡುತ್ತಾ ರಾತ್ರಿ ಕಳೆದರು. ಇದ್ದಕ್ಕಿದ್ದಂತೆ ಲಕ್ಷ್ಮಣನಿಗೆ ಊರಿನ ನೆನಪಾಗಿ ಗೆಳೆಯನೊಂದಿಗೆ ಮನೆಯ ಹಂಬಲವನ್ನು ತೋಡಿಕೊಂಡ, "ಈಗ ಅಮ್ಮ ಏನು ಮಾಡುತ್ತಿರುತ್ತಾಳೊ? ಅವಳಿಗೆ ತುಂಬ ದುಃಖವಾಗಿರಬೇಕು. ಅವಳನ್ನು ಸಂತೈಸಲು ತಮ್ಮ ಶತ್ರುಘ್ನ ಇರುತ್ತಾನೆ. ಪಾಪ ದುರ್ದೈವಿ ತಾಯಿ ಕೌಸಲ್ಯೆ. ಅಲ್ಲದೆ, ನಮ್ಮ ತಂದೆ! ಅವರೆಲ್ಲರಿಗೂ ಎಷ್ಟು ದುಃಖವಾಗಿರಬೇಕು." ಗುಹ ಆತನಿಗೆ ಧೈರ್ಯ ಹೇಳಲು ಪ್ರಯತ್ನಿಸಿದ.

ಮಾರನೆಯ ಬೆಳಿಗ್ಗೆ ಮೂವರು ಯಾತ್ರಿಕರೂ ಗುಹನಿಗೆ ವಿದಾಯ ಹೇಳಿ ದೋಣಿ ಹತ್ತಿದರು. ಸಾರಥಿ ಸುಮಂತ್ರ ರಾಮನ ಬಳಿಗೆ ಬಂದ. ಅವನ ಹೃದಯ ಭಾರವಾಗಿತ್ತು. ರಾಮ ಹೇಳಿದ, "ಸುಮಂತ್ರ ನೀನಿನ್ನು ಅಯೋಧ್ಯೆಗೆ ಹಿಂದಿರುಗಿ, ದೊರೆಯನ್ನು ಆದಷ್ಟು ಸಂತೈಸು. ಕೈಕೆಯಿಗೆ ನಾನು ಮಾತಿಗೆ ತಪ್ಪಿಲ್ಲವೆಂದು ಹೇಳು. ತಾಯಿ ಕೌಸಲ್ಯೆ ಸುಮಿತ್ರೆಯರಿಗೆ ನಮ್ಮ ಯೋಗಕ್ಷೇಮ ತಿಳಿಸು. ಭರತ ಅಯೋಧ್ಯೆಗೆ ಬಂದ ಮೇಲೆ ತಂದೆತಾಯಿಯವರನ್ನು ಅವನ ರಕ್ಷಣೆಗೆ ಬಿಟ್ಟಿರುವುದಾಗಿ ತಿಳಿಸು."

ಭರತ ಆಗ ಸೋದರಮಾವನನ್ನು ನೋಡಿಬರಲು ಹೋಗಿದ್ದ. ಅವನು ಅಯೋಧ್ಯೆಯಲ್ಲಿ ಇದ್ದಿದ್ದರೆ ರಾಮನನ್ನು ಕಾಡಿಗೆ ಹೋಗಲು ಬಿಡುತ್ತಿರಲಿಲ್ಲ. ಕೈಕೆಯಿಗೂ ಅಂತಹ ವರ ಕೇಳುವ ಧೈರ್ಯವಿರುತ್ತಿರಲಿಲ್ಲ.

ಸುಮಂತ್ರ ಅಳತೊಡಗಿದ. "ನಾನು ಹೇಗೆ ವಾಪಸು ಹೋಗಲಿ? ದೊರೆಗೂ ಅಯೋಧ್ಯೆಯ ಜನರಿಗೂ ಹೇಗೆ ಮುಖ ತೋರಿಸಲಿ? ನಿಮ್ಮ ಜತೆಗಿದ್ದು ಸೇವೆ ಮಾಡಿ ಕೊಂಡಿರುತ್ತೇನೆ. ಈ ಕಾಡು ದಾರಿಯಲ್ಲಿ ನೀವು ಹೇಗೆ ತಾನೆ ನಡೆಯುವುದು ಸಾಧ್ಯ? ಈ ಕುದುರೆಗಳನ್ನು ನೋಡಿ. ಅವು ನಿಮ್ಮನ್ನು ಬೆಟ್ಟಗುಡ್ಡಗಳ ಮೇಲೆ, ಕಣಿವೆಯ ಇಳಿದಾರಿ ಯಲ್ಲಿ ಕರೆದೊಯ್ಯಲು ಆತುರದಿಂದಿವೆ."

"ಸುಮಂತ್ರ, ನೀನು ಎಷ್ಟು ನಿಷ್ಠಾವಂತ, ದೊರೆಗೆ ನಿನ್ನ ಬಗ್ಗೆ ಎಷ್ಟು ಹೆಮ್ಮೆ ಎಂದು ನಾನು ಬಲ್ಲೆ. ನೀನು ವಾಪಸು ಹೋಗಲೇಬೇಕು. ದೊರೆಗೆ ನನ್ನ ಸುದ್ದಿ ಕೊಡ ಬೇಕು. ಕೈಕೆಯಿಗೂ ನಮ್ಮ ಯೋಗಕ್ಷೇಮ ತಿಳಿಸಿ, ನಾನು ನಿಜವಾಗಿ ಕಾಡು ಸೇರಿದ್ದೇನೆಂದು ತಿಳಿಸಬೇಕು. ಅದಕ್ಕಾಗಿ ನೀನು ಹಿಂದಿರುಗು," ಎಂದು ರಾಮ ಮತ್ತೆ ಹೇಳಿದ.



ಅವಳು ಕಾಡಿನ ಸಿಹಿಹಣ್ಣುಗಳ ರುಚಿ ನೋಡಿದುದು ಅದೇ ಮೊದಲು

ರಾಮನ ದೋಣಿ ನೀರಿನ ಮೇಲೆ ಚಲಿಸಿ ಮುಂದೆ ಹೋದಂತೆ, ಗುಹ ಸುಮಂತ್ರರಿಬ್ಬರೂ ಕಣ್ಣಲ್ಲಿ ನೀರು ತುಂಬಿಕೊಂಡು ನೋಡತೊಡಗಿದರು. ಸುಮಂತ್ರ ದುಃಖದಿಂದ ರಥ ಹತ್ತಿ ಊರಕಡೆ ನಡೆದ. "ಹ್ಲಾ! ರಾಮನಿಲ್ಲದ ಅಯೋಧ್ಯೆ" ಎಂದು ಅವನು ನಿಟ್ಟುಸಿರುಗರೆದ. ಕುದುರೆಗಳ ಕಣ್ಣಿನಿಂದ ಸಹ ಬಿಸಿಯಾದ ಕಣ್ಣೀರು ಸುರಿಯತೊಡಗಿತು.

ಎದುರು ದಂಡೆ ತಲುಪಿದಾಗ, ರಾಮ ಕೈಹಿಡಿದು ಸೀತೆಯನ್ನು ಕೆಳಗಿಳಿಸಿದ. ಮೂವರೂ ದಟ್ಟವಾದ ಕಾಡಿನಲ್ಲಿ ಒಟ್ಟಿಗೆ ಮುನ್ನಡೆದರು.

ಸೀತೆ ಭಯಪಡಲಿಲ್ಲ. ಈ ತರದ ಜೀವನ ಅವಳಿಗೆ ಹೊಸದು. ಆದ್ದರಿಂದ ಅವಳಿಗೆ ಇಷ್ಟವಾಯಿತು. ರಾಮ ಒಂದೊಂದು ಹೂ ಹಕ್ಕಿಗಳ ಹೆಸರನ್ನೂ ಹೇಳುತ್ತ ಹೋದ, ಅವಳು ಹೂ ಆರಿಸಿದಳು, ಕಾಡಿನ ಹಣ್ಣುಗಳನ್ನು ಕಚ್ಚಿ ರುಚಿನೋಡಿದಳು. ಕಾಡುಜಿಂಕೆಗಳ ಜಿಗಿದಾಟವನ್ನು ನೋಡಿ, ಹಿಗ್ಗಿದಳು. ಅವಳ ನಗೆ ಹಕ್ಕಿಗಳ ಚಿಲಿಪಿಲಿಯಂತೆ ಮುಕ್ತವಾಗಿದ್ದು ಸಂತೋಷದಿಂದ ತುಂಬಿತ್ತು. ಯಾವ ಚಿಂತೆಯೂ ಇಲ್ಲದೆ ಅವರು ಮುನ್ನಡೆದರು; ಜತೆಗೇ ಎಲ್ಲಿ ಯಾವ ಅಪಾಯ ಬರುವುದೋ ಎಂದು ಎಚ್ಚರದಿಂದ ಕಣ್ಣಿಟ್ಟಿದ್ದರು.

ರಾಮ ಗಂಗಾನದಿಯನ್ನು ದಾಟಿ ಕಾಡು ಸೇರಬೇಕೆಂಬುದು ಕೈಕೆಯಿಯ ಇಚ್ಛೆಯಾಗಿತ್ತು. ಹಾಗೆ ಮಾಡುವವರೆಗೆ ಆತನಿಗೆ ತಾನಿತ್ತ ವಚನದ ಹೊರತು ಬೇರೆ ಯೋಚನೆಯೇ ಇರಲಿಲ್ಲ. ಈಗ ಆ ವಚನ ಪೂರೈಸಿದ್ದುದರಿಂದ ಅವನ ಯೋಚನೆ ತಂದೆ ತಾಯಿಗಳ ಕಡೆಗೆ ಹರಿಯಿತು. ತಾಯಿ ಕೌಸಲ್ಯೆ ತನ್ನ ಅಗಲಿಕೆಯನ್ನು ಹೇಗೆ ಸಹಿಸಿಕೊಂಡಿದ್ದಾಳೆ? ತಂದೆಗೆ ಅವಳಿಗೆ ಗಮನಕೊಡಲಾರದಷ್ಟು ಕಾಹಿಲೆಯಾಗಿರಬೇಕು. ಕೈಕೆಯಿ ಅವರನ್ನು ಚೆನ್ನಾಗಿ ಕಾಣುತ್ತಿದ್ದಾಳೆಯೆ? ಇದ್ದಕ್ಕಿದ್ದಂತೆ ದುಃಖ ಚಿಂತೆಗಳು ಅವನನ್ನು ಕಾಡತೊಡಗಿದವು. "ಲಕ್ಷ್ಮಣ ನೀನು ತಾಯಿಯರನ್ನು ನೋಡಿಕೊಳ್ಳಲು ಅಯೋಧ್ಯೆಗೆ ಹಿಂದಿರುಗಿ ಹೋಗಬಾರದೇಕೆ? ಭರತ ಒಳ್ಳೆಯವನೆಂದು ಬಲ್ಲೆ. ಆದರೆ ಅವನು ಕೈಕೆಯಿಯ ಎದುರು ಎದ್ದುನಿಲ್ಲಬಲ್ಲನೆ?" ಎಂದು ರಾಮ ಹೇಳಿದ.

"ಸಮಾಧಾನ ಮಾಡಿಕೊ, ರಾಮ, ತಾಯಿಯರನ್ನು ಭರತ ಚೆನ್ನಾಗಿಯೇ ನೋಡಿಕೊಳ್ಳುತ್ತಾನೆ," ಎಂದು ಹೇಳಿ ಲಕ್ಷ್ಮಣ ಕೊಂಚ ಕೊಂಕುಬೆರೆತ ಧ್ವನಿಯಲ್ಲಿ, "ಭರತನ ಬಗ್ಗೆ ನಿನಗೆ ನಂಬಿಕೆಯಿದೆ ಎಂದುಕೊಂಡಿದ್ದೆ" ಎಂದು ಸೇರಿಸಿದ. ಅವರು ಮುನ್ನಡೆದಂತೆ ಲಕ್ಷ್ಮಣ ಹರ್ಷವಾಗಿ ಮಾತಾಡುತ್ತ ರಾಮನನ್ನು ಉಲ್ಲಾಸಗೊಳಿಸಲು ಪ್ರಯತ್ನಿಸಿದ. ಕೆಲವು ದಿನಗಳ ಮೇಲೆ ಅವರು ಚಿತ್ರಕೂಟವೆಂಬ ಒಂದು ಮುದ್ದಾದ ಬೆಟ್ಟ ತಲುಪಿದರು. ಸೀತೆಗೆ ಅಲ್ಲಿ ವಾಸ ಮಾಡಲು ಇಷ್ಟವೆಂದು ಯೋಚಿಸಿ, ಅದರ ಸಮನಾದ ತಪ್ಪಲಿನಲ್ಲಿ ಒಂದು ಗುಡಿಸಲು ಕಟ್ಟುವಂತೆ ರಾಮ ಲಕ್ಷ್ಮಣನಿಗೆ ಹೇಳಿದ. ಅಲ್ಲಿ ಸುತ್ತಮುತ್ತಲಲ್ಲಿ ಅನೇಕ ಋಷಿಗಳು ವಾಸವಾಗಿದ್ದರು.

ಭರತ ರಾಮನನ್ನು ಹುಡುಕಿದ್ದು

ಮೂರು ದಿನಗಳ ಮೇಲೆ ಸಾರಥಿ ಸುಮಂತ್ರ ಅಯೋಧ್ಯೆಗೆ ಹಿಂದಿರುಗಿ ಬಂದು ನೇರವಾಗಿ ದೊರೆ ದಶರಥನ ಬಳಿ ಹೋದ. ಮಲಗಿದ್ದ ಮಂಚವನ್ನು ಬಿಟ್ಟೇಳುತ್ತ "ರಾಮ ಬಂದನೆ?" ಎಂದು ದಶರಥ ಕೇಳಿದ. ರಾಮ ತನ್ನ ನಿರ್ಧಾರ ಮುರಿದು ಊರಿಗೆ ಹಿಂದಿರುಗಬಹುದೆಂದು ಅವನು ಇಲ್ಲದ ಆಸೆ ಕಟ್ಟಿಕೊಂಡಿದ್ದ.

ಸುಮಂತ್ರ ಮೌನದಿಂದ ತಲೆ ತಗ್ಗಿಸಿದ, ದಶರಥನಿಗೆ ಸ್ಥಿತಿ ಅರ್ಥವಾಯಿತು. "ಅಯ್ಯೋ ರಾಮ! ಸೀತ! ಲಕ್ಷ್ಮಣ!" ಎಂದು ನೋವಿನಿಂದ ಒರಲಿದ.

ಅದೇ ದಿನ ರಾತ್ರಿ ದಶರಥ ಎದೆಯೊಡೆದು ಸತ್ತ. ಅಯೋಧ್ಯೆಗೆ ದೊರೆಯಿಲ್ಲದಂತಾಯಿತು. ಅದು ರಾಜ್ಯಕ್ಕೆ ಒಳ್ಳೆಯದಲ್ಲವೆಂದು ವಸಿಷ್ಠರಿಗೆ ಅನ್ನಿಸಿತು. ಅವರು ಆ ಕೂಡಲೇ ಭರತನಿಗೆ ಹೇಳಿಕಳಿಸಿದರು.

ವಿಚಿತ್ರವೆಂದರೆ ಕೈಕೆಯಿ ಭರತನಿಗೆ ಏನೊಂದು ಸಂದೇಶವನ್ನೂ ಕಳಿಸಲಿಲ್ಲ. ರಾಮ ಊರು ಬಿಟ್ಟು ಹೋಗಿ, ದೊರೆ ತೀರಿಕೊಂಡ ಮೇಲೆ ಅವಳು ಪೂರ್ತಿ ಬದಲಾದಳು. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ರಾಜ್ಯ ಸಂಪಾದಿಸಿಕೊಟ್ಟೆನೆಂಬ ಸಂತೋಷ ಈಗ ಉಳಿದಿರಲಿಲ್ಲ. ಪ್ರಾಯಶಃ ತಾನು ಮಾಡಿದ ತಪ್ಪಿಗೆ ಅವಳು ಪಶ್ಚಾತ್ತಾಪ ಪಡತೊಡಗಿದ್ದಳೇನೋ ಅಥವಾ ಮಗನಿಗೆ ಮುಖ ತೋರಿಸಲು ಹೆದರಿದ್ದಳೇನೋ. ಭರತ ಎಷ್ಟು ಘನವಂತ, ಧರ್ಮಿಷ್ಠ, ತಾನು ಮಾಡಿದುದಕ್ಕೆ ತನ್ನನ್ನು ದ್ವೇಷಿಸದೇ ಬಿಡ ಎಂದು ಗೊತ್ತಾಗಿದ್ದಿತ್ತೇನೋ.

ಭರತ ಆತುರ ಆತುರವಾಗಿ ಅಯೋಧ್ಯೆಗೆ ಹಿಂದಿರುಗಿದ. ಸಾಧಾರಣವಾಗಿ ಹರ್ಷೋಲ್ಲಾಸಗಳಿಂದ ತುಂಬಿರಬೇಕಾದ ಪಟ್ಟಣದ ಹಾದಿಬೀದಿಗಳು ಮೌನದಲ್ಲಿ ಮುಳುಗಿದ್ದುದನ್ನು ನೋಡಿ ಅವನಿಗೆ ದಿಗ್ಭ್ರಮೆಯಾಯಿತು. ಪಟ್ಟಣಕ್ಕೆ ಯಾವುದೋ ಶೋಕ ಬಡಿದಿರುವಂತಿದೆಯಲ್ಲ ಏಕೆ? ಅವನು ತಂದೆಯ ಅರಮನೆಯತ್ತ ಧಾವಿಸಿದ. ಅಲ್ಲಿ ಅವನನ್ನು ಯಾರೂ ಸ್ವಾಗತಿಸುವವರಿಲ್ಲ, ಅವನಿಗೆ ಇದ್ದಿದ್ದೂ ತಬ್ಬಿಬ್ಬಾಯಿತು. ತಂದೆಯೆಲ್ಲಿ? ರಾಮನೆಲ್ಲಿ? ತಾಯಿ ಕೈಕೆಯಿಯೆಲ್ಲಿ? ಭರತನಿಗೆ ಭಯವಾಯಿತು. ತಾಯಿಯ ಅರಮನೆಯತ್ತ ಓಡಿದ, ದುಃಖದಿಂದ ತುಂಬಿದ ಅವಳ ಕಾಂತಿಹೀನವಾದ ಮುಖವನ್ನು ನೋಡಿದಾಗ ಏನೋ ಪ್ರಮಾದವಾಗಿದೆಯೆಂದು ಅವನಿಗೆ ಗೊತ್ತಾಯಿತು. "ಅಪ್ಪ ಎಲ್ಲಮ್ಮ?" ಎಂದು ಅವನು ಅರಚಿದ. ಅವನು ಎಲ್ಲಿ ಕೋಪಗೊಳ್ಳುವನೋ ಎಂದು ಹೆದರುಹೆದರುತ್ತಲೇ ತಡವರಿಸುತ್ತ ಸುದ್ದಿ ತಿಳಿಸಿದಳು.

ತೀರಿಕೊಂಡರೆ? ಭರತ ಸುದ್ದಿ ಕೇಳಿ ದಿಗ್ಭ್ರಾಂತನಾದ. ಅಪ್ಪ ತೀರಿಕೊಂಡರೆ? ಹೇಗೆ? ಯಾಕೆ? ಯಾವಾಗ? ತನಗೆ ಮೊದಲೇ ಏಕೆ ಹೇಳಿಕಳಿಸಲಿಲ್ಲ? ದುಃಖದ ಭರದಲ್ಲಿ

ಅವನು ಜೋರಾಗಿ ಅಳತೊಡಗದ. "ಆದರೆ.... ಅಣ್ಣ ರಾಮನೆಲ್ಲಮ್ಮ ?" ಭರತ ಕೇಳಿದ. "ಅಪ್ಪನ ಬಳಿಯಿದ್ದು ಅವರ ಕೊನೆಯ ಮಾತನ್ನು ಕೇಳುವ ಭಾಗ್ಯ ಅವನಿಗಾದರೂ ಇತ್ತಲ್ಲ. ಸಾಯುವ ಮುನ್ನ ನನಗೇನಾದರೂ ತಿಳಿಸಲು ಹೇಳಿದರೆ?"

"ಅವರಾಡಿದ ಕೊನೆಯ ಮಾತು ರಾಮನನ್ನು ಕುರಿತದ್ದಾಗಿತ್ತು," ಕೈಕೆಯಿ ಹೇಳಿದಳು.

ಭರತನಿಗೆ ಆಶ್ಚರ್ಯವಾಯಿತು. "ಯಾಕೆ? ರಾಮ ಹತ್ತಿರ ಇರಲಿಲ್ಲವೆ?" ಕೊನೆಗೂ ಕೈಕೆಯಿ ಅವನಿಗೆ ನಡೆದದ್ದೆಲ್ಲವನ್ನೂ ಹೇಳಿದಳು. ಭರತನಿಗೆ ತನ್ನ ಕಿವಿಯನ್ನು ತಾನೇ ನಂಬಲಾಗಲಿಲ್ಲ, ರಾಮನನ್ನು ಕಾಡಿಗೆ ಅಟ್ಟಿದ್ದು! ತಂದೆ ಎದೆಯೊಡೆದು ಸತ್ತದ್ದು! ಇವೆಲ್ಲವೂ ತಾಯಿಯಿಂದಾಗಿ! ನಾಚಿಕೆ ಕೋಪಗಳಿಂದ ಭರತ ಅವಳ ಕಡೆ ನೋಡಿದ.

ತಾನು ಎಷ್ಟು ದೊಡ್ಡ ತಪ್ಪು ಮಾಡಿದೆನೆಂದು ಕೈಕೆಯಿಗೆ ಈಗ ಅರ್ಥವಾಯಿತು. ಆದರೆ ಭರತನಿಗೆ ಕೋಪ ತಡೆಯಲಾಗಲಿಲ್ಲ. ಅವನು ಅವಳ ಮೇಲೆ ಹುಚ್ಚಾಗಿ ಕಿರುಚುತ್ತಾ ರಾಮನನ್ನು ವಾಪಸು ಕರೆತರುವೆನೆಂದು ಪ್ರತಿಜ್ಞೆ ಮಾಡಿದ.

ಇದಾದಮೇಲೆ ಭರತನಿಗೆ ಶಾಂತಿ ಉಳಿಯಲಿಲ್ಲ. ಹಗಲೂ ರಾತ್ರಿ ರಾಮನನ್ನು ಹಿಂದಕ್ಕೆ ಕರೆತರುವುದು ಹೇಗೆಂಬ ಯೋಚನೆಯೇ. ಅವನು ವಸಿಷ್ಠರ ಬುದ್ಧಿವಾದ ಕೇಳಿದ. ಕೊನೆಗೆ ತಾನೇ ಅಣ್ಣನನ್ನು ಹುಡುಕಿಬರುವುದೆಂದು ನಿಶ್ಚಯಿಸಿದ. ಒಂದು ದೊಡ್ಡ ಸೇನೆಯೊಂದಿಗೆ ಅಯೋಧ್ಯೆ ಬಿಟ್ಟು ಹೊರಟು, ಕಾಡಿನ ನಡುಭಾಗ ತಲುಪಿದ.

ಕೈಕೆಯಿಯೂ ಜತೆಗೆ ಹೋದಳು. ಭರತ ತನ್ನ ತಪ್ಪಿಗೆ ತನ್ನನ್ನು ಎಷ್ಟೊಂದು ದ್ವೇಷಿಸುತ್ತಾನೆಂದು ಅವಳು ಕಣ್ಣಾರೆ ನೋಡಿದ್ದಳು. ಈಗ ಅವನಿಗೆ ಹೆಚ್ಚು ಮೆಚ್ಚಿಗೆಯಾದುದನ್ನು ಮಾಡಿ ಮತ್ತೆ ಅವನ ಪ್ರೀತಿಯನ್ನು ಸಂಪಾದಿಸುವೆನೆಂದು ಆಶಿಸಿದಳು. ಅನೇಕ ದಿನಗಳ ಪ್ರಯಾಣದನಂತರ ಭರತ ಚಿತ್ರಕೂಟಕ್ಕೆ ಬಂದ.

ಲಕ್ಷ್ಮಣನಿಗೆ ದೂರದಲ್ಲಿ ಧೂಳು ಮೋಡದಂತೆ ಕವಿಯುತ್ತಿದ್ದುದು ಕಾಣಿಸಿತು. ಮರ ಹತ್ತಿ ನೋಡಿದ, ಎಲ್ಲಕ್ಕಿಂತ ಮುಂದೆ ಭರತನ ಬಾವುಟವಿದ್ದ ದಶರಥನ ಸೇನೆ ಕಾಣಿಸಿತು. "ಬೇಗ ಏಳು, ರಾಮ. ಬಿಲ್ಲುಬಾಣ ಸಿದ್ಧ ಮಾಡಿಕೊ. ಭರತ ನಮ್ಮೊಂದಿಗೆ ಕಾದಾಡಲು ಬರುತ್ತಿದ್ದಾನೆ," ಎಂದು ಅವನು ಕೋಪದಿಂದ ಅರಚಿದ.

ರಾಮ ನಕ್ಕ. "ನಿನಗೆ ಹಾಗನ್ನಿಸುತ್ತದೆಯೇ? ಭರತ ನಮ್ಮೊಂದಿಗೆ ಕಾದಾಡುವವನೆ? ಅವನು ನನಗೆ ಕಿರೀಟ ಒಪ್ಪಿಸಲು ಇಲ್ಲಿಗೆ ಬರುತ್ತಿದ್ದಾನೆ ಎಂದು ಕಾಣುತ್ತದೆ."

"ನಿನಗೆ ಕೆಟ್ಟದ್ದನ್ನು ಬಗೆಯುವವರೆಗೂ ನೀನು ಒಳ್ಳೆಯವನೆ!" ಲಕ್ಷ್ಮಣ ಮುನಿಸಿಕೊಂಡು ಹೇಳಿದ.

"ಸ್ವಲ್ಪ ಕಾದು ನೋಡು, ಲಕ್ಷ್ಮಣ. ಅಲ್ಲಿಯವರೆಗೆ ಬಾಣವನ್ನು ವಾಪಸು ಬತ್ತಳಿಕೆಗೆ ಸೇರಿಸು."

ಭರತನ ಸೇನೆ ಬಂತು, ಆ ಯುವರಾಜಕುಮಾರ ಅತ್ಯುತ್ಸಾಹದಿಂದ ಬೆಟ್ಟ ಹತ್ತ ತೊಡಗಿದ. ಬೆಟ್ಟದ ತುದಿ ತಲುಪಿದಾಗ ಆಶ್ರಮದ ಬಾಗಿಲಲ್ಲಿ ರಾಮನ ಮುಖ ಮುಂಜಾನೆ ಪೂರ್ವದಲ್ಲಿ ಹುಟ್ಟುತ್ತಿರುವ ಸೂರ್ಯನಂತೆ ಕಂಡಿತು. ಭರತ 'ರಾಮ! ನನ್ನ ರಾಮ!' ಎನ್ನುತ್ತ ಮುನ್ನುಗ್ಗಿದ. ರಾಮ ಎದ್ದು ಅವನನ್ನು ಆದರದಿಂದ ಬರಮಾಡಿಕೊಂಡ. ಭರತನ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿದವು, ಅವನ ಕಾಲುಗಳು ನಡುಗುತ್ತಿದ್ದವು. ಅಣ್ಣನ ಬಳಿಗೆ ಬರುವ ಮುಂಚೆಯೇ ಅವನು ಕುಸಿದುಬಿದ್ದ. ರಾಮ ಕೆಳಬಗ್ಗಿ ತಮ್ಮನನ್ನು ಪ್ರೀತಿ ಯಿಂದ ತಬ್ಬಿಕೊಂಡ. ಲಕ್ಷ್ಮಣ ನಾಚಿಕೆಯಿಂದ ತಲೆ ತಗ್ಗಿಸಿದ.

"ಅಪ್ಪ ಹೇಗಿದ್ದಾರೆ? ಅವರೊಬ್ಬರನ್ನೇ ಒಂಟಿಯಾಗಿ ಅಯೋಧ್ಯೆಯಲ್ಲಿ ಏಕೆ ಬಿಟ್ಟು ಬಂದೆ?" ರಾಮ ಕೇಳಿದ.

ಭರತ ಬಿಕ್ಕಿ ಬಿಕ್ಕಿ ಅಳುತ್ತಾ ರಾಮನಿಗೆ ತಂದೆಯ ಸಾವಿನ ವಿಷಯ ತಿಳಿಸಿದ. ರಾಮ ದುಃಖದಿಂದ ತಲೆ ತಗ್ಗಿಸಿದ. ಕೋಮಲೆ ಸೀತೆಯ ಕಣ್ಣುಗಳಲ್ಲಿ ನೀರುಕ್ಕಿತು.

"ಹೌದು! ಅಪ್ಪ ತೀರಿಕೊಂಡರು. ಆದ್ದರಿಂದ ನೀನು ವಾಪಸು ಬಂದು ರಾಜ್ಯವನು ವಹಿಸಿಕೊಳ್ಳಬೇಕು," ಭರತ ದೃಢವಾಗಿಯೇ ಹೇಳಿದ.

ರಾಮ ತಲೆ ಅಲ್ಲಾಡಿಸಿದ. "ತಮ್ಮ, ನಾನು ತಂದೆಗೆ ಏನು ವಚನ ಕೊಟ್ಟಿರುವೆನೆಂದು ಮರೆತೆಯಾ? ಕೊಟ್ಟ ಮಾತನ್ನು ಹೇಗೆ ಮುರಿಯಲಿ?"

"ಇಲ್ಲ ಮುರಿಯಬೇಕಾದ್ದಿಲ್ಲ, ನಿನ್ನ ಬದಲು ನಾನು ಇಲ್ಲಿರುತ್ತೇನೆ. ಇಲ್ಲಿ ನೋಡು ಹದಿನಾಲ್ಕು ವರ್ಷಕಾಲ ಕಾಡಿನಲ್ಲಿರಲು ತಕ್ಕ ಉಡಿಗೆ ಉಟ್ಟು ಸಿದ್ಧನಾಗಿ ಬಂದಿದ್ದೇನೆ. ನಾನು ನಿನ್ನ ಸ್ಥಾನ ವಹಿಸಿಕೊಳ್ಳಲು ಬಂದಿದ್ದೇನೆ."

"ಹೇಗೆ ತಾನೆ ನಿನಗೆ ಆ ಕಷ್ಟ ಕೊಡಲಿ. ಸಿಂಹಾಸನ ನಿನ್ನದು. ಅಪ್ಪ ಕೈಕೆಯಿಗೆ ಹಾಗೆ ಮಾತು ಕೊಟ್ಟಿದ್ದರು."

"ಸಿಂಹಾಸನ ನನ್ನದಾದರೆ ನಾನು ಅದನ್ನು ನಿನಗೆ ವಹಿಸಿಕೊಡುತ್ತಿದ್ದೇನೆ. ಅದು ನಿನಗೆ ನನ್ನ ಉಡುಗೊರೆ. ತಮ್ಮ ಕೊಡುವ ಉಡುಗೊರೆಯನ್ನು ನಿರಾಕರಿಸುವೆಯಾ?"

ಭರತನ ಪ್ರೀತಿಗೆ ರಾಮನ ಎದೆ ಕರಗಿತು. ಆದರೆ ಅವನಿಗೆ ತನ್ನ ಕರ್ತವ್ಯವೇನೆಂದು ಗೊತ್ತಿತ್ತು. ಅವನು ಭರತನಿಗೆ ಅಯೋಧ್ಯೆಗೆ ಹಿಂದಿರುಗಿ ಹೋಗಿ ತಂದೆ ಇಚ್ಛಿಸಿದಂತೆ ಪ್ರಜಾಪಾಲನೆ ಮಾಡಲು ಹೇಳಿದ. "ನಾನು ಮಾತ್ರ ಕೊಟ್ಟ ವಚನವನ್ನು ಪೂರೈಸಿ, ಹದಿ ನಾಲ್ಕು ವರ್ಷಗಳ ನಂತರ ಹಿಂದಿರುಗುತ್ತೇನೆ. ಹಿಂದಕ್ಕೆ ಬಂದು ನಿನ್ನ ಉಡುಗೊರೆಯನ್ನು ಸ್ವೀಕರಿಸುತ್ತೇನೆಂದು ಮಾತು ಕೊಡುತ್ತೇನೆ," ಎಂದ ರಾಮ.

ಭರತ ಅಷ್ಟರಿಂದಲೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು, ಅಯೋಧ್ಯೆಗೆ ಹಿಂದಿರುಗದೆ ವಿಧಿಯಿಲ್ಲವೆಂದು ಅವನಿಗೆ ಗೊತ್ತಿತ್ತು. ಆದರೆ ನಿಜವಾಗಿ ರಾಮನಿಗೆ ಸಲ್ಲಬೇಕಾದ ಸಿಂಹಾ



ಭರತ ಅಣ್ಣ ಕುಳಿತುಕೊಳ್ಳಬೇಕಾಗಿದ್ದ ಸಿಂಹಾಸನದ ಮೇಲೆ ಅವನ ಪಾದುಕೆಗಳನ್ನಿಟ್ಟ

ಸನದ ಮೇಲೆ ಕುಳಿತುಕೊಳ್ಳಲು ಮನಸ್ಸು ಒಪ್ಪಲಿಲ್ಲ. "ರಾಮ, ನಿನ್ನ ಮಾತಿಗೆ ಒಪ್ಪಲೇ ಬೇಕೆಂದು ಬಲ್ಲೆ. ಆದರೆ ನಿನಗೆ ಸೇರಿದ ಒಂದು ವಸ್ತುವನ್ನು ನನ್ನೊಡನೆ ತೆಗೆದುಕೊಂಡು ಹೋಗಲು ಕೊಡಬೇಕು," ಭರತ ಗೋಗರೆದ. ರಾಮ ಒಪ್ಪಿದ. ಭರತ ರಾಮನ ಪಾದುಕೆ ಗಳನ್ನು ಎತ್ತಿಕೊಂಡು, ಅವುಗಳನ್ನು ಅತ್ಯಂತ ಭಕ್ತಿಯಿಂದ ಅಯೋಧ್ಯೆಗೆ ಕೊಂಡೊಯ್ದ. ಅಲ್ಲಿ ಸಿಂಹಾಸನದ ಮೇಲೆ, ರಾಮ ಕುಳಿತುಕೊಳ್ಳಬೇಕಾಗಿದ್ದ ಸ್ಥಳದಲ್ಲಿ ಪಾದುಕೆಗಳನ್ನು ಇರಿಸಿದ, ರಾಮನ ಹೆಸರಿನಲ್ಲಿ ರಾಜ್ಯವಾಳಿದ. ರಾಮ ಕಾಡಿನಲ್ಲಿ ಅಲೆದಾಡುವಾಗ ತಾನು ಅರಮನೆಯಲ್ಲಿ ವಾಸಿಸುವುದು ಅವನಿಂದಾಗಲಿಲ್ಲ. ಅಯೋಧ್ಯೆಯ ಹತ್ತಿರ ಒಂದು ಹಳ್ಳಿ ಯಲ್ಲಿ ವಾಸಮಾಡುತ್ತ ರಾಮ ಯಾವಾಗ ಹಿಂದಿರುಗುವನೋ ಎಂದು ದಿನವೆಣಿಸುತ್ತಾ ಕಾಲ ಹಾಕತೊಡಗಿದ. ಭರತ ಅದ್ಭುತ ಮನುಷ್ಯ. ಕೆಲವು ವಿಧದಲ್ಲಿ, ಅವನು ರಾಮನಿಗಿಂತ ದೊಡ್ಡವನು ಎನ್ನುವವರೂ ಇದ್ದಾರೆ.

ಶೂರ್ಪಣಖಿ

ಭರತ ಹೋದ ಮೇಲೆ ರಾಮ ಅವನನ್ನು ಕುರಿತೇ ಯೋಚಿಸತೊಡಗಿದ. ಚಿತ್ರ ಕೂಟದ ಸುತ್ತಮುತ್ತಿನದೆಲ್ಲವೂ ಭರತನನ್ನು ದುಃಖದಿಂದ ಬೀಳ್ಕೊಟ್ಟ ಸನ್ನಿವೇಶವನ್ನೇ ನೆನಪಿಗೆ ತರುತ್ತಿದ್ದವು. ಚಿತ್ರಕೂಟದಲ್ಲಿ ಸೀತಾಲಕ್ಷ್ಮಣರೊಂದಿಗೆ ಸುಖದಿಂದ ಇದ್ದರೂ ಅದನ್ನು ಬಿಟ್ಟು ಹೋಗುವುದೇ ಸರಿಯೆಂದು ರಾಮ ತೀರ್ಮಾನಿಸಿದ. ಹೀಗಾಗಿ ರಾಮಸೀತೆ ಲಕ್ಷ್ಮಣರು ಮುಂದಿನ ಕೆಲವು ವರ್ಷಗಳನ್ನು ಮಧ್ಯ ಭಾರತದ ಕಾಡುಗಳಲ್ಲಿ ಅಲೆದಾಡುತ್ತ ಕಳೆದರು. ಅವರು ಎಲ್ಲಿ ಹೋದರೂ ಋಷಿಗಳು ಅವರಿಗೆ ಸ್ವಾಗತ ಬಯಸಿ, ತಂಗಲು ಸ್ಥಳ ಕೊಡುತ್ತಿದ್ದರು.

ಸೀತೆಗೆ ಅರಮನೆಯ ಸುಖಸೌಕರ್ಯಗಳೊಂದೂ ಇರಲಿಲ್ಲವಾದರೂ ರಾಮ ಜತೆಗೆ ಇದ್ದುದರಿಂದ ಅವಳು ಹೂವಿನಂತೆ ಅರಳುತ್ತಿದ್ದಳು. ಲಕ್ಷ್ಮಣನಿಗಂತೂ ಅವಳ ಮಾತೆಂದರೆ ವೇದವಾಕ್ಯ. ಅವನು ಬದುಕಿದ್ದು ಅವಳ ಸೇವೆಗಾಗಿಯೇ. ಅವರ ಬದುಕಿನಲ್ಲಿ ಶೂರ್ಪಣಖಿ ಪ್ರವೇಶಿಸದೇ ಇದ್ದಿದ್ದರೆ ಅವರು ಮೂವರೂ ಸುಖವಾಗಿರುತ್ತಿದ್ದರು.

ಒಂದು ದಿನ ದಂಡಕಾರಣ್ಯವೆಂಬ ಸ್ಥಳದಿಂದ ಕೆಲವು ಋಷಿಗಳು ರಾಮನಲ್ಲಿಗೆ ಬಂದು ತಮ್ಮ ಕಷ್ಟ ತೋಡಿಕೊಂಡರು: "ರಾವಣನ ದುಷ್ಟ ಅನುಯಾಯಿಗಳಿಂದ ನೀನು ನಮ್ಮನ್ನು ಬದುಕಿಸಬೇಕು, ರಾಮ. ಅವರು ದಂಡಕಾರಣ್ಯದಲ್ಲಿ ವಾಸಮಾಡಿಕೊಂಡಿದ್ದು ನಮಗೆ ಇತಿ ಮಿತಿಯಿಲ್ಲದಷ್ಟು ತೊಂದರೆ ಕೊಡುತ್ತಿದ್ದಾರೆ." ರಾಮ ಅವರ ಮಾತನ್ನು ಕಿವಿಗೊಟ್ಟು ಕೇಳಿದ, ಅವರನ್ನು ಕಂಡು ಅವನಿಗೆ ಅಯ್ಯೋ ಅನ್ನಿಸಿತು. ದಂಡಕಾರಣ್ಯಕ್ಕೆ ಬಂದು ಆ ಕ್ರೂರ ರಾಕ್ಷಸರಿಗೆ ಬುದ್ಧಿ ಕಲಿಸುವುದಾಗಿ ಮಾತು ಕೊಟ್ಟ.

ದಂಡಕಾರಣ್ಯದಲ್ಲೆಲ್ಲಾ ಪಂಚವಟಿ ಎಂಬುದು ಸೊಗಸಾದ ಸ್ಥಳ. ಅಲ್ಲಿ ಲಕ್ಷ್ಮಣ ಸೀತೆಗೆ ಒಂದು ಪುಟ್ಟ ಗುಡಿಸಿಲು ಕಟ್ಟಿಕೊಟ್ಟ. ಅವಳು ಇಡೀದಿನ ಗುಡಿಸಿಲಿನ ಒಳಗೂ ಹೊರಗೂ ಹಕ್ಕಿಯಂತೆ ಓಡಾಡಿಕೊಂಡಿದ್ದಳು. ಅವಳಿಗೆ ಚಿಂತೆಯೆಂಬುದೇ ಇರಲಿಲ್ಲ.

ಅಲ್ಲಿಯೇ ಹತ್ತಿರದಲ್ಲಿ ರಾವಣನ ತಮ್ಮ ಹಾಗೂ ತಂಗಿ ಶೂರ್ಪಣಖಿ ವಾಸಿಸುತ್ತಿದ್ದರು. ಒಂದು ದಿನ ಶೂರ್ಪಣಖಿ ರಾಮನ ಗುಡಿಸಿಲಿನ ಮುಂದೆ ಹಾದು ಹೋದಳು. ಅವನ ಚೆಲುವಾದ ರೂಪ, ಗಂಭೀರವಾದ ನಡೆನುಡಿಗಳನ್ನು ನೋಡಿ ಅವಳು ಅವನಲ್ಲಿ ಮೋಹಿತಳಾದಳು. ಆಮೇಲೆ ಒಂದು ದಿನ, ರಾಕ್ಷಸಿಯರಿಗೆ ಅಪರೂಪವಲ್ಲದ ದಿಟ್ಟತನದಿಂದ 'ನೀನು ನನ್ನ ಗಂಡನಾಗು' ಎಂದು ಅವನನ್ನು ಕೇಳಿಯೇಬಿಟ್ಟಳು. ರಾಮ ಕೋಪದಿಂದ ನಿರಾಕರಿಸಿದ. ಶೂರ್ಪಣಖಿ ಅಸೂಯೆ ಕೋಪಗಳಿಂದ ಬುದ್ಧಿಗೆಟ್ಟು ಸೀತೆಯ ಮೈ ಮೇಲೆ ಬಿದ್ದಳು. ಆದರೆ ಅದೃಷ್ಟವಶಾತ್ ಲಕ್ಷ್ಮಣ ಅವಳಿಗಿಂತ ಚುರುಕಾಗಿ ವರ್ತಿಸಿ, ಅವಳ ಕಿವಿ ಮೂಗುಗಳನ್ನು ಕೊಯ್ದು, ಅಲ್ಲಿಂದ ಅವಳನ್ನು ಅಟ್ಟಿ ಓಡಿಸಿದ.

ನೋವು ಅಪಮಾನಗಳಿಂದ ಹುಚ್ಚಾದ ರಾಕ್ಷಸಿ ಸೇಡು ತೀರಿಸಿಕೊಳ್ಳುವ ಬೆದರಿಕೆ ಹಾಕಿ ಸೋದರನಲ್ಲಿಗೆ ಓಡಿದಳು. ಸದ್ಯದಲ್ಲಿಯೇ ರಾಕ್ಷಸರ ಒಂದು ದೊಡ್ಡ ಸೇನೆ ಪಂಚವಟಿಗೆ ನುಗ್ಗಿತು. ಇತ್ತ ಲಕ್ಷ್ಮಣ ಸೀತೆಯ ಕಾವಲು ಕಾಯುತ್ತಿರುವಾಗ ಅತ್ತ ರಾಮ ಧೈರ್ಯ ತಾಳ್ಮೆಗಳಿಂದ ಒಂಟಿಯಾಗಿಯೇ ರಾಕ್ಷಸರನ್ನು ಎದುರಿಸಿದ. ಬಿಲ್ಲು ಹಿಡಿದು ಇಡೀ ಸೈನ್ಯವನ್ನು ನಷ್ಟಗೊಳಿಸಿದ. ಅದಾದ ಮೇಲೆ ದಂಡಕಾರಣ್ಯದಲ್ಲಿ ರಾಕ್ಷಸರ ಹೇಳ ಹೆಸರಿಲ್ಲದಂತಾಯಿತು.

ಶೂರ್ಪಣಖಿ ದಿಗಿಲುಗೊಂಡು ಲಂಕೆಗೆ ಓಡಿಹೋದಳು. ಅಲ್ಲಿ ರಾವಣನ ಕಾಲಮೇಲೆ ಬಿದ್ದು, "ಅಣ್ಣ, ನನ್ನನ್ನು ಕಾಪಾಡು" ಎಂದು ಅರಚಿದಳು. ರಾಮ ಹೇಗೆ ಇಡೀ ರಾಕ್ಷಸ ಸೇನೆಯನ್ನು ಧ್ವಂಸಮಾಡಿದನೆಂಬುದನ್ನು ಅವನ ನಂಬದ ಕಿವಿಗೆ ತುಂಬಿದಳು. ಆದರೆ ಕಾದಾಟ ಏಕೆ, ಹೇಗೆ ಷುರುವಾಯಿತು ಎಂಬುದನ್ನು ಮಾತ್ರ ಹೇಳಲಿಲ್ಲ. ತನ್ನಿಂದಾದ ತಪ್ಪೆಂದರೆ ಅವನಿಗಾಗಿ ಚೆಲುವೆ ಸೀತೆಯನ್ನು ಒಲಿಸಿಕೊಂಡು ತರಲು ಪ್ರಯತ್ನಿಸಿದುದು ಎಷ್ಟೋ ಅಷ್ಟೇ ಎಂದು ನಂಬಿಕೆ ಹುಟ್ಟಿಸಿದಳು. ರಾವಣನಿಗೆ ಚೆಲುವೆ ಹೆಂಗಸರೆಂದರೆ ಇಷ್ಟ, ಅವರನ್ನು ಗಳಿಸಿಕೊಳ್ಳಲು ಅವನು ಯಾವುದಕ್ಕೂ ಸಿದ್ಧ ಎಂದು ಲೋಕಕ್ಕೇ ಗೊತ್ತು. ಶೂರ್ಪಣಖಿಯ ಕಿವಿಮೂಗಿಲ್ಲದ ವಿಕಾರವಾದ ಮುಖವನ್ನು ನೋಡಿ, ಅವಳ ಗೋಳನ್ನು ಕೇಳಿದಾಗ ಅವನಿಗೆ ಕೋಪ ತಡೆಯಲಾಗಲಿಲ್ಲ.



ದಂಡಕಾರಣ್ಯದಲ್ಲೆಲ್ಲಾ ಪಂಚವಟಿ ತುಂಬ ಸೊಗಸಾದ ಸ್ಥಳ

"ಅಣ್ಣಾ ನಾನು ಇಷ್ಟೆಲ್ಲಾ ಅಪಮಾನಕ್ಕೆ ಗುರಿಯಾದುದು ನಿನಗಾಗಿ. ದಂಡಕಾರಣ್ಯದ ರಾಕ್ಷಸರು ಸತ್ತದ್ದು ಸಹ ನಿನಗಾಗಿಯೇ." ಶೂರ್ಪಣಖಿ ಹೇಳಿದಳು, "ಆ ಚೆಲುವೆ ಸೀತೆಯನ್ನು ನಿನಗೆ ತಂದುಕೊಡಬೇಕೆಂಬುದು ನಮ್ಮ ಬಯಕೆಯಾಗಿತ್ತು. ಆ ಪ್ರಯತ್ನದಲ್ಲಿ ನಿನ್ನ ನಿಷ್ಠಾವಂತ ಅನುಯಾಯಿಗಳೆಲ್ಲ ಜೀವ ತೆತ್ತರು. ನೀನು ಸೇಡು ತೀರಿಸಿಕೊಳ್ಳಲೇಬೇಕು, ನಿನ್ನ ಮುಂದೆ ರಾಮನೆಲ್ಲಿ? ಹೋಗಿ ಅವನನ್ನು ಕೊಂದು ಆ ಅದ್ಭುತ ಸುಂದರಿಯನ್ನು ಗೆದ್ದು ಬಾ, ಅಣ್ಣ."

ತಂಗಿಗಾದ ಅವಮಾನಕ್ಕೆ ಸೇಡು ತೀರಿದಂತೆಯೂ ಆಗಬೇಕು, ಜತೆಗೇ ರಾಮನ ಚೆಲುವೆ ಹೆಂಡತಿ ತನಗೆ ದೊರೆಯಲೂಬೇಕು - ಅಂತಹ ಒಂದು ಹಂಚಿಕೆಯನ್ನು ರಾವಣ ಮಿಂಚಿನ ವೇಗದಲ್ಲಿ ಯೋಚಿಸಿದ. ಅವನು ಪಂಚವಟಿಗೆ ಹೊರಟ. ದಾರಿಯಲ್ಲಿ ತಾಟಕಿಯ ಮಗ ಮಾರೀಚನ ಆಶ್ರಮದಲ್ಲಿ ತಂಗಿ ಅವನ ನೆರವು ಕೇಳಿದ.

"ನೋಡು ಮಾರೀಚ, ನಿನ್ನ ದೊರೆಯ ಸೇವೆ ಮಾಡಲು ಈಗೊಂದು ಅಪರೂಪದ ಅವಕಾಶ ಸಿಕ್ಕಿದೆ. ರಾಮ ಇಲ್ಲೇ ಹತ್ತಿರದಲ್ಲೇ ವಾಸಿಸುತ್ತಾನೆಂದು ನೀನು ಬಲ್ಲೆ. ನಾನು ಸೀತೆಯನ್ನು ಹಾರಿಸಿಕೊಂಡು ಹೋಗಲು ಬಂದಿದ್ದೇನೆ. ನೀನು ಸಹಾಯ ಮಾಡಬೇಕು."

ರಾಮನ ಹೆಸರು ಕೇಳಿದೊಡನೆಯೇ ತಾಯಿ ತಾಟಕಿಗೆ ಏನು ಗತಿಯಾಯಿತೆಂಬುದರ ನೆನಪು ಬಂದು ಮಾರೀಚ ನಡುಗತೊಡಗಿದ. ರಾಮ ಮಿಥಿಲಾ ನಗರಕ್ಕೆ ಸೀತೆಯ ಮನೆಗೆ ಹೋಗುವ ದಾರಿಯಲ್ಲಿ ಆ ಕ್ರೂರ ರಾಕ್ಷಸಿಯನ್ನು ಕೊಂದಿದ್ದನಲ್ಲವೆ! ತಾಯಿ ಸಾಯುವ ಹೊತ್ತಿನಲ್ಲಿ ಮಾರೀಚ ಅವಳ ಬದಿಗಿದ್ದ. ಅವನಿಗೆ ದಿಗಿಲು ಹತ್ತಿಕೊಂಡದ್ದು ಆಶ್ಚರ್ಯವೇನಲ್ಲ.

ಮಾರೀಚ ಹೇಳಿದ, "ಅಯ್ಯಾ ಮಿತ್ರ, ದೊರೆ, ನಾನು ಸದಾ ನಿನ್ನ ನೆಚ್ಚಿಗೆಗೆ ಪಾತ್ರನೆಂದು ನಿನಗೆ ಗೊತ್ತಿದೆ. ಆದರೆ ಒಂದು ಕ್ಷಣ ಶಾಂತಿಯಿಂದ ಯೋಚಿಸೆಂದು ಬೇಡಿಕೊಳ್ಳುತ್ತೇನೆ. ರಾಮ ಎಂತಹ ಮಹಾನುಭಾವ, ಎಷ್ಟು ಶೂರ, ಬಲಿಷ್ಠ ಎಂದು ಪ್ರಾಯಶಃ ನೀನು ಕಾಣೆ."

ರಾವಣ ತಿರಸ್ಕಾರದಿಂದ ಹೇಳಿದ, "ಏನು ಮನುಷ್ಯಮಾತ್ರದವನಾದ ಆ ರಾಮನ ಬಗ್ಗೆ ನನಗೆ ಹೆದರಿಕೆ ಎಂದುಕೊಂಡೆಯಾ? ನನಗೆ ಸೀತೆ ಬೇಕು. ಹೇಗಾದರೂ ಮಾಡಿ ನಾನು ಅವಳನ್ನು ಪಡೆಯಬೇಕು."

"ರಾಮನೆಂದರೆ ನನಗೆ ಭಯ, ಅವನನ್ನು ಎದುರಿಸಲಾರೆ."

"ಎದುರಿಸೆಂದು ಯಾರು ಹೇಳಿದರು? ನೀನು ಫಳಫಳನೆ ಮಿರುಗುವ ಚಿನ್ನದ ಜಿಂಕೆಯ ರೂಪ ಧರಿಸಿ, ಸೀತೆಯಿರುವ ಆಶ್ರಮದ ಮುಂದೆ ಒಮ್ಮೆ ಹಾದುಹೋಗು, ಅಷ್ಟೆ. ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ," ರಾವಣ ಹೇಳಿದ. ದುರ್ದೈವಿ ಸೀತೆಯ ವಿರುದ್ಧ ತಾನು ಹೂಡಲಿರುವ ಕಪಟೋಪಾಯವನ್ನು ನೆನಸಿಕೊಂಡು ಅವನು ಕೆಟ್ಟದಾಗಿ ನಕ್ಕ.

ಮಾರೀಚನಿಗೆ ಭಯ, ತಾವು ಮಾಡಲಿರುವುದು ವಿವೇಕದ ಕೆಲಸವಲ್ಲವೆಂದು ಅವನಿಗೆ ಖಚಿತವಾಗಿತ್ತು. ಆದರೆ ಅದರ ವಿರುದ್ಧ ಒಂದು ಮಾತಾಡಿದರೂ ಸರಿ, ಅವನನ್ನು ಕೊಲ್ಲುವುದಾಗಿ ರಾವಣ ಬೆದರಿಕೆ ಹಾಕಿದ.

ಮಾರೀಚನಿಗೆ ತನ್ನ ಕೊನೆ ಹತ್ತಿರವಾಗಿದೆಯೆಂದು ಗೊತ್ತಾಯಿತು. ಅವನು ಒಂದು ಕ್ಷಣ ಯೋಚಿಸಿದ. "ನಿನ್ನ ಕೈಯಲ್ಲಿ ಸಾಯುವುದಕ್ಕಿಂತ ರಾಮನ ಕೈಯಲ್ಲಿ ಸಾಯುವುದು ಮೇಲು" ಎನ್ನುತ್ತ ರಾವಣ ಹೇಳಿದ ದುಷ್ಟ ತಂತ್ರಕ್ಕೆ ಸಿದ್ಧನಾದ.

ಸೀತೆ ಮತ್ತು ಚಿನ್ನದ ಜಿಂಕೆ

ಒಂದು ದಿನ ರಾಮಸೀತೆಯರು ತಮ್ಮ ಪುಟ್ಟ ಗುಡಿಸಲಿನ ಹೊರಗೆ ಹೂಮರಗಳನ್ನು ನೋಡುತ್ತಾ ಕುಳಿತಿದ್ದಾಗ ಒಂದು ಚೆಲುವಾದ ಚಿನ್ನದ ಜಿಂಕೆ ಕಣ್ಣಮುಂದೆ ಮಿಂಚಿ ಹೋಯಿತು.

"ಹೋ . . . ಹೋ," ಸೀತೆ ಸಂತೋಷ ತಡೆಯಲಾರದೆ ಕೂಗಿಕೊಂಡಳು. "ಎಷ್ಟು ಚೆಲುವಾದ ಪ್ರಾಣಿ. ನೀವು ಅದನ್ನು ನನಗೆ ಆಟಕ್ಕೆ ತಂದುಕೊಡಲೆಂದು ಆಸೆ."

ರಾಮನಿಗೆ ಸೀತೆಯೆಂದರೆ ಪ್ರಾಣ. ಅವಳಿಗೆ ಕಾಡಿನ ಬದುಕು ಬೇಸರ ಎಂದುಕೊಂಡು ರಾಮ ಅವಳ ಆಸೆಗಳನ್ನೆಲ್ಲಾ ಪೂರೈಸುತ್ತಿದ್ದ. ಅವನು ಆ ಕ್ಷಣ ಎದ್ದು ಜಿಂಕೆಯನ್ನು ಅಟ್ಟಿಸಿಕೊಂಡು ಹೋದ.

"ಅದು ನಿಜವಾದ ಜಿಂಕೆಯೆನಿಸುವುದಿಲ್ಲಣ್ಣ. ಯಾರೋ ರೂಪ ಮರಸಿಬಂದ ರಾಕ್ಷಸರಿರಬೇಕು," ಲಕ್ಷ್ಮಣ ಅವನನ್ನು ತಡೆಯಲು ಪ್ರಯತ್ನಿಸಿದ. ಸೀತೆ ನಗುತ್ತ ಹೇಳಿದಳು, "ಇವರಿಗೇನು ರಾಕ್ಷಸರೆಂದರೆ ಹೆದರಿಕೆಯೆ? ಅವರು ರೂಪ ಮರಸಿ ಬಂದರೆ ತಾನೆ ಏನು?"

"ಸೀತೆ ಹೇಳುವುದು ಸರಿ! ರಾಕ್ಷಸರೆಂದರೆ ನನಗೆ ಭಯವಿಲ್ಲ. ಜಿಂಕೆ ನಿಜವಾದದ್ದಾದರೆ ಅದನ್ನು ಹಿಡಿದು ತರುತ್ತೇನೆ. ಅದು ಯಾವನಾದರೂ ರಾಕ್ಷಸನಾದರೆ ಕೊಂದುಹಾಕುತ್ತೇನೆ. ನೀನು ಹೆದರಬೇಡ, ಸೀತೆಯನ್ನು ಜೋಪಾನವಾಗಿ ನೋಡಿಕೊ. ನೆನಪಿರಲಿ ಏನೇಬರಲಿ, ಅವಳನ್ನು ಒಂಟಿ ಬಿಡಬೇಡ," ಎನ್ನುತ್ತ ರಾಮ ಚಿನ್ನದ ಜಿಂಕೆಯ ಬೆನ್ನಟ್ಟಿ ಹೋದ.

ಆ ಜಿಂಕೆ ಮಾರೀಚನಲ್ಲದೆ ಬೇರೆ ಯಾರೂ ಅಲ್ಲವೆಂದು ನೀವು ಊಹಿಸಿರಬೇಕು. ಜಿಂಕೆ ಓಡುತ್ತ ಹೋಗಿ ದಟ್ಟವಾದ ಕಾಡನ್ನು ಹೊಕ್ಕಿತು. ರಾಮ ಹಿಂದೆಯೇ ಅಟ್ಟಿಸಿಕೊಂಡು ಹೋದ. ಮುಂದೆ ಜಿಂಕೆ, ಹಿಂದೆ ರಾಮ – ಹೀಗೆ ಅವರು ಎಷ್ಟೋ ಗಾವುದ ದೂರ ಓಡಿದರು. ಕೊನೆಗೆ ರಾಮನಿಗೆ ಇನ್ನು ಓಡಲಾರದಾದಾಗ ಬಾಣ ಬಿಟ್ಟು ಅದನ್ನು ಕೊಂದ.

ರಾಮನ ಬಾಣ ಮಾರೀಚನ ಎದೆ ಹೊಕ್ಕಾಗ ತಾನಿನ್ನು ಸಾಯುವೆನೆಂದು ಮಾರೀಚನಿಗೆ ಗೊತ್ತಾಯಿತು. ಅವನು ರಾವಣನಿಗೆ ಕೊಟ್ಟ ಮಾತನ್ನು ಉಳಿಸಿಕೊಂಡು ತದ್ವತ್ ರಾಮನ ಧ್ವನಿಯನ್ನೇ ಅನುಸರಿಸಿ, "ಹಾ ಸೀತ! ಹಾ ಲಕ್ಷ್ಮಣ! ನೆರವಿಗೆ ಬನ್ನಿ" ಎಂದು ಕೂಗುತ್ತ ಸತ್ತು ಕೆಳಗುರುಳಿದ. ಅವನು ಸತ್ತ ಮೇಲೆ ಅವನ ದೇಹ ಮತ್ತೆ ರಾಕ್ಷಸನದಾಯಿತು. ರಾಮನಿಗೆ ತಾನು ಅಟ್ಟಿಕೊಂಡು ಬಂದದ್ದು ಜಿಂಕೆಯಲ್ಲ, ರಾಕ್ಷಸ ಎಂದು ಗೊತ್ತಾಯಿತು. "ಇದು ಎಂತಹ ಕಪಟ? ಅವನು ನನ್ನ ಧ್ವನಿಯನ್ನು ಅನುಸರಿಸಿ ಕೂಗಿದೇಕೆ?" ಎಂದು ವಿಸ್ಮಯಪಡುತ್ತ, ರಾಮ ಬೇಗ ಬೇಗ ಆಶ್ರಮದ ಕಡೆ ಹೆಜ್ಜೆ ಹಾಕಿದ.



ಮಾರೀಚ ಚಿನ್ನದ ಮಿನುಗುಜಿಂಕೆಯಾಗಿ ರೂಪ ಬದಲಾಯಿಸಿಕೊಂಡ.

ರಾಮನ ಆರ್ತನಾದವನ್ನು ಕೇಳಿದಾಗ ಸೀತೆಗೆ ದಿಗಿಲಾಯಿತು. ಅಣ್ಣನ ಸಹಾಯಕ್ಕೆ ಹೋಗೆಂದು ಅವಳು ಲಕ್ಷ್ಮಣನಿಗೆ ಗೋಗರೆದಳು.

ಲಕ್ಷ್ಮಣ ಅವಳನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದ. " ಅದು ರಾಮನ ಧ್ವನಿಯಲ್ಲ. ಇಲ್ಲಿ ಜಿಂಕೆಯ ರೂಪದಲ್ಲಿ ಬಂದಿದ್ದ ರಾಕ್ಷಸನದ್ದೆಂದು ನನಗೆ ಖಚಿತವಾಗಿದೆ. ರಾಮ ಅದನ್ನು ಕೊಂದೇ ಇರುತ್ತಾನೆ. ಇನ್ನೇನು ವಾಪಸು ಬರುತ್ತಾನೆ. ಚಿಂತಿಸಬೇಡ, ಅತ್ತಿಗೆ."

ಸೀತೆಗೆ ಎಷ್ಟೇ ಹೇಳಿದರೂ ಸಮಾಧಾನವಾಗಲಿಲ್ಲ. ತನ್ನ ರಾಮ ತನ್ನಿಂದ ಎಂದೆಂದಿಗೂ ದೂರವಾಗಿ, ತಾನೊಬ್ಬಳೇ ಇಲ್ಲಿ ಕಾಡಿನಲ್ಲಿ ಒಂಟಿಯಾಗಿರಬೇಕಾಗಿ ಬಂದರೇ ಎಂದು ಕಲ್ಪಿಸಿಕೊಂಡಾಗ ಅವಳ ಮೈ ನಡುಗಿತು. ರಾಮನನ್ನು ಹುಡುಕಿ ಬರಲು ಹೋಗೆಂದು ಮತ್ತೊಮ್ಮೆ ಲಕ್ಷ್ಮಣನಿಗೆ ಗೋಗರೆದಳು. ಅವಳು ಎಷ್ಟೇ ಬೇಡಿದರೂ ಲಕ್ಷ್ಮಣ ಜಗ್ಗದಿದ್ದಾಗ ಕೋಪ ಬಂದು ಅವನನ್ನು ಕ್ರೂರವಾಗಿ ಬೈದಳು. ಆತಂಕದಲ್ಲಿ ತಾನು ಏನು ಆಡುತ್ತಿದೇನೆಂದು ಅವಳಿಗೇ ಅರಿವಿರಲಿಲ್ಲ. ಲಕ್ಷ್ಮಣನಿಗೆ ತುಂಬ ನೋವಾಯಿತು. ಅವನು ಅತೀವವಾದ ದುಃಖಯಾತನೆಗಳನ್ನು ಅನುಭವಿಸುತ್ತ, ರಾಮನನ್ನು ಹುಡುಕಿ ಬರಲು ಹೊರಟ. ಹೋಗುತ್ತ ಹೋಗುತ್ತ, ಸೀತೆಯೊಬ್ಬಳನ್ನೇ ಬಿಟ್ಟು ಹೋಗಲಾರದೆ ಮತ್ತೆ ಮತ್ತೆ ಹಿಂದಿರುಗಿ ನೋಡುತ್ತ ಕೊನೆಗೆ ಕಾಡಿನಲ್ಲಿ ಮರೆಯಾದ.

ರಾವಣನಿಗೆ ತನ್ನ ಕಪಟ ಸಫಲವಾಯಿತೆಂದು ಗೊತ್ತಾಯಿತು. ಈಗ ಆಶ್ರಮದಲ್ಲಿ ಸೀತೆ ಒಬ್ಬಳೇ ಇದ್ದಳು. ಅವನು ಋಷಿಯಂತೆ ವೇಷ ಮರಸಿಕೊಂಡು ಭಿಕ್ಷೆ ಬೇಡಿ ಆಶ್ರಮಕ್ಕೆ ಬಂದ. ಆ ವಿಚಿತ್ರ ಧ್ವನಿ ಯಾರದ್ದಿರಬಹುದೆಂದು ಆಶ್ಚರ್ಯಪಡುತ್ತ ಸೀತೆ ಹೊರ ಬಂದಳು.

ಆ ದೊರೆಮಗಳನ್ನು ಕಂಡೊಡನೆಯೇ ರಾವಣನಿಗೆ ತಾನು ಊಹಿಸಿದ್ದಕ್ಕಿಂತ ಹೆಚ್ಚು ಚೆಲುವಾಗಿದ್ದಾಳೆಂದು ಅನಿಸಿತು. ತಾನು ಯಾರೆಂದು ಹೇಳಿ ಲಂಕೆಗೆ ಬಂದು ತನ್ನ ರಾಣಿಯಾಗಿರೆಂದು ಕೇಳಿದ. ಅವನ ಅಹಂಕಾರದಲ್ಲಿ ತಾನು ಕೇಳಿದೊಡನೆಯೇ ಸೀತೆ ಒಪ್ಪಿಕೊಳ್ಳುವಳೆಂದುಕೊಂಡಿದ್ದ. ಅವಳು ನಿರಾಕರಿಸಿದಾಗ ಅವನ ಮುಖ ಪೆಚ್ಚಾಯಿತು. "ನೀನು ಲಂಕೆಯ ದೊರೆ ರಾವಣನಿರಬಹುದು. ಆದರೆ ನಾನು ಎಂದೆಂದಿಗೂ ರಾಮನವಳು," ಎಂದು ಸೀತೆ ಜಂಬದಿಂದ ಕತ್ತು ಕೊಂಕಿಸಿ ಹೇಳಿದಳು.

ಅವಳ ತಿರಸ್ಕಾರ ಹಾಗೂ ಅವಳ ಚೆಲುವು ರಾವಣನನ್ನು ಕೆರಳಿಸಿದವು. ಅವಳನ್ನು ಬಲವಂತವಾಗಿ ಎತ್ತಿ ರಥದಲ್ಲಿ ಕೂರಿಸಿಕೊಂಡು ಮೋಡದಲ್ಲಿ ಹಾರಿಹೋದ. ಅವನ ಪುಷ್ಪಕ ವಿಮಾನ ಸುಮಾರಾಗಿ ನಮ್ಮ ಇಂದಿನ ವಿಮಾನಗಳಂತಿತ್ತು. ರಾಕ್ಷಸರು ತಮ್ಮ ಮಂತ್ರವಿದ್ಯೆಯಿಂದ ಅದನ್ನು ಸೃಷ್ಟಿಸಿದ್ದರೆಂದು ಜನ ತಿಳಿದಿದ್ದರು. ವಾಲ್ಮೀಕಿ ಋಷಿಯ ಪ್ರಕಾರ, ಅದಕ್ಕೆ ಎರಡು ರೆಕ್ಕೆಗಳಿದ್ದವು, ಒಳಗೆ ವಿಶಾಲವಾಗಿ ಎಲ್ಲ ಸೌಕರ್ಯಗಳಿಂದ ಕೂಡಿ ಅದು ಸಜ್ಜಾಗಿತ್ತು. ವಸಿಷ್ಠರ ಕಾಮಧೇನುವಿನಂತೆ ದಣಿ ಇಚ್ಛಿಸಿದಾಗ ಆಕಾಶದಲ್ಲಿ ಹಾರುತ್ತಿತ್ತು.

ಪುಷ್ಪಕ ವಿಮಾನವು ಸೀತೆಯನ್ನು ಕೂರಿಸಿಕೊಂಡು ಹಾರುತ್ತ ಹೋದಂತೆ, ಅವಳು ಕರುಳು ಕರಗಿಸುವಂತೆ ಕಿರುಚ ತೊಡಗಿದಳು. "ಹಾ ರಾಮ! ಲಕ್ಷ್ಮಣ! ನನ್ನನ್ನು ಬಿಟ್ಟು ಎಲ್ಲಿ ಹೋದಿರಿ? ನನ್ನ ಧ್ವನಿ ಕೇಳಿಸುವುದಿಲ್ಲವೆ? ನನ್ನ ದುಸ್ಥಿತಿ ಕಾಣಿಸುವುದಿಲ್ಲವೆ?" ತನ್ನ ಮುಂದಿದ್ದ ಕಾಡನ್ನು ಕುರಿತು ಅವಳು ಹೇಳಿದಳು, "ಓ ಪ್ರೀತಿಯ ಮರಗಳೇ! ಚೆಲುವಾದ ಹೂಗಳೇ! ಸುಖದಲ್ಲಿರುವ ಹಕ್ಕಿಗಳೇ! ರಾಮನಿಗೆ ನಾನು ಎಲ್ಲಿ ಹೋದನೆಂದು ತಿಳಿಸಿ."

ಇಡೀ ಕಾಡು ಅವಳ ಆರ್ತನಾದದಿಂದ ತುಂಬಿತು. ಹಕ್ಕಿಗಳು ಹಾಡುವುದನ್ನು ನಿಲ್ಲಿಸಿದವು, ದುಃಖಕ್ಕೆ ಹೂಗಳು ಬಾಡಿ ಕೆಳಗುರುಳಿದವು. ಸೀತೆ ಹರ್ಷದಲ್ಲಿದ್ದಾಗ ಬೆನ್ನುತಟ್ಟಿ ಮುದ್ದಾಡುತ್ತಿದ್ದ ಅವಳ ಮುದ್ದಿನ ಜಿಂಕೆ ಕಣ್ಣೀರು ಸುರಿಸಿತು.

"ಓ! ಸೀತೆಯನ್ನು ಕದ್ದೊಯ್ಯುತ್ತಿದ್ದಾರೆ" ಎಂದು ಕಾಡಿಗೆ ಕಾಡೇ ಕಣ್ಣೀರು ಕರೆಯುತ್ತಿರುವಂತೆ ಕಂಡಿತು.

ರಾಮನ ದುಃಖ

ಪುಷ್ಪಕ ವಿಮಾನವು ಸೀತೆಯನ್ನು ಪಂಚವಟಿಯಿಂದ ದೂರ ದೂರ ಕೊಂಡೊಯ್ದಿತು. ದುರ್ದೈವಿ ಸೀತೆ ಆಕಾಶದ ಹಕ್ಕಿಗಳಿಗೆ ನೆರವು ಬೇಡಿ ಮೊರೆಯಿಟ್ಟಾಗ ಅವುಗಳಲ್ಲಿ ಒಂದು ಹಕ್ಕಿ ಜಟಾಯು ಸಹಾಯ ಮಾಡಲು ಮುಂದಾಯಿತು. ಆದರೆ ರಾವಣ ಅದನ್ನು ಕತ್ತಿಯಿಂದ ಇರಿದು ಗಾಯಗೊಳಿಸಿದ. ಆಮೇಲೆ ಅವಳು ಮರಗಳಿಗೆ, ಬೆಟ್ಟಗಳಿಗೆ, ನದಿಗಳಿಗೆ ಮೊರೆಯಿಟ್ಟಳು. ಬೆಟ್ಟವೊಂದರ ಮೇಲೆ ಕಪಿಗಳು ಆಡುತ್ತಿದ್ದುದನ್ನು ನೋಡಿ ಅವುಗಳ ಕಡೆ ತನ್ನ ಒಡವೆಗಳನ್ನು ಕಳಚಿ ಎಸೆದಳು. ಅವಳು ಎಷ್ಟೇ ಗೋಳಿಟ್ಟರೂ ಅವಳಿಗೆ ಯಾರಿಂದಲೂ ಸಹಾಯ ದೊರೆಯಲಿಲ್ಲ. ವಿಮಾನ ಅವಳನ್ನು ದಕ್ಷಿಣದ ತುತ್ತತುದಿಯಲ್ಲಿದ್ದ ಲಂಕಾದ್ವೀಪಕ್ಕೆ ಕರೆತಂದಿತು.

ಅಲ್ಲಿ ರಾವಣ ಅವಳನ್ನು ಅಶೋಕವನದಲ್ಲಿಟ್ಟು ರಾಕ್ಷಸಿಯರನ್ನು ಕಾವಲಿಗೆ ನೇಮಿಸಿದ. ಅವನು ದಿನವೂ ಬೆಲೆಬಾಳುವ ಉಡುಗೆಗಳನ್ನು ತಂದು ಸೀತೆಯ ಮುಂದಿಟ್ಟು ತನ್ನ ರಾಣಿಯಾಗುವಂತೆ ಗೋಗರೆಯತೊಡಗಿದ. ಒಂದೊಂದು ಸಲವೂ ಸೀತೆ ಕಟ್ಟುನಿಟ್ಟಾಗಿ ಅದು ಸಾಧ್ಯವಿಲ್ಲವೆನ್ನುತ್ತಿದ್ದಳು.

ರಾವಣನಿಗೆ ಇನ್ನು ತಾಳ್ಮೆ ಉಳಿಯಲಿಲ್ಲ. ಅವನು ಅಬ್ಬರಿಸಿ ಹೇಳಿದ, "ಹನ್ನೆರಡು ತಿಂಗಳು ಸಮಯ ಕೊಡುತ್ತೇನೆ. ಅಷ್ಟರಲ್ಲಿ ನೀನು ನಿರ್ಧರಿಸಬೇಕು. ಆಮೇಲೆಯೂ ಇಲ್ಲವೆಂದರೆ ನಿನ್ನ ಕಥೆ ಮುಗಿಯಿತೆಂದುಕೊ." ಸೀತೆ ಉತ್ತರ ಕೊಡದೆ ತಲೆತಗ್ಗಿಸಿದಳು.

ಈ ನಡುವೆ ರಾಮ ಆತಂಕದಿಂದ ಪಂಚವಟಿಗೆ ಹಿಂದಿರುಗಿದ. ದಾರಿಯಲ್ಲಿ ಎದುರಿನಿಂದ ಲಕ್ಷ್ಮಣ ಬರುತ್ತಿರುವುದನ್ನು ನೋಡಿ ಅವನಿಗೆ ಗಾಬರಿಯಾಯಿತು.

"ಸೀತೆಯೊಬ್ಬಳನ್ನೇ ಯಾಕೆ ಬಿಟ್ಟು ಬಂದೆ? ಹಾಗೇಕೆ ಮಾಡಿದೆ?" ಬೇಗ ಬೇಗ ಹೆಜ್ಜೆ ಹಾಕುತ್ತ ರಾಮ ಕೇಳಿದ. ಸೀತೆಗೆ ರಾಮನ ಬಗ್ಗೆ ಆತಂಕವಾದದ್ದು, ತನ್ನನ್ನು ಹೋಗಿ ಹುಡುಕಿ ಬರಲು ಒತ್ತಾಯ ಮಾಡಿದ್ದು–ಇವೆಲ್ಲವನ್ನೂ ಲಕ್ಷ್ಮಣ ತಿಳಿಸಿದ.

ಅದನ್ನು ಕೇಳುತ್ತಿದ್ದಂತೆ ಸೀತೆ ಯಾವುದೋ ಘೋರ ಅಪಾಯಕ್ಕೆ ಸಿಕ್ಕಿದ್ದಾಳೆಂದು ರಾಮನಿಗೆ ಅನ್ನಿಸಿತು. ಮನಸ್ಸು ಚಿಂತೆಗೊಳಗಾಯಿತು. ಅವನ ನಡಿಗೆಯ ವೇಗ ಜೋರಾಯಿತು. ಅವನು ಅಂದುಕೊಂಡಂತೆ ಸೀತೆ ಗುಡಿಸಲಲ್ಲಿರಲಿಲ್ಲ. ರಾಮನಿಗೆ ಮಿತಿಮೀರಿ ದುಃಖವಾಯಿತು. ಕಾಡಿನ ಮಿತ್ರರೆಲ್ಲರನ್ನೂ "ಸೀತೆ ಎಲ್ಲಿರುವಳು ಹೇಳಿ" ಎಂದು ಕೇಳುತ್ತಾ ಅವನು ಮಗುವಿನಂತೆ ಅತ್ತು ಕಿರುಚಿದ.

ಸೀತೆಗಾಗಿ ಹುಡುಕುತ್ತ ರಾಮ ಕಾಡಿನಲ್ಲೆಲ್ಲಾ ಅಲೆದಾಡಿದ. ಮರಗಳು ದುಃಖದಿಂದ ತಲೆ ಬಾಗಿಸಿದುವು. ಬೆಟ್ಟಗಳು ಅವಳ ಗೋಳನ್ನು ಮಾರ್ನುಡಿಯುತ್ತಿದ್ದವು. ಹಕ್ಕಿಗಳು ಒರಲುತ್ತಿದ್ದವು. ಸೀತೆಯ ಮುದ್ದಿನ ಜಿಂಕೆಯ ಕಂದುಗಣ್ಣುಗಳಿಂದ ನೀರು ತೊಟ್ಟಿಕ್ಕುತ್ತಿತ್ತು. ಇವೆಲ್ಲವನ್ನು ನೋಡಿ ಸೀತೆಗೆ ಅಪಾಯ ಒದಗಿರುವುದು ಖಚಿತವಾಯಿತು.



“ರಾವಣ ಸೀತೆಯನ್ನು ಹಾರಿಸಿಕೊಂಡು ಹೋದ” ಎನ್ನುತ್ತ ಜಟಾಯು ಸತ್ತುಬಿದ್ದಿತು

ಆಗ ಇದ್ದಕ್ಕಿದ್ದಂತೆ, ಸಾಯುತ್ತಾ ಬಿದ್ದಿದ್ದ ಜಟಾಯು ಅಣ್ಣತಮ್ಮಂದಿರಿಗೆ ಕಾಣಿಸಿತು. “ರಾವಣ ಸೀತೆಯನ್ನು ಹಾರಿಸಿಕೊಂಡು ಹೋಗಿದಾನೆ. ಅವನು ದಕ್ಷಿಣದ ಕಡೆ ಹೋದ” ಎಂದು ಹೇಳಿ ಜಟಾಯು ಕೊನೆಯುಸಿರೆಳೆಯಿತು.

ಆ ಕಾಡಿನಲ್ಲಿ ವಾಸವಾಗಿದ್ದ ಋಷಿಗಳಲ್ಲಿ ಅನೇಕರು ರಾಮನಿಗೆ ಋಷ್ಯಮೂಕ ಪರ್ವತಕ್ಕೆ ಹೋಗಿ, ಅಲ್ಲಿನ ವಾನರ ನೆರವು ಪಡೆಯುವಂತೆ ಸಲಹೆ ಕೊಟ್ಟರು. “ರಾಕ್ಷಸರ ತಂತ್ರ ಗೊತ್ತಿರುವುದು ಅವರಿಗೆ ಮಾತ್ರ. ಅವರ ಮುಖಂಡ ಸುಗ್ರೀವನಿಗೆ ರಾಕ್ಷಸರ ಬಗ್ಗೆ ಎಲ್ಲವೂ ತಿಳಿದಿದೆ. ನಿನಗೆ ಸಹಾಯ ಮಾಡಲು ಅವನೇ ತಕ್ಕವನು” ಎಂದು ಅವರು ಹೇಳಿದರು.

ರಾಮ ಲಕ್ಷ್ಮಣರು ಅನೇಕ ದಿನಗಳ ಕಾಲ ನಡೆನಡೆದು ಕೊನೆಗೆ ಸುಂದರ ಬೆಟ್ಟವಾದ ಋಷ್ಯಮೂಕಕ್ಕೆ ಬಂದರು.

ಸುಗ್ರೀವನೊಂದಿಗೆ ಸ್ನೇಹ

ದಖನ್ನಿನ ದಕ್ಷಿಣ ಪ್ರದೇಶದಲ್ಲಿ ಕಪಿಜನರ ದೊಡ್ಡದೊಡ್ಡ ಗುಂಪುಗಳು ವಾಸವಾಗಿದ್ದವು. ವಾಲಿ ಅವರ ದೊರೆ, ಅವನು ತುಂಬ ಶಕ್ತಿಶಾಲಿ. ಒಮ್ಮೆ ರಾವಣನನ್ನು ಸೋಲಿಸಿದ್ದ. ಅಷ್ಟು ಬಲಶಾಲಿ ಅವನು.

ರಾವಣನಂತೆ ವಾಲಿ ಸಹ ತಾನೇ ಎಲ್ಲರಿಗಿಂತ ದೊಡ್ಡವನೆಂಬ ಅಹಂಕಾರದಿಂದ ಮೆರೆಯುತ್ತಿದ್ದ. ಅವನು ತನ್ನ ಯಶಸ್ಸಿನ ಬಗ್ಗೆ ತುಂಬ ಜಂಬ ಕೊಚ್ಚಿಕೊಳ್ಳುತ್ತಿದ್ದ. ಆ ಅಹಂಕಾರದಿಂದಾಗಿ ಅವನು ಒಳ್ಳೆಯ ದೊರೆಯಾಗಿರಲಿಲ್ಲ.


ವಾಲಿಯ ತಮ್ಮ ಸುಗ್ರೀವ ಶ್ರೇಷ್ಠ ಯೋಧ. ದಯೆಯಿಂದ ಕೂಡಿದ ಮೃದು ಸ್ವಭಾವ ಅವನದ್ದು.

ವಾಲಿಗೆ ಕಾದಾಟವೆಂದರೆ ಇಷ್ಟ. ಅವನೊಮ್ಮೆ ಒಬ್ಬ ರಾಕ್ಷಸನೊಡನೆ ಕಾದಾಡಲು ಒಂದು ಗುಹೆಯೊಳಗೆ ಹೊಕ್ಕ. ವರ್ಷ ಕಳೆಯಿತು, ಆದರೂ ಗುಹೆಯಿಂದ ಹಿಂದಿರುಗಿ ಬರಲಿಲ್ಲ. ಅವನು ಸತ್ತಿರಬೇಕೆಂದುಕೊಂಡು ಪ್ರಜೆಗಳು ಸುಗ್ರೀವನಿಗೆ ಪಟ್ಟ ಕಟ್ಟಿದರು.

ಮೊದಮೊದಲು ವಾಲಿ ಸತ್ತಿದ್ದಾನೆಂದು ಸುಗ್ರೀವ ನಂಬಲಿಲ್ಲ. ಯಾಕೆಂದರೆ ತನ್ನ ಅಣ್ಣ ಎಷ್ಟು ಬಲಶಾಲಿಯೆಂಬುದು ಅವನಿಗೆ ಗೊತ್ತಿತ್ತು. ಆದರೆ ಒಮ್ಮೆ ಗುಹೆಯಿಂದ ರಕ್ತ ಹರಿದುಬರತೊಡಗಿ, ಆಮೇಲೆಯೂ ವಾಲಿಯ ಪತ್ತೆಯಿಲ್ಲದೆ ಹೋದಾಗ ಅವನು ಸತ್ತಿರಲೇ ಬೇಕೆಂದುಕೊಂಡು, ತಾನು ರಾಜನಾಗಲು ಒಪ್ಪಿದ. ಆದರೆ ಇದ್ದಕ್ಕಿದ್ದಂತೆ ಒಂದು ದಿನ ವಾಲಿಯು ಕಾಣಿಸಿಕೊಂಡ. ಸಿಂಹಾಸನದ ಮೇಲೆ ತಮ್ಮ ಕುಳಿತಿರುವುದನ್ನು ನೋಡಿ ಅವನಿಗೆ ಕೋಪ ಬಂತು. ಸುಗ್ರೀವನನ್ನು ದೇಶ ಬಿಟ್ಟು ಓಡಿಸಿದ.

ಬಡಪಾಯಿ ಸುಗ್ರೀವ ಬಹಳ ಕಾಲ ನೆಲೆಯಿಲ್ಲದೇ ಅಲೆದಾಡುತ್ತ, ಕೊನೆಗೊಂದು ದಿನ ಋಷ್ಯಮೂಕದಲ್ಲಿ ರಾಮನನ್ನು ಕಂಡ. ವಾಲಿಯನ್ನು ಕಂಡರೆ ತನಗೆಷ್ಟು ಭಯವೆಂದು ರಾಮನಲ್ಲಿ ತೋಡಿಕೊಂಡ. ರಾಮನಿಗೆ ಕನಿಕರ ಹುಟ್ಟಿತು. ವಾಲಿಯನ್ನು ಸೋಲಿಸಲು ಸಹಾಯ ಮಾಡುವುದಾಗಿ ಮಾತು ಕೊಟ್ಟ.

ಅಣ್ಣನ ಕೈಗೆ ಸಿಕ್ಕಿದರೆ ಅವನು ತನ್ನನ್ನು ಜೀವಸಹಿತ ಬಿಡುವುದಿಲ್ಲವೆಂದು ಸುಗ್ರೀವನಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಕೊನೆಯವರೆಗೂ ಅವನಿಂದ ತಲೆ ಮರಸಿಕೊಂಡು ಬದುಕಬೇಕಾಗಿತ್ತು, ಇಲ್ಲವೇ ಬಯಲಿಗೆ ಬಂದು ಅವನೊಡನೆ ಕಾಳಗಕ್ಕಿಳಿಯಬೇಕಾಗಿತ್ತು. ಈಗ ರಾಮನ ಸಹಾಯ ದೊರೆತದ್ದರಿಂದ ಅವನಿಗೆ ಧೈರ್ಯವುಂಟಾಯಿತು. ವಾಲಿಯನ್ನು ಕಾಳಗಕ್ಕೆ ಕರೆದ. ಅವರಿಬ್ಬರ ನಡುವೆ ಘೋರ ಕದನವಾಯಿತು. ಅಣ್ಣತಮ್ಮಂದಿರು ಹೋರಾಡುತ್ತಿರುವಾಗ, ರಾಮ ಬಾಣ ಬಿಟ್ಟು ವಾಲಿಯನ್ನು ಕೊಂದ.



ಆ ವಾನರ ಇತರರಿಗಿಂತ ಹೆಚ್ಚು ಧೈರ್ಯಶಾಲಿ, ಬಲಶಾಲಿ, ಶೀಘ್ರವೇಗಿ

ಮತ್ತೊಮ್ಮೆ ಸುಗ್ರೀವನಿಗೆ ಪಟ್ಟವಾಯಿತು. ರಾಮನ ಮೇಲಿನ ಕೃತಜ್ಞತೆಯಿಂದಾಗಿ ಜೀವವಿರುವವರೆಗೂ ಅವನ ಸ್ನೇಹಿತನಾಗಿದ್ದು ಕಷ್ಟಸುಖದಲ್ಲಿ ಒಂದಾಗಿರುವುದಾಗಿ ಪ್ರತಿಜ್ಞೆ ಮಾಡಿದ. ತನ್ನ ವಾನರ ಸೇನೆಯನ್ನು ಸೇರಿಸಿ, ಅದನ್ನು ನಾಲ್ಕು ಪಡೆಗಳಾಗಿ ವಿಂಗಡಿಸಿದ. ಸೀತೆಯನ್ನು ಹುಡುಕಿಬರಲು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಹೀಗೆ ಒಂದೊಂದು ದಿಕ್ಕಿಗೂ ಒಂದೊಂದು ಪಡೆಯನ್ನು ಅಟ್ಟಿದ.

ಈ ವಾನರರೆಲ್ಲರೂ ಧೈರ್ಯಶಾಲಿಗಳು, ಬಲಶಾಲಿಗಳು, ಅಷ್ಟೇ ಚತುರರು, ಓಡಾಟ ದಲ್ಲಿ ಚುರುಕಾದವರು. ಅವರಲ್ಲಿ ಒಬ್ಬನಂತೂ ಇತರ ಎಲ್ಲರಿಗಿಂತ ಹೆಚ್ಚು ಧೈರ್ಯಶಾಲಿ, ಬಲಶಾಲಿ, ಶೀಘ್ರಗತಿಯುಳ್ಳವನು. ಮರಗಳನ್ನು ಬುಡಸಹಿತ ಉರುಳಿಸುವುದು, ದೊಡ್ಡ



ಮುದ್ದಿನ ಹೆಂಡತಿಯ ಮೆಚ್ಚಿನ ಆಭರಣಗಳನ್ನು ನೋಡಿ ರಾಮನಿಗೆ ಅಳು ಬಂದಿತು

ದೊಡ್ಡ ಬಂಡೆಗಳನ್ನು ಎತ್ತುವುದು, ಬೆಟ್ಟದಿಂದ ಬೆಟ್ಟಕ್ಕೆ ಒಂದೇ ನೆಗೆತಕ್ಕೆ ಹಾರುವುದು– ಇವೆಲ್ಲವೂ ಅವನಿಗೆ ಸಾಧಿಸಿದ್ದವು. ಆ ವಾನರನ ಹೆಸರು ಹನುಮಂತ.

ರಾಮ ಹನುಮಂತನನ್ನು ಹತ್ತಿರ ಕರೆದು ತನ್ನ ಮುಂದ್ರೆಯುಂಗುರ ಕೊಟ್ಟು ಹೇಳಿದ, "ನೀನು ದಕ್ಷಿಣದ ಕಡೆ ಹೊರಟಿದ್ದಿ. ಪ್ರಾಯಶಃ ಸೀತೆ ನಿನ್ನ ಕಣ್ಣಿಗೇ ಬೀಳು ವಳೆಂದು ಕಾಣುತ್ತದೆ. ಅವಳನ್ನು ಕಂಡರೆ ಈ ಉಂಗುರ ತೋರಿಸಿ, ನಮ್ಮ ಯೋಗಕ್ಷೇಮ ತಿಳಿಸು. ನಾನು ಬೇಗನೆ ಬಂದು ಆ ದುಷ್ಟ ರಾವಣನನ್ನು ಕೊಲ್ಲುವೆನೆಂದೂ ಮಾತು ಕೊಡು." ಆ ಕೋಮಲೆ ರಾಜಕುಮಾರಿ ರಾಕ್ಷಸರ ಕೈಗೆ ಸಿಕ್ಕಿಬಿದ್ದಿರುವುದನ್ನು ನೆನೆದು ರಾಮನ ಕಣ್ಣು ಹನಿಗೂಡಿತು.

ಹಿಂದೆ ರಾವಣ ಸೀತೆಯನ್ನೆತ್ತಿಕೊಂಡು ಲಂಕೆಗೆ ಹೊರಟಿದ್ದಾಗ ಅವಳು ದಾರಿಯಲ್ಲಿ ತನ್ನ ಒಡವೆಗಳನ್ನು ಒಂದು ಬೆಟ್ಟದ ಮೇಲೆ ಆಡುತ್ತಿದ್ದ ಕಪಿಗಳತ್ತ ಎಸೆದದ್ದು ನಿಮಗೆ

ನೆನಪಿರಬಹುದು. ಹನುಮಂತ ಹಾಗೂ ಅವನ ಜೊತೆಗಾರರೇ ಅವಳು ಆಗ ಕಂಡ ಕಪಿಗಳು. ಅವರು ಆ ಒಡವೆಗಳ ಗಂಟನ್ನು ಜೋಪಾನವಾಗಿಟ್ಟಿದ್ದು, ಈಗ ಸೀತೆಯ ಶೋಧನೆಗೆ ಹೊರಡುವ ಮುನ್ನ ರಾಮನಿಗೆ ತೋರಿಸಿದರು. ತನ್ನ ಮುದ್ದಿನ ಹೆಂಡತಿಯ ಮೆಚ್ಚಿನ ಆಭರಣಗಳನ್ನು ನೋಡಿ ರಾಮನಿಗೆ ಅಳು ಬಂದಿತು.

ರಾಮನ ಮುದ್ರೆಯುಂಗುರ

ದಕ್ಷಿಣಕ್ಕೆ ಹೊರಟ ವಾನರರು ದಿನಗಟ್ಟಲೆ ಅಲೆದಾಡಿದರು. ಆದರೆ ಎಲ್ಲಿಯೂ ರಾವಣನಾಗಲೀ ಸೀತೆಯಾಗಲೀ ಕಣ್ಣಿಗೆ ಬೀಳಲಿಲ್ಲ. ಕೊನೆಗೆ ಅವರು ಬಳಲಿ ಖಿನ್ನರಾಗಿ ಭರತಖಂಡದ ದಕ್ಷಿಣದ ತುತ್ತತುದಿಯನ್ನು ಮುಟ್ಟಿದರು.

ಅಲ್ಲಿ ಅವರು ಮುಂದೇನು ಮಾಡುವುದೆಂದು ತೋಚದೇ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ಕುಳಿತುಕೊಂಡರು. ಅವರಿಗೆ ವಾಪಸು ಹೋಗುವ ಧೈರ್ಯವಿರಲಿಲ್ಲ. ಯಾಕೆಂದರೆ ಸುಗ್ರೀವ ಕಟ್ಟುನಿಟ್ಟಾಗಿ ಹೇಳಿಕಳಿಸಿದ್ದ: "ಸೀತೆಯ ಸುದ್ದಿ ಸಿಗುವವರೆಗೆ ನೀವು ಬರಲೇಬೇಡಿ, ಹಾಗೆ ಬಂದರೆ ನಿಮಗೆ ಇಲ್ಲಿ ಕಾದಿರುವುದು ಸಾವೇ ಎಂದುಕೊಳ್ಳಿ." ಏನು ಮಾಡುವುದೆಂದು ಅವರು ಎಷ್ಟೋ ದಿನಗಳವರೆಗೆ ಮಾತಾಡಿಕೊಂಡರು. ಆದರೆ ಏನೂ ಹೊಳೆಯಲಿಲ್ಲ.


ಸಮುದ್ರದ ಬಂಡೆಗಳ ನಡುವೆ ವಾಸಿಸುತ್ತಿದ್ದ ಸಂಪಾತಿಯೆಂಬ ಕಡಲಹಕ್ಕಿ ಅವರ ಮಾತನ್ನು ಕೇಳಿಸಿಕೊಂಡು ಅವರಿದ್ದಲ್ಲಿಗೆ ಬಂದು "ರಾವಣ ಪುಷ್ಪಕವಿಮಾನದಲ್ಲಿ ಒಬ್ಬ ಹೆಂಗಸನ್ನು ಕೂರಿಸಿಕೊಂಡು ಲಂಕಾದ್ವೀಪದ ಕಡೆ ಹಾರಿ ಹೋದುದನ್ನು ನಾನು ನೋಡಿದ್ದೆ" ಎಂದು ಹೇಳಿತು.

"ಲಂಕೆ? ಅದೆಲ್ಲಿದೆ? ಎಷ್ಟು ದೂರ ಇದೆ?" ವಾನರರು ಉತ್ತೇಜಿತರಾಗಿ ಕೇಳಿದರು.

"ದೂರದ ಸಮುದ್ರದ ನಡುವೆ ಇರುವ ಒಂದು ದ್ವೀಪ ಅದು. ಇಲ್ಲಿಂದ ಸುಮಾರು ಐವತ್ತು ಮೈಲಿಯಾಗಬಹುದು" ಅಂದಿತು ಸಂಪಾತಿ.

ಅದನ್ನು ಕೇಳಿ ವಾನರರಿಗೆ ಮತ್ತೆ ನಿರಾಶೆಯಾಯಿತು. "ಐವತ್ತು ಮೈಲಿ ಸಮುದ್ರ ದಾಟಿ ಹೋಗುವುದು ಹೇಗೆ? ಸೀತೆಗಾಗಲೀ ನಮಗಾಗಲೀ ಉಳಿಗಾಲವಿಲ್ಲ. ಸುಗ್ರೀವನ ಕೋಪಕ್ಕೆ ತುತ್ತಾಗುವ ಬದಲು, ಇಲ್ಲೇ ಇದ್ದು ಸಾಯೋಣ" ಎಂದು ಅವು ಗೋಳಾಡ ತೊಡಗಿದವು.

ಆಗ ಅವರಲ್ಲೆಲ್ಲ ಅತ್ಯಂತ ಧೈರ್ಯಶಾಲಿಯೂ, ಶಕ್ತಿಶಾಲಿಯೂ ಆದ ಹನುಮಂತ ಎದ್ದುನಿಂತ. ಅವನ ಕಣ್ಣು ಕೆಂಡದಂತೆ ಉರಿಯುತ್ತಿತ್ತು. ಅವನು ಎದೆ ಚಾಚಿ, ಮುಷ್ಟಿ ಬಿಗಿದು ಬಾಲವನ್ನು ಹೊರಳಿಸಿ ಅಪ್ಪಳಿಸುತ್ತ ಗುಡುಗಿನ ಧ ನಿಯಲ್ಲಿ ಹೇಳಿದ, "ನಾನು ಹೋಗುತ್ತೇನೆ. ಸಮುದ್ರವನ್ನು ದಾಟಿ, ಸೀತೆಯ ಸುದ್ದಿಯನ್ನು ತರುತ್ತೇನೆ." ಹೀಗೆಂದು ಅವನು ಅಲ್ಲೇ ಸಮುದ್ರದ ದಂಡೆಯ ಹತ್ತಿರ ಇದ್ದ ಒಂದು ಬೆಟ್ಟದ ತುದಿಗೆ ನಡೆದು ಹೋದ. ವಾನರರೆಲ್ಲರೂ ಆನಂದದಿಂದ ಕುಣಿಯುತ್ತ, ಅವನಿಗೆ ಯಶಸ್ಸು ಕೋರುತ್ತ, "ನಾವು ಬದುಕಿದೆವು, ಹನುಮಂತ ನಮ್ಮನ್ನು ಕಾಪಾಡಿದ" ಎಂದು ಒಕ್ಕೊರಲಿನಿಂದ ಹಾಡುತ್ತ ಅವನ ಹಿಂದೆ ಹೊರಟರು.



ಆ ಮಹಾವಾನರ ಬೆಟ್ಟದ ತುದಿಯಲ್ಲಿ ನಿಂತು ವಿಮಾನದಂತೆ ಆಕಾಶಕ್ಕೆ ಮೇಲೇರಿದ

ಆ ಮಹಾವಾನರ ಬೆಟ್ಟದ ತುದಿಯಲ್ಲಿ ನಿಂತು ವಿಮಾನ ಮೇಲೇರುವಂತೆ ಆಕಾಶಕ್ಕೆ ನೆಗೆದಾಗ ಭೂಮಿ ನಡುಗಿ, ಗುಡುಗಿನ ಮೊಳಗು ಕೇಳಿಬಂದಿತು. ವಾನರ ಸೈನ್ಯ ಉತ್ಸಾಹ ದಿಂದ ನೋಡುತ್ತ ನಿಂತಂತೆ ಅವನು ಮೋಡದ ಹಿಂದೆ ಮರೆಯಾದ. ಹಾರಾಟ ಹನುಮಂತ ನಿಗೆ ಅವನ ತಂದೆ ಗಾಳಿಯ ದೊರೆ ವಾಯುವಿನಿಂದ ದೊರೆತಿದ್ದ ಗುಪ್ತ ವರ.

ಹನುಮಂತ ಸದ್ದಿಲ್ಲದೆ ಲಂಕಾದ್ವೀಪದಲ್ಲಿ ಬಂದಿಳಿದ. ಸೀತೆಗಾಗಿ ಎಲ್ಲೆಲ್ಲೂ ಹುಡು ಕಾಡಿದ. ಅವಳು ಎಲ್ಲಿಯೂ ಕಾಣಿಸಲಿಲ್ಲ. ರಾಕ್ಷಸರು ನಿಜವಾಗಿಯೂ ಎಷ್ಟು ಚತುರರೆಂದು ಮನದಟ್ಟು ಮಾಡಿಕೊಡುವ ಅನೇಕ ಸಂಗತಿಗಳನ್ನು ಅವನು ಅಲ್ಲಿ ನೋಡಿದ. ಅವರ ಅದ್ಭುತ ಯಂತ್ರಗಳನ್ನೂ ತೊಡಕಾದ ಆಯುಧಗಳನ್ನೂ ಕಂಡು ದಂಗು ಬಡಿದು ಹೋದ. ರಾಕ್ಷಸರ ಹಾಗೂ ಅವರ ಸಾಮರ್ಥ್ಯದ ಬಗ್ಗೆ ತಾನು ಕಂಡುದೆಲ್ಲವನ್ನೂ ಸುಗ್ರೀವನಿಗೆ ತಿಳಿ ಸುವುದೆಂದುಕೊಂಡ.

ಹನುಮಂತ ಅಲ್ಲಿ ಇಲ್ಲಿ ಅಲೆದಾಡುತ್ತ ಅದ್ಭುತವಾದ ಅಶೋಕವನಕ್ಕೆ ಬಂದ. ಅಲ್ಲಿಯ ತಂಗಾಳಿಯನ್ನು, ತೋಟದ ಸಿಹಿ ಹಣ್ಣುಗಳನ್ನು ಕಂಡಾಗ ಅಲ್ಲಿಯೇ ದಣಿವಾರಿಸಿ ಕೊಳ್ಳುವ ಮನಸ್ಸಾಯಿತು. "ತುಂಬ ಸುಸ್ತಾಗಿದೆ, ಇಲ್ಲಿ ಕೊಂಚ ಸುಧಾರಿಸಿಕೊಂಡು ರಾವಣನ ತೋಟದ ಹಣ್ಣುಗಳನ್ನು ರುಚಿ ನೋಡೋಣ," ಎಂದು ತನಗೆ ತಾನೇ ಅಂದು ಕೊಂಡ.

ಇದ್ದಕ್ಕಿದ್ದಂತೆ ಅಲ್ಲೊಂದು ಮರದ ಕೆಳಗೆ ಯಾವುದೋ ಬೆಳಕು ಹೊಳೆಯುತ್ತಿ ದ್ದುದು ಕಂಡಿತು. ಹತ್ತಿರ ಹೋಗಿ ನೋಡಿದಾಗ ಅಲ್ಲಿ ಒಬ್ಬ ಸುಂದರಿ ಕುಳಿತಿದ್ದಳು. ಅವಳು ಸೀತೆಯೇ ಇರಬೇಕೆಂದು ಊಹಿಸಿದಾಗ ಹನುಮಂತನಿಗೆ ಮೈ ನವಿರೆದ್ದಿತು. ಬೇರೆ ಯಾರು ತಾನೆ ಅಷ್ಟು ದಿವ್ಯವಾಗಿ ಕಂಡಾರು? ಎಂತಹ ಚೆಲುವೆ ರಾಜಕುಮಾರಿ! ಇನ್ನೂ ಹತ್ತಿರ ಬಂದಾಗ ಅವಳ ಕಣ್ಣಲ್ಲಿ ನೀರು ತುಂಬಿದ್ದುದು ಕಾಣಿಸಿತು. "ರಾಮ! ರಾಮ! ಲಕ್ಷ್ಮಣ!" ಎಂದು ಅವಳ ಚೆಂದುಟಿಗಳು ಜಪಿಸುತ್ತಿದ್ದವು.

"ಇವಳು ಖಂಡಿತವಾಗಿ ಸೀತೆಯಲ್ಲದೆ ಬೇರೆ ಯಾರೂ ಅಲ್ಲ," ಹನುಮಂತ ಯೋಚಿ ಸಿದ. ಅವಳತ್ತ ಅಗಾಧ ಶರೀರದ ಕುರೂಪಿ ರಾಕ್ಷಸಿಯರು ಮುತ್ತಿಕೊಂಡಿದ್ದರು. ಅವರನ್ನು ದಾಟಿ ಹೋಗುವುದು ಹೇಗೆ? ಸೀತೆಯೊಡನೆ ಒಂಟಿಯಾಗಿ ಮಾತಾಡುವುದು ಸಾಧ್ಯ ವಾಗುವುದೇ ಹೇಗೆ ಎಂದು ಯೋಚಿಸುತ್ತ ಅವನು ತಾಳ್ಮೆಯಿಂದ ಕಾಯುತ್ತ ಕುಳಿತ. ಅದೃಷ್ಟ ಅವನ ಕಡೆಗಿತ್ತು. ರಾತ್ರಿಯಾದಂತೆ ಆ ಘೋರರಾಕ್ಷಸಿಯರು ಒಬ್ಬೊಬ್ಬರಾಗಿ ನಿದ್ರೆ ಹೋದರು.

ಹನುಮಂತ ಮೆಲ್ಲನೆ ಹತ್ತಿರ ಸರಿದು ಪರಿಚಯ ರೂಪವಾಗಿ 'ರಾಮ' ಎಂದು ಉಸುರಿದ. ಇನ್ನೂ ಹತ್ತಿರ ಬಂದು ಕೊಂಚ ಜೋರಾಗಿ ಮತ್ತೆ 'ರಾಮ' ಅಂದ. ಕೊನೆಗೆ ಅವಳ ಕಾಲಿಗೆ ಬೀಳುತ್ತ ಗಟ್ಟಿಯಾಗಿ 'ರಾಮ. . . ರಾಮ' ಅಂದ.

ಮಂತ್ರರೂಪವಾದ ಆ ಶಬ್ದವನ್ನು ಕೇಳಿ ಸೀತೆ ಆಶ್ಚರ್ಯದಿಂದ ಕತ್ತೆತ್ತಿ ನೋಡಿದಳು.

ತಾನು ನಿದ್ರೆಯಲ್ಲಿದ್ದೇನೆಯೆ? ಅಥವಾ ನಿಜವಾಗಿ ಯಾರಾದರೂ ತನ್ನ ಪ್ರಿಯತಮನ ಹೆಸರನ್ನು ಉಚ್ಚರಿಸಿದರೆ? ಅಥವಾ ಅದು ಕನಸೆ? ತನ್ನ ಕಾಲಬದಿ ಕಪಿಯೊಂದು ಮಾನವ ಕಂಠದಲ್ಲಿ 'ರಾಮ . . . ರಾಮ' ಅನ್ನುತ್ತಿದ್ದುದನ್ನು ಕೇಳಿ ಅವಳಿಗೆ ತನ್ನ ಕಣ್ಣು ಕಿವಿಗಳನ್ನು ತಾನೇ ನಂಬಲಾಗಲಿಲ್ಲ. ರಾವಣನೇ ತನ್ನನ್ನು ಪೀಡಿಸಲು ವೇಷ ಮರೆಸಿ ಬಂದಿದ್ದಾನೆಂದು "ಛೀ, ಇದು ಎಂಥ ಕಪಟ? ಹೋಗಾಚೆ, ರಾವಣ" ಎಂದು ಕೋಪದಿಂದ ಕಿರಿಚಿದಳು.



ಸೀತೆ ಉಂಗುರವನ್ನು ಎದೆಗೊತ್ತಿಕೊಂಡು ಹನುಮಂತನಿಗೆ ಸಾವಿರ ಕೃತಜ್ಞತೆ ಸಲ್ಲಿಸಿದಳು

ಹನುಮಂತ ತಾನು ರಾವಣನಲ್ಲವೆಂದು ನಂಬಬೇಕೆಂದು ಗೋಗರೆದ. ರಾಮನ ದುಃಖ ಕೋಪಗಳನ್ನು, ರಾವಣನನ್ನು ಕೊಲ್ಲುವ ಅವನ ಪ್ರತಿಜ್ಞೆಯನ್ನು ಕುರಿತು ಹೇಳಿದ. ಸೀತೆ ಭಯ ತುಂಬಿದ ಕಣ್ಣುಗಳಿಂದಲೇ ಅವನನ್ನು ನೋಡುತ್ತಿದ್ದಳು. ಕೊನೆಗೆ ಹನುಮಂತ ರಾಮನ ಗುರುತಿನ ಉಂಗುರವನ್ನು ತೆಗೆದು ನಡುಗುವ ಕೈಗಳಿಂದ ಅವಳ ಕೈಗಿತ್ತ. ಆ ಉಂಗುರವನ್ನು ನೋಡಿ, ಸೀತೆಯ ಕಣ್ಣುಗಳು ಆನಂದದಿಂದ ಹೊಳೆದವು. ಹನುಮಂತನಿಗೆ ಸಾವಿರ ಕೃತಜ್ಞತೆ ಸಲ್ಲಿಸುತ್ತ, ಅವಳು ಅದನ್ನು ಎದೆಗೊತ್ತಿಕೊಂಡಳು.

ಲಂಕಾದಹನ

ಉಂಗುರ ತಂದುದಕ್ಕೆ ಸೀತೆ ಮತ್ತೆ ಮತ್ತೆ ಹನುಮಂತನಿಗೆ ವಂದನೆ ಸಲ್ಲಿಸಿದಳು. ಅವಳ ಕೆನ್ನೆಗಳ ಮೇಲೆ ಆನಂದಬಾಷ್ಪದ ಕೋಡಿ ಹರಿಯುತ್ತಿತ್ತು. "ಪ್ರಿಯ ಹನುಮಂತ, ನಿನಗೆ ಹೇಗೆ ಕೃತಜ್ಞತೆ ಸಲ್ಲಿಸಿ ಮುಗಿಸಲಿ? ನಾನು ರಾಜಕುಮಾರಿಯಾದರೂ ನನ್ನಲ್ಲಿ ನಿನಗೆ ಕೊಡಲು ಏನೂ ಇಲ್ಲ. ಹೇಳು ನೀನು ಯಾರು? ನಿನಗೆ ರಾಮನ ಪರಿಚಯ ಹೇಗಾಯಿತು? ಈಗ ಅವರೆಲ್ಲಿದ್ದಾರೆ? ನನ್ನನ್ನು ಕರೆದುಕೊಂಡು ಹೋಗಲು ಯಾವಾಗ ಬರುತ್ತಾರೆ?"

ಹನುಮಂತ ಅವಳ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಟ್ಟ. ರಾಮ ಸುಗ್ರೀವರ ಸ್ನೇಹದ ಬಗ್ಗೆ ತಿಳಿಸಿದ. "ಭಯ ಪಡಬೇಡಿ, ತಾಯಿ ರಾಮ ಬೇಗನೆ ಬಂದು ರಾವಣನನ್ನು ಕೊಲ್ಲುತ್ತಾರೆ. ನಿಮ್ಮ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ನಾನು ನೇರವಾಗಿ ಹಿಂದಕ್ಕೆ ಹೋಗಿ ರಾಮನಿಗೆ ನಿಮ್ಮ ಸುದ್ದಿ ಕೊಡುತ್ತೇನೆ. ನಿಮ್ಮ ಪಾಡು ತಿಳಿದಾಗ ಅವರು ತಕ್ಷಣ ಹೊರಟು ಬರುತ್ತಾರೆ."

ಹನುಮಂತ ಹಿಂದಿರುಗಿ ಹೋಗುವನೆಂದು ತಿಳಿದಾಗ " ಈಗ ನೆಚ್ಚಿನ ಬಂಟ ಸಿಕ್ಕಿದ ಮೇಲೆಯೂ ಒಂಟಿಯಾಗಿ ಹೇಗಿರಲಿ?" ಎಂದು ಸೀತೆ ಬಿಕ್ಕಿರಿದು ಅತ್ತಳು.

ಅಷ್ಟು ಬಲಶಾಲಿಯಾದ ಹನುಮಂತ ಸೀತೆಯನ್ನು ತನ್ನೊಂದಿಗೆ ಕರೆದೊಯ್ಯಲಿಲ್ಲವೆಂದು ನಿಮಗೆ ಆಶ್ಚರ್ಯವೆನಿಸಬಹುದು. ಅವನು ಸೀತೆಯನ್ನು ಬೆನ್ನಿನ ಮೇಲೆ ಕೂರಿಸಿಕೊಂಡು ಸುಲಭವಾಗಿ ಹಾರಿ ಸಮುದ್ರ ದಾಟಬಹುದಾಗಿತ್ತು. ಆವನು ಹಾಗೆಯೇ ಯೋಚಿಸಿ ಸೀತೆಯನ್ನು ಕರೆದೊಯ್ಯಲು ಮುಂದಾದ. ಆದರೆ ಅದಕ್ಕೆ ಒಪ್ಪದಿದ್ದವಳು ಸೀತೆಯೇ. ರಾವಣ ರಾಮನಿಗೆ ಅಪಮಾನ ಮಾಡಿದ್ದನಲ್ಲವೆ? ಆದ್ದರಿಂದ ಸ್ವತಃ ರಾಮನೇ ಬಂದು ತನ್ನನ್ನು ರಕ್ಷಿಸಿ ಮಾನ ಕಾಪಾಡಿಕೊಳ್ಳಲೆಂದು ಅವಳ ಹಠ.

ಸೀತೆ ತಲೆಯಿಂದ ಕೇಶಾಭರಣವೊಂದನ್ನು ತೆಗೆದು "ಇದನ್ನು ನನ್ನ ಪ್ರೀತಿಯ ಸಂಕೇತವಾಗಿ ರಾಮನಿಗೆ ಕೊಡು" ಎಂದು ಹನುಮಂತನ ಕೈಗಿತ್ತಳು. " ಅವನ ರಾಣಿಯಾಗಲು ಒಪ್ಪದಿದ್ದರೆ ನನ್ನನ್ನು ಕೊಂದು ಭಕ್ಷಿಸುವುದಾಗಿ ರಾವಣ ಬೆದರಿಕೆ ಹಾಕಿದ್ದಾನೆಂದು ರಾಮನಿಗೆ ತಿಳಿಸು. ಅವನು ಕೊಟ್ಟಿರುವ ಹನ್ನೆರಡು ತಿಂಗಳ ನಡುವಿನಲ್ಲಿ ಇನ್ನು ಉಳಿದಿರುವುದು ಎರಡೇ ಎಂದು ಹೇಳು."

ಹನುಮಂತನಿಗೆ ಸೀತೆಯನ್ನು ಬಿಟ್ಟು ಹೋಗುವುದು ಇಷ್ಟವಿರಲಿಲ್ಲ. ಆದರೆ ಅವನು ರಾಮನಿಗೆ ಸುದ್ದಿ ಮುಟ್ಟಿಸಬೇಕಾಗಿತ್ತು. ಸೀತೆಯ ದುಃಖವನ್ನು ನೋಡಿ ಅವನೊಳಗೆ ಕೋಪ ಉರಿಯ ತೊಡಗಿತು.



ಹನುಮಂತ ಬಾಲ ಬಡಿಯುತ್ತ ಲಂಕೆಯಲ್ಲಿ ಎಲ್ಲೆಲ್ಲೂ ಬೆಂಕಿಯಿಟ್ಟ

'ಲಂಕೆ ಬಿಡುವ ಮೊದಲು ರಾವಣನ ಅಹಂಕಾರಕ್ಕೆ ತಕ್ಕ ಬುದ್ಧಿ ಕಲಿಸಿ ಹೋಗುತ್ತೇನೆ,' ಹನುಮಂತ ಗುರುಗುಟ್ಟಿದ. "ರಾಮನ ವಾನರ ಸೇನೆಯ ರುಚಿ ಅವನಿಗೆ ಕೊಂಚ ತಟ್ಟಲಿ," ಎನ್ನುತ್ತ ಹನುಮಂತ ಲಂಕೆಯ ತೋಟದ ಹಣ್ಣಿನ ಮರಗಳನ್ನೆಲ್ಲ ಹಾಳುಮಾಡಿದ.

ವಿಚಿತ್ರರೂಪದ ಒಂದು ಮೃಗ ಲಂಕೆಯಲ್ಲೆಲ್ಲಾ ಹಾವಳಿ ಹಾಕುತ್ತಿದೆಯೆಂದು ತಿಳಿದಾಗ ರಾವಣ ತನ್ನ ಬಲಿಷ್ಠ ಸೈನಿಕರಲ್ಲಿ ಕೆಲವರನ್ನು ಅದರೊಡನೆ ಹೋರಾಡಲು ಕಳಿಸಿದ. ಹನುಮಂತ ಅಷ್ಟಾಗಿ ಶ್ರಮ ಪಡದೆ ಅವರೆಲ್ಲರನ್ನೂ ಕೊಂದ.

ಹನುಮಂತನ ಶಕ್ತಿಯನ್ನು ಕಂಡು ರಾವಣನಿಗೆ ಆಶ್ಚರ್ಯವಾಯಿತು. ಹನುಮಂತನನ್ನು ಹಿಡಿಯಲು ಮಗ ಇಂದ್ರಜಿತುವನ್ನೇ ಕಳಿಸಿದ. ಹನುಮಂತ ಇಂದ್ರಜಿತುವಿಗೆ ಸರಿಸಾಟಿಯಾಗಿರಲಿಲ್ಲ. ಇಂದ್ರಜಿತು ಅವನನ್ನು ಹಗ್ಗದಿಂದ ಕಟ್ಟಿ ರಾವಣನ ಆಸ್ಥಾನಕ್ಕೆ ಎಳೆದೊಯ್ದ.

ಆ ಕಾಲದಲ್ಲಿ ರಾಜರು ತಮ್ಮ ಒಳಜಗಳಗಳನ್ನು ಸಾಧ್ಯವಾದಷ್ಟು ಶಾಂತಿಯಿಂದಲೇ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಪರೂಪವಾಗಿ, ಬೇರೆ ದಾರಿಯಿಲ್ಲವೆಂದಾಗ ಮಾತ್ರ, ಯುದ್ಧಕ್ಕೆ ಇಳಿಯುತ್ತಿದ್ದರು. ಹನುಮಂತ ರಾಮನ ದೂತನಾದುದರಿಂದ ಮೃದುವಾಗಿಯೇ ಮಾತು ಷುರುಮಾಡಿದ. "ಏನು, ಸೀತೆಯನ್ನು ರಾಮನಲ್ಲಿಗೆ ಹಿಂದಿರುಗಿ ಕಳಿಸಲು ಒಪ್ಪುವೆಯಾ?" ಎಂದು ಹನುಮಂತ ಕೇಳಿದ.

ನಿರೀಕ್ಷಿಸಬಹುದಾದಂತೆ, ರಾವಣ ಆ ಮಾತಿಗೆ ಬಗ್ಗಲಿಲ್ಲ. ಕೋಪದಿಂದ ಹನುಮಂತನ ಕಡೆ ತಿರುಗಿ, "ಹೋಗಿ, ನಿನ್ನ ದಣಿಗೆ ಹೇಳು. ಎಂದೆಂದಿಗೂ ನಾನು ಸೀತೆಯನ್ನು ಬಿಟ್ಟುಕೊಡಲಾರೆ. ಏಯ್, ಪೆದ್ದು ಕಪಿ! ನೀನಿನ್ನು ನಿನ್ನ ಕಾಡಿಗೆ ಹೋಗಬಹುದು," ಎನ್ನುತ್ತ ರಾವಣ ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ ಕಾಡಿಗೆ ಅಟ್ಟಿರೆಂದು ತನ್ನ ಕಡೆಯವರಿಗೆ ಅಪ್ಪಣೆ ಮಾಡಿದ.


ಹನುಮಂತನಿಗೆ ತನ್ನ ಬಾಲಕ್ಕೆ ತಗುಲಿದ ಬೆಂಕಿಗಿಂತ ರಾವಣನ ಮಾತಿನಿಂದ ಹೆಚ್ಚು ಉರಿಯಾಯಿತು. ಆ ರೋಷದಲ್ಲಿ ಅವನು ಬಾಲ ಬಡಿದು ಎಲ್ಲೆಲ್ಲೂ ಬೆಂಕಿಯಿಡುತ್ತ ಲಂಕೆಯ ಮೇಲೆಲ್ಲಾ ಹಾರಾಡಿದ.

ಬೆಂಕಿಯ ಉರಿಯಿಂದ ಹನುಮಂತನ ಬಾಲಕ್ಕೆ ನೋವಾದುದೇನೋ ನಿಜ. ಆದರೆ ರಾಮನ ಮೇಲಿನ ಪ್ರೇಮದಿಂದಾಗಿ ಅವನು ತನ್ನ ನೋವೇ ಹೆಚ್ಚೆಂದುಕೊಳ್ಳಲಿಲ್ಲ. ಅಲ್ಲದೇ ಧೈರ್ಯವಂತರು ಮಿಸುಕಾಡದೆ ನೋವನ್ನು ಸಹಿಸುತ್ತಾರೆ. ಹನುಮಂತ ಬಾಲವನ್ನು ತಣ್ಣನೆಯ ಸಮುದ್ರದ ಅಲೆಗಳಲ್ಲಿ ಅದ್ದಿ ಆರಿಸಿ, ಮತ್ತೊಮ್ಮೆ ಆಕಾಶಕ್ಕೆ ನೆಗೆದು ಮೇಲು ದಂಡೆಗೆ ತಲುಪಿದ. ಅಲ್ಲಿ ವಾನರ ಗೆಳೆಯರು ಅವನಿಗೆ ಕಾಯುತ್ತಿದ್ದರು.

ಹನುಮಂತ ಗೆಳೆಯರ ಮಧ್ಯೆ ಬಂದಿಳಿದಾಗ ಅವನಿಗೆ ಭಾರೀ ಸ್ವಾಗತ ಕಾದಿತ್ತು. ನೆಲ ಮುಟ್ಟುವ ಮೊದಲೇ ಅವನು "ಸೀತೆಯನ್ನು ಕಂಡು ಬಂದೆ" ಎಂದು ವಿಜಯೋತ್ಸಾಹದಿಂದ ಕೂಗಿದ. ಅದನ್ನು ಕೇಳಿದಾಗ ವಾನರರು ಸಮುದ್ರದ ಅಲೆಗಳ ಶಬ್ದವನ್ನು ಮುಳುಗಿಸುವಷ್ಟು ಜೋರಾಗಿ ಹರ್ಷೋದ್ಗಾರ ಮಾಡಿದರು!

ಸಂಕಟ ಕಾಲದ ಸ್ನೇಹಿತ ವಿಭೀಷಣ

ಹನುಮಂತನ ಸ್ನೇಹಿತರು ಅವನ ಸಾಹಸಗಳ ಬಗ್ಗೆ ತಿಳಿಯಬಯಸಿದರು. ಅವನು ಅವರಿಗೆ ತಾನು ಸೀತೆಯನ್ನು ಪತ್ತೆಮಾಡಿದ್ದು ಹೇಗೆ, ಲಂಕೆಗೆ ಬೆಂಕಿಯಿಟ್ಟದ್ದು ಹೇಗೆ ಎಂದೆಲ್ಲ ಹೇಳಿದ. ಲಂಕೆ ಸುಟ್ಟ ಕಥೆಯನ್ನು ಕೇಳುವಾಗ ವಾನರರು ಸಂತೋಷದಿಂದ ಕಿರುಚಿ ಕುಣಿದಾಡಿದರು. ಸುಗ್ರೀವನ ಅರಮನೆ ತಲುಪುವವರೆಗೂ ಅವರು ಹಿಗ್ಗಿನಿಂದ ತುಂಟಾಟ ವಾಡುತ್ತ ನಡೆದರು.



ಅರಮನೆ ತಲಪುವವರೆಗೂ ಅವರು ಹಿಗ್ಗಿನಿಂದ ಮಂಗಾಟವಾಡುತ್ತ ನಡೆದರು


ಅರಮನೆಯಲ್ಲಿ ಆತಂಕದಿಂದ ಕಾಯುತ್ತಿದ್ದ ಸುಗ್ರೀವನಿಗೆ ಆ ಜೋರು ಗದ್ದಲ ಕೇಳಿದಾಗ ಅವನು 'ಸರಿ! ಇದು ಶುಭ ಸುದ್ದಿ' ಎಂದುಕೊಂಡ. ಹನುಮಂತ ಒಂದೇ ನೆಗೆತಕ್ಕೆ

ಚಂಗನೆ ಹಾರಿ ರಾಮ ಲಕ್ಷ್ಮಣರ ಮುಂದೆ ಕಾಣಿಸಿಕೊಳ್ಳುವವರೆಗೆ ಅವರೂ ಉಸಿರು ಬಿಗಿ ಹಿಡಿದುಕೊಂಡು ಕಾದಿದ್ದರು. "ರಾಮ, ಸೀತೆಯನ್ನು ಹುಡುಕಿಕೊಂಡು ಬಂದಿದ್ದೇನೆ," ಎಂದು ಹನುಮಂತ ಕೂಗಿದ. ರಾಮನ ಮುಖ ಸಂತೋಷದಿಂದ ಬೆಳಗಿತು. ಆಗ ಹನು ಮಂತ ಸೀತೆಯ ಚೆಲುವಾದ ಮುಡಿಯನ್ನು ಕಂಗೊಳಿಸಿದ್ದ ಕೇಶಾಭರಣವನ್ನು ರಾಮನ ಕೈಲಿಟ್ಟ. ಅದನ್ನು ಕಂಡು ರಾಮನ ಮನಸ್ಸಿನಲ್ಲಿ ನೂರಾರು ನೆನಪುಗಳು ಒತ್ತರಿಸಿ ಬಂದವು. ಅವನು ಹನುಮಂತನ ಕಡೆ ಪ್ರೀತಿ ಕೃತಜ್ಞತೆಗಳಿಂದ ನೋಡಿದ.

"ಪ್ರಿಯ ಗೆಳೆಯ, ನೀನು ನನಗೆ ಜೀವ ದಾನ, ಆಶಾದಾನಗಳನ್ನು ಮಾಡಿದ್ದಿ. ಒಬ್ಬ ಮನುಷ್ಯ ಆಶಿಸಬಹುದಾದ್ದೆಲ್ಲವನ್ನೂ ಕೊಟ್ಟಿದ್ದಿ. ನಿನ್ನ ಋಣವನ್ನು ಹೇಗೆ ತಾನೆ ತೀರಿ ಸಲಿ?" ಎನ್ನುತ್ತ ರಾಮ ಹನುಮಂತನನ್ನು ಅಪ್ಪಿಕೊಂಡ.

ಲಕ್ಷ್ಮಣ ರಾವಣನ ಅಹಂಕಾರದ ವಿಷಯವನ್ನು, ಅವನ ಅಪಮಾನದ ಮಾತು ಗಳನ್ನು, ಸೀತೆಯ ದುಃಖದ ವಿಷಯವನ್ನು, ಅವಳು ತನಗೆ ಕಳಿಸಿದ್ದ ಸಂದೇಶಗಳನ್ನು ಕೇಳಿ ದಾಗ, "ನಡಿಯಿರಿ, ಈಗಲೇ ಹೋಗೋಣ. ಕಾಳಗಕ್ಕೆ ಮನಸ್ಸು ಹಾತೊರೆಯುತ್ತಿದೆ" ಎಂದು ಕೂಗಿದ. ಇಡೀ ವಾನರ ಸೈನ್ಯ "ಲಂಕೆಗೆ ಹೋಗೋಣ, ಲಂಕೆಗೆ ಹೋಗೋಣ" ಎಂದು ಕೂಗತೊಡಗಿದವು.

ರಾಮ ಲಕ್ಷ್ಮಣ ಸುಗ್ರೀವರು ಸೈನ್ಯದ ಮುಂದಾಳುಗಳಾದರು. ಸಮುದ್ರ ಮುಟ್ಟುವ ವರೆಗೂ ರಾಮ ಸೀತೆಯನ್ನೂ ಅವಳು ಎದುರಿಸುತ್ತಿರುವ ಅಪಾಯವನ್ನೂ ಕುರಿತು ಚಿಂತಿ ಸುತ್ತಿದ್ದ.



ವಾನರ ಸೈನ್ಯ ಧೂಳಿನ ಬಿರುಗಾಳಿ ಎಬ್ಬಿಸುತ್ತ ಕರಾವಳಿಯ ಕಡೆ ಮುನ್ನಡೆಯಿತು

ವಾನರ ಸೈನ್ಯ ಧೂಳಿನ ಬಿರುಗಾಳಿ ಎಬ್ಬಿಸುತ್ತ ಕರಾವಳಿಯ ಕಡೆ ಮುನ್ನಡೆಯಿತು. ಹಲವಾರು ದಿನಗಳ ಕಾಲ ನಡೆದು ಕೊನೆಗೆ ಅವರು ಸಮುದ್ರ ದಂಡೆ ತಲುಪಿದರು.

ರಾಮ ತನ್ನ ಮುಂದಿದ್ದ ಅಪಾರ ನೀರಿನ ರಾಶಿಯನ್ನೂ ಅಪ್ಪಳಿಸುವ ಅದರ ಹೊಡೆಯಲೆಗಳನ್ನೂ ನೋಡಿದಾಗ ತನ್ನ ಸೈನ್ಯ ಅಂತಹ ಸಮುದ್ರವನ್ನು ದಾಟುವುದಾದರೂ ಹೇಗೆ ಎಂದು ಯೋಚಿಸತೊಡಗಿದ. ಆಗ ಅವನ ನೆರವಿಗೆ ಬಂದವನೆಂದರೆ ವಿಭೀಷಣ.

ವಿಭೀಷಣ ರಾವಣನ ತಮ್ಮ. ಅವನೂ ಬಲಿಷ್ಠ, ಶೂರ. ಅವನಲ್ಲಿಯೂ ರಾಕ್ಷಸ ಸಹಜವಾದ ಶಕ್ತಿಕೌಶಲಗಳಿದ್ದವು. ಅವನು ಮೊದಲಿನಿಂದಲೂ ರಾವಣ ಸೀತೆಯನ್ನು ಬಲವಂತವಾಗಿ ಹಾರಿಸಿಕೊಂಡು ಬಂದದ್ದು ತಪ್ಪೆಂದು ತಿಳಿದಿದ್ದು ಅವನಿಗೆ ಹಾಗೆಂದು ಆಗಾಗ್ಗೆ ಹೇಳುತ್ತಿದ್ದ. ಸೀತೆಯನ್ನು ರಾಮನಿಗೆ ಹಿಂದಿರುಗಿಸಿ, ಮಾಡಿದ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಒತ್ತಾಯ ಮಾಡಿದ್ದ. ರಾವಣನಿಗೆ ಅದು ಇಷ್ಟವಾಗಿರಲಿಲ್ಲ. ಆದರೆ ಅದರಿಂದಾಗಿ ರಾವಣ ತನ್ನನ್ನು ತಾನು ಅಪಾಯಕ್ಕೆ ಗುರಿ ಮಾಡಿಕೊಂಡಿರುವುದರ ಬಗ್ಗೆ ಎಚ್ಚರಿಕೆ ನೀಡಿ, ರಾಮನ ಪರಾಕ್ರಮವನ್ನು ಹೊಗಳತೊಡಗಿದಾಗ ರಾವಣನ ತಾಳ್ಮೆ ತಪ್ಪಿತು. "ನೀನು ನನ್ನ ತಮ್ಮನಾಗಿ ಶತ್ರುವಿನ ಪರ ಮಾತನಾಡುವೆಯಾ" ಎಂದು ಅಬ್ಬರಿಸಿದ. ಕೋಪದಿಂದ ತಮ್ಮನನ್ನು ಲಂಕೆಯಿಂದ ಹೊರದೂಡಿದ್ದ.

ಅಣ್ಣನ ಮೇಲಿನ ಪ್ರೀತಿಯಿಂದ ಹಾಗೂ ತನಗೆ ಏನು ದುರ್ಗತಿ ಒದಗುವುದೋ ಎಂಬ ಭಯದಿಂದ ವಿಭೀಷಣ ದುಃಖದಿಂದ ಲಂಕೆ ಬಿಟ್ಟು ಬಂದಿದ್ದ. ರಾವಣನನ್ನು ಬದಲಾಯಿಸುವುದಾಗಲೀ, ಅಥವಾ ಬೇರೆ ಯಾವುದಾದರೂ ವಿಧದಲ್ಲಿ ಅವನಿಗೆ ಸಹಾಯ ಮಾಡುವುದಾಗಲೀ ಅವನಿಂದ ಸಾಧ್ಯವಿರಲಿಲ್ಲ. ಅವನು ಅಲ್ಲಿ ಇಲ್ಲಿ ಏಕಾಕಿಯಾಗಿ ಅಲೆಯುತ್ತ ಕೊನೆಗೆ ಮೇಲ್ದಂಡೆಗೆ ಬಂದ. ಅಲ್ಲಿ ರಾಮ ತನ್ನ ಮುಂದಾಳುತನದಲ್ಲಿ ಒಂದು ದೊಡ್ಡ ಸೈನ್ಯ ತೆಗೆದುಕೊಂಡು ಬಂದು ನಿಂತಿರುವುದನ್ನು ನೋಡಿದಾಗ ಅವನಿಗೆ ತನ್ನ ಸ್ನೇಹ, ಸೇವೆಗಳನ್ನು ಸಲ್ಲಿಸಲು ಮುಂದಾದ.

ವಿಭೀಷಣ ಮಾಡಿದುದು ಅಷ್ಟೇನೂ ಸ್ವಾಮಿಭಕ್ತಿಯಲ್ಲವೇನೋ. ಆದರೆ ಅವನು ವಿವೇಕಿ. ರಾಮನ ಸಹಾಯವಿಲ್ಲದೇ ಹೋದರೆ, ಹಿಂದೆ ವಾಲಿ ಸುಗ್ರೀವನನ್ನು ಮುಗಿಸಲಿದ್ದಂತೆ ರಾವಣನೂ ತನ್ನನ್ನು ಮುಗಿಸಿಬಿಡುವನೆಂದು ಅವನಿಗೆ ಗೊತ್ತಿತ್ತು. ರಾವಣ ನಿಜವಾಗಿಯೂ ಹಾಗೆ ಮಾಡುತ್ತಿದ್ದನೇ ಎಂದು ನಮಗೆ ತಿಳಿಯದು. ಆದರೆ ಒಬ್ಬ ಇನ್ನೊಬ್ಬನನ್ನು ದ್ವೇಷಿಸತೊಡಗಿದಾಗ, ಅವನು ಎಲ್ಲವನ್ನೂ ಮರೆತುಬಿಡುತ್ತಾನೆ. ವಿಭೀಷಣ ತಾನು ಮಾಡಿದುದನ್ನು ಒಪ್ಪದಿದ್ದುದಕ್ಕೆ, ತನ್ನ ಹಗೆಯಾದ ರಾಮನನ್ನು ಮೆಚ್ಚಿಕೊಂಡದ್ದಕ್ಕೆ ರಾವಣ ಅವನನ್ನು ದ್ವೇಷಿಸುತ್ತಿದ್ದನಲ್ಲವೆ!

ರಾಮ ವಿಭೀಷಣನ ಸ್ನೇಹವನ್ನು ಮರುಮಾತಿಲ್ಲದೆ ಒಪ್ಪಿಕೊಂಡ. ಮೊದಮೊದಲು ಸುಗ್ರೀವನೂ ಅವನ ಸಚಿವರೂ ವಿಭೀಷಣನ ಬಗ್ಗೆ ಶಂಕೆಯಿಂದಿದ್ದರು. ಎಷ್ಟೇ ಆದರೂ ಅವನು ರಾವಣನ ತಮ್ಮ ತಾನೆ. ಆದರೆ ರಾಮ ತನ್ನನ್ನು ನೆಚ್ಚಿ ಬಂದ ಯಾರನ್ನೂ ನಿರಾಶೆ

ಪಡಿಸುತ್ತಿರಲಿಲ್ಲ. ಅವನು ತನ್ನ ಅನುಯಾಯಿಗಳಿಗೆ ವಿಭೀಷಣನನ್ನು ಒಪ್ಪಿಕೊಂಡು ಅವನೊಂದಿಗೆ ಗೆಳೆತನ ಬೆಳೆಸಬೇಕೆಂದು ಒತ್ತಾಯ ಮಾಡಿದ.

ರಾಮ ಮಾಡಿದುದು ಸರಿಯಾಗಿತ್ತು. ವಿಭೀಷಣ ತಾನು ಎಂತಹ ನಿಜವಾದ ಅಮೂಲ್ಯ ಸ್ನೇಹಿತನೆಂದು ಸಾಧಿಸಿ ತೋರಿಸಿದ. ಅವನಿಲ್ಲದಿದ್ದರೆ ವಾನರ ಸೈನ್ಯಕ್ಕೆ ಸಮುದ್ರ ದಾಟಲಾಗುತ್ತಿರಲಿಲ್ಲ. ಅವನು ಮೇಲ್ದಂಡೆಗೂ ಲಂಕೆಗೂ ನಡುವೆ ಸೇತುವೆ ಕಟ್ಟುವುದು ಹೇಗೆಂದು ತೋರಿಸಿಕೊಟ್ಟ. ರಾಕ್ಷಸರು ಅಂತಹ ವಿದ್ಯೆಗಳಲ್ಲಿ ತರಪೇತು ಪಡೆದಿದ್ದರೆಂದು ನಿಮಗೆ ಈಗಾಗಲೇ ಗೊತ್ತಿದೆ.



ಕುಂಭಕರ್ಣನನ್ನು ತುಳಿದು ಎಬ್ಬಿಸಲೆಂದು ರಾವಣ ಆನೆ ಕುದುರೆಗಳನ್ನು ಕಳಿಸಿಕೊಟ್ಟ

ಲಕ್ಷ್ಮಣ ಮತ್ತು ಇಂದ್ರಜಿತು

ವಾನರ ಸೇನೆ ಸಮುದ್ರ ದಾಟಿ ಲಂಕೆ ತಲುಪಿದಾಗ ಅವರ ಮತ್ತು ರಾವಣನ ಸೇನೆಯ ನಡುವೆ ಘೋರ ಯುದ್ಧವಾಯಿತು. ವಾನರರ ಸಾಹಸ ಕೃತ್ಯಗಳು, ಸುಗ್ರೀವನ ಧೈರ್ಯ, ಹನುಮಂತನ ಶೌರ್ಯ ಹಾಗೂ ರಾಮ ಲಕ್ಷ್ಮಣರನ್ನು ಕುರಿತು ವಾಲ್ಮೀಕಿ ಋಷಿ ಅನೇಕ ಅದ್ಭುತ ಕಥೆಗಳನ್ನು ಹೇಳಿದ್ದಾನೆ. ದೊಡ್ಡವರಾದ ಮೇಲೆ ರಾಮಾಯಣದ ಆ ಸುಂದರ ಶ್ಲೋಕಗಳನ್ನು ನೀವೆಯೇ ಓದಬೇಕು. ಆ ಕಥೆಗಳಲ್ಲೆಲ್ಲಾ ಕುಂಭಕರ್ಣ, ಇಂದ್ರ ಜಿತು ಅವರ ಸಾವಿನ ಕಥೆ ತುಂಬ ಸ್ವಾರಸ್ಯಕರವಾಗಿದೆ.

ಕುಂಭಕರ್ಣ ರಾವಣನ ಇನ್ನೊಬ್ಬ ತಮ್ಮ. ಅವನು ದೈತ್ಯಾಕಾರದ ರಾಕ್ಷಸ. ಅವನ ಊಟಕ್ಕೂ ಮಿತಿಯಿರಲಿಲ್ಲ, ನಿದ್ರೆಗೂ ಮಿತಿಯಿರಲಿಲ್ಲ. ನಿಜವಾಗಿ ಊಟದ ಹೊತ್ತು ಬಿಟ್ಟು ಅವನು ಸದಾ ಮಲಗಿರುತ್ತಿದ್ದ. ರಾಕ್ಷಸರಲ್ಲೆಲ್ಲಾ ಅವನು ಅತ್ಯಂತ ಶಕ್ತಿಶಾಲಿ ಯಾದವನು. ಅವನದು ಅಗಾಧವಾದ ಶರೀರ. ಮನುಷ್ಯರಷ್ಟೇ ಅಲ್ಲದೇ ದೇವ ದೇವತೆ ಗಳಿಗೂ ಭೀತಿ ಹುಟ್ಟಿಸುವಷ್ಟು ಶಕ್ತಿಶಾಲಿ ಅವನು. ಅವನು ಸದಾ ನಿದ್ರೆ ಮಾಡುತ್ತಿ ದ್ದುದೇ ಅವರ ಪಾಲಿನ ಪುಣ್ಯವೆನ್ನಬೇಕು. ರಾಮ ಲಂಕೆಯ ನೆಲದ ಮೇಲೆ ಕಾಲಿಟ್ಟಾಗ ಕುಂಭಕರ್ಣ ಗಾಢ ನಿದ್ರೆಯಲ್ಲಿದ್ದ.

ರಾವಣ ಮೊದಲು ಆ ಪುಟ್ಟ ಕಪಿಗಳನ್ನು ಹೆದರಿಸಿ ಓಡಿಸುವುದು ಬಹು ಸುಲಭ ಎಂದುಕೊಂಡಿದ್ದ. ತಮ್ಮನನ್ನು ಎಬ್ಬಿಸುವ ಅಗತ್ಯ ಸಹ ಬೀಳುವುದಿಲ್ಲ ಎಂದುಕೊಂಡಿದ್ದ. ಆದರೆ ದಿನ ಕಳೆದಂತೆ ವಾನರ ಸೇನೆ ಮುನ್ನುಗ್ಗತೊಡಗಿತು. ರಾವಣನ ಕಡೆಯ ಅನೇಕ ಶೂರ, ಶಕ್ತಿಶಾಲೀ ರಾಕ್ಷಸರು ಕೊಲೆಯಾದರು. ಆಗ ರಾವಣನಿಗೆ ಕಳವಳ ಹತ್ತಿಕೊಂಡು, ತಮ್ಮನನ್ನು ಎಬ್ಬಿಸಲು ಜನರನ್ನು ಕಳಿಸಿದ. ಜತೆಗೇ ಅವನ ಮೈಮೇಲೆ ತುಳಿದಾಡಿ ಅವ ನನ್ನು ತಪ್ಪದೇ ಎಬ್ಬಿಸಲೆಂದು ಆನೆ ಕುದುರೆಗಳನ್ನೂ ಕಳಿಸಿಕೊಟ್ಟ.

ಕೊಟ್ಟಕೊನೆಗೆ ಕುಂಭಕರ್ಣ ಕಣ್ಣುಜ್ಜಿಕೊಂಡು ಎದ್ದುನಿಂತ. ವಿಷಯ ತಿಳಿದಾಗ ಮೈ ಜಡ ಬಿಟ್ಟು ಹುರುಪಿನಿಂದ ಕಾಳಗಕ್ಕೆ ಓಡಿದ. ತನ್ನ ಅಗಾಧ ಆಯುಧಗಳನ್ನು ತಿರುವುತ್ತ ತಲೆ ಮುಂದಾಗಿ ದಾಳಿಯಿಟ್ಟ. ವಾನರರಲ್ಲಿ ಅನೇಕರನ್ನು ಕಾಲಿಂದ ತುಳಿದು, ಗದೆಯಿಂದ ಕುಟ್ಟಿ ಕೆಳಗುರುಳಿಸುತ್ತ ಸುತ್ತಲೂ ಹಾವಳಿ ಮಾಡಿದ. ಅವನ ದಾಳಿಯ ಹೊಡೆತವನ್ನು ಸುಗ್ರೀವ, ಹನುಮಂತ, ಕೊನೆಗೆ ಲಕ್ಷ್ಮಣರಿಂದಲೂ ತಡೆದುಕೊಳ್ಳಲಾಗದೆ ಅವರು ಹಿಮ್ಮೆ ಟ್ಟಿದರು. ಅವನನ್ನು ಎದುರಿಸಬಹುದಾಗಿದ್ದವನೆಂದರೆ ರಾಮನೊಬ್ಬನೇ. ಕುಂಭಕರ್ಣನ ದಾಳಿಯ ಹೊಡೆತ ಎಷ್ಟು ಚುರುಕಾಗಿತ್ತೆಂದರೆ ರಾಮನು ಸಹ ಹಲವಾರು ಸಲ ತಪ್ಪಿಸಿಕೊಂಡ. ಕಡೆಗೆ, ರಾಮನ ಒಂದು ಚೂಪಾದ ಬಾಣ ಅವನ ತಲೆ ಹೊಕ್ಕಿತು. ಆ ದೈತ್ಯ ರಾಕ್ಷಸ ಜೋರಾಗಿ ಕಿರುಚುತ್ತ ನೆಲಕ್ಕೆ ಬಿದ್ದ. ಅವನ ತಲೆ ದೇಹದಿಂದ ಬೇರ್ಪಟ್ಟು ಉರುಳಿಕೊಂಡು ಹೋಗಿ ಸಮುದ್ರಕ್ಕೆ ಬಿದ್ದಿತು.



ಕುಂಭಕರ್ಣ ತನ್ನ ಗದೆಯಿಂದ ಅನೇಕ ವಾನರರನ್ನು ಕುಟ್ಟಿ ಕೆಳಗುರುಳಿಸಿದ

ಈಗ ರಾವಣನಿಗೆ ನಿಜವಾಗಿಯೂ ಭಯವಾಯಿತು. ಅವನ ಕಡೆಯವರಲ್ಲಿ ಶ್ರೇಷ್ಠ ರಾದವರು ಅನೇಕರು ಸತ್ತಿದ್ದರು. ಆದರೂ ಅವನು ಕಾಳಗ ನಿಲ್ಲಿಸಲು ಸಿದ್ಧನಿರಲಿಲ್ಲ. "ಇರಲಿ, ಶೂರನಾದ ಮಗ ಇಂದ್ರಜಿತು ಇದ್ದಾನೆ" ಎಂದುಕೊಂಡು ಹೋರಾಟ ಮುಂದು ವರಿಸಿದ.

ಇಂದ್ರಜಿತುವಿನಲ್ಲಿ ಬರಿಯ ಧೈರ್ಯ ಶೌರ್ಯಗಳಷ್ಟೇ ಅಲ್ಲ, ಸಾಧನೋಪಾಯವೂ ಇತ್ತು. ಅವನು ಒಂದು ಮಾಯಾರಥದಲ್ಲಿ ಅದೃಶ್ಯನಾಗಿ ಕುಳಿತು, ಆಕಾಶದಲ್ಲಿ ಹಾರಿ ಶತ್ರು ಸೈನ್ಯದಲ್ಲಿ ನಿದ್ರಾರೋಗ ಹರಡಿದ. ಅದು ಮಂತ್ರ ವಿದ್ಯೆಯೊ, ಅಥವಾ ರಾಕ್ಷಸರಿಗೆ ಸಿಡಿಗುಂಡು ತಯಾರಿಸಿ ಅವನ್ನು ಆಕಾಶದಿಂದ ಮಳೆಗರೆಸುವುದು ತಿಳಿದಿತ್ತೊ, ಅಂತೂ ಇಂದ್ರಜಿತು ಮಾತ್ರ ಆ ಗುಟ್ಟುಗಳನ್ನು ಯಾರಿಗೂ ಬಿಟ್ಟುಕೊಡಲಿಲ್ಲ.

ಈ ಮಂತ್ರ ತಂತ್ರಗಳೊಂದೂ ತಿಳಿಯದ ರಾಮ ರಾಕ್ಷಸರೊಂದಿಗೆ ಹೇಗೆ ಹೋರಾ ಡಿದನೆಂದು ನೀವು ಕೇಳಬಹುದು. ರಾಮನ ಬಾಣಗಳು ನಮ್ಮ ಈಗಿನ 'ಆ್ಯಂಟಿ ಏರ್ ಕ್ರಾಫ್ಟ್ ಗನ್' ಗಳಂತೆ ಕೆಲಸ ಮಾಡುತ್ತಿದ್ದವು. ಹಾರುವುದರಲ್ಲಿ ಪ್ರವೀಣನಾದ ಹನುಮಂತನಿಗೆ ನಿದ್ರಾರೋಗವನ್ನು ಗುಣಪಡಿಸುವ ಒಂದು ಮೂಲಿಕೆ ಗೊತ್ತಿತ್ತು. ಅದರ ಹೆಸರು ಸಂಜೀ ವಿನಿ. ಅದು ಬೆಳೆಯುತ್ತಿದ್ದುದು ಹಿಮಾಲಯದಲ್ಲಷ್ಟೇ. ಕಾಳಗ ನಡೆದಿದ್ದಾಗ ಹನುಮಂತ ವಾನರರನ್ನು ನಿದ್ರಾರೋಗದಿಂದ ಬದುಕಿಸಲು ಹಾರಿಹೋಗಿ ಈ ಮೂಲಿಕೆ ತಂದಿದ್ದ. ರಾಮನ ಸೈನ್ಯ ರಾವಣನದಷ್ಟೇ ಸಜ್ಜಿತವಾಗಿತ್ತು.

ಈ ನಡುವೆ ಇಂದ್ರಜಿತು ತನ್ನ ಮಂತ್ರಶಕ್ತಿಗಳನ್ನು ಎಲ್ಲಿ, ಹೇಗೆ ಸಿದ್ಧ ಮಾಡು ತ್ತಾನೆಂದು ವಿಭೀಷಣ ತಿಳಿದುಕೊಂಡ. ಅವನು ಆ ಶಕ್ತಿಗಳನ್ನು ಒಂದು ಗುಡಿಯಲ್ಲಿ ಅಡಗಿಸಿ ಇಟ್ಟಿದ್ದ. ಆ ಗುಡಿ ನಾಶವಾದ ಕೂಡಲೇ ಲಕ್ಷ್ಮಣ ಅವನೊಂದಿಗೆ ಯೋಧರು ಯೋಧ ರೊಡನೆ ಕಾದಾಡುವಂತೆ ಕಾದಾಡಿದ.

ಚಿಕ್ಕಪ್ಪ ಶತ್ರುಗಳಿಗೆ ತನ್ನ ಗುಟ್ಟನ್ನು ಬಹಿರಂಗ ಮಾಡಿದನೆಂದು ಇಂದ್ರಜಿತುವಿಗೆ ವಿಭೀಷಣನ ಮೇಲೆ ತುಂಬಾ ಕೋಪ ಬಂದಿತು. ಅವನು ಧನುರ್ವಿದ್ಯೆಯಲ್ಲಿ ಚತುರ ನಾದರೂ ಅವನಿಗಿಂತ ಶ್ರೇಷ್ಠ ಬಿಲ್ಲುಗಾರನಾದ ಲಕ್ಷ್ಮಣನ ವಿರುದ್ಧ ಹೋರಾಡಿ ಗೆಲ್ಲುವುದು ಸಾಧ್ಯವಿರಲಿಲ್ಲ. ಆದರೂ ಅವನು ಕೊನೆಯವರೆಗೂ ಧೈರ್ಯಶಾಲಿಯಾಗಿದ್ದು, ಲಕ್ಷ್ಮಣನ ಬಾಣಕ್ಕೆ ತುತ್ತಾಗುವವರೆಗೂ ದಣಿವೆನ್ನದೆ ಹೋರಾಡಿದ. ಈಗ ರಾಮನ ಶಕ್ತಿ ಯನ್ನು ರಾವಣ ಒಂಟಿಯಾಗಿ ಎದುರಿಸಬೇಕಾಯಿತು.




ಹನುಮಂತ ವಾನರ ಸೈನ್ಯವನ್ನು ಬದುಕಿಸಲು ಹಾರಿಹೋಗಿ ಮೂಲಿಕೆ ತಂದ

ರಾವಣನ ಸಾವು

ಮಗ ಸತ್ತ ಸುದ್ದಿ ರಾವಣನಿಗೆ ತಿಳಿದಾಗ ಅವನ ದುಃಖಕ್ಕೆ ಮಿತಿಯಿರಲಿಲ್ಲ. ಅಜೇಯನಾದ ಇಂದ್ರಜಿತು ಶತ್ರುವಿಗೆ ಹೇಗೆ ತುತ್ತಾದನೆಂಬುದು ಅವನ ಕಲ್ಪನೆಗೆ ಎಟುಕಲಿಲ್ಲ. ಎಲ್ಲೋ ಏನೋ ಮೋಸವಾಗಿದೆಯೆಂದುಕೊಂಡ. "ಈಗ ಸ್ವತಃ ನಾನೇ ಹೋಗಿ ಅವನ ಸಾವಿಗೆ ಸೇಡು ತೀರಿಸಿಕೊಳ್ಳುತ್ತೇನೆ" ಎನ್ನುತ್ತ ಹೊರಟ. ಕೋಪ ದುಃಖಗಳಿಂದ ಅವನ ಕಣ್ಣು ಊದಿಕೊಂಡಿತ್ತು.

ರಾಣಿ ಮಂಡೋದರಿ ಅವನನ್ನು ತಡೆಯಲು ಪ್ರಯತ್ನಿಸಿದಳು. ಅವಳಿಗೆ ಭವಿಷ್ಯದ ಬಗ್ಗೆ ಅಪಶಕುನಗಳು ಕಾಣತೊಡಗಿದ್ದವು. ಶತ್ರುಗಳು ಇಂದ್ರಜಿತುವನ್ನೂ ಸಹ ಕೊಲ್ಲದೇ ಬಿಟ್ಟಿರಲಿಲ್ಲ. ಅಂದ ಮೇಲೆ, ರಾವಣನಿಗೆ ಎಷ್ಟೇ ವರಬಲವಿದ್ದರೂ ಅವರನ್ನು ಸೋಲಿಸಲು ಅವನಿಂದ ಸಾಧ್ಯವೇ? ಆದರೆ ರಾವಣ ಅವಳ ಮಾತಿಗೆ ಕಿವಿಗೊಡದೆ ಅವಳನ್ನು ಉಪೇಕ್ಷಿಸಿದ. ಆಯುಧಗಳನ್ನು ತರಿಸಿ ತೊಟ್ಟು, ರಥ ಹತ್ತಿ, ಕಾಳಗಕ್ಕೆ ಹೊರಟ.



ರಾಮ ರಾವಣನ ಬಾಣಗಳನ್ನು ಅವು ತಗಲುವ ಮೊದಲೇ ತಡೆದು ಕೆಳಗುರುಳಿಸುತ್ತಿದ್ದ

ರಾಮ ಕಣ್ಣಿಗೆ ಬಿದ್ದೊಡನೆಯೇ, ರಾವಣ ನಿಂತು ಬಿಲ್ಲನ್ನು ಹುರಿಗೊಳಿಸಿ, ಒಂದರ ಮೇಲೊಂದರಂತೆ ಬಾಣದ ಧಾರೆಯನ್ನೇ ಸುರಿಸಿದ. ಆದರೆ ರಾಮನಿಗೆ ಅವನು ಸರಿಸಾಟಿಯೇ. ರಾಮ ಅವನ ಒಂದೊಂದು ಬಾಣವನ್ನೂ ಅದು ತನಗೆ ತಾಗುವ ಮೊದಲೇ

ತಡೆದು ಕೆಳಗುರುಳಿಸಿದ. ಅಂತಹ ಕೌಶಲ ಅವನದ್ದು, ಕಾಳಗ ಉದ್ವೇಗದಿಂದ ಕೂಡಿ ಭೀಕರವಾಗಿ ನಡೆಯತೊಡಗಿತು. ಸ್ವತಃ ದೇವತೆಗಳೇ ಭೂಮಿಗಿಳಿದು ಬಂದು ಉಸಿರು ಬಿಗಿಹಿಡಿದುಕೊಂಡು ಅದನ್ನು ನೋಡುತ್ತ ನಿಂತರು. ಒಂದೇ ಸಮನೆ ಎರಡು ದಿನಗಳ ಕಾಲ ಕಾಳಗ ನಡೆಯಿತು. ರಾವಣನ ಬಳಲಿಕೆ ಹೆಚ್ಚುತ್ತ ಹೋಯಿತು. ಎರಡನೆಯ ದಿನದ ಕೊನೆಯಲ್ಲಿ ರಾಮನ ಒಂದು ಬಾಣ ರಾವಣನ ಬಿಲ್ಲನ್ನೇ ಚೂರುಚೂರು ಮಾಡಿ ಅವನನ್ನು ರಥದಿಂದ ಕೆಳಕ್ಕೆ ಉರುಳಿಸಿತು. ರಾಮ ಈ ಅವಕಾಶದ ಸದುಪಯೋಗ ಪಡೆದು ತನ್ನನ್ನು ಕೊಲ್ಲುವನೆಂದುಕೊಂಡಿದ್ದ ರಾವಣ. ಆದರೆ ರಾಮನ ಧ್ವನಿ ಘಂಟಾ ನಾದದಂತೆ ಸ್ಪಷ್ಟವಾಗಿ ಕೇಳಿ ಬಂತು, "ನಿರಾಯುಧನಾದ ಶತ್ರುವನ್ನು ನಾನು ಕೊಲ್ಲುವು ದಿಲ್ಲ. ಹೋಗಿ ಸುಧಾರಿಸಿಕೊ, ರಾವಣ. ಮತ್ತೆ ನಾಳೆ ಹೊಸ ಆಯುಧಗಳಿಂದ ಬಂದು ಎದುರಿಸು." ರಾಮನ ಔದಾರ್ಯವನ್ನು ಕಂಡು ರಾವಣ ದಂಗು ಬಡಿದು ಹೋದ.

ಮರುದಿನ, ಮತ್ತೆ ಹೊಸದಾಗಿ ಕಾಳಗ ಷುರುವಾಯಿತು. ಆದರೆ ರಾವಣನಿಗೆ ತನ್ನ ಕೊನೆ ಸಮೀಪಿಸಿದೆಯೆಂದು ಗೊತ್ತಿತ್ತು. ಅವನಿಗೆ ಹಲವಾರು ಕಡೆ ರಾಮನ ಬಾಣಗಳಿಂದ ಗಾಯವಾಯಿತು. ಅವನಿಗೆ ಅದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಕೊನೆಗೆ ರಾಮನ ಚೂಪಾದ ಒಂದು ಬಾಣ ಅವನ ಎದೆ ಹೊಕ್ಕಿತು. ಆ ಮಹಾ ರಾಕ್ಷಸ ಸತ್ತುಬಿದ್ದ. ರಾವಣ ಸತ್ತು ಬಿದ್ದುದನ್ನು ಕಂಡಾಗ ವಾನರರು ಹಿಗ್ಗಿನಿಂದ ಕೂಗಾಡಿದರು. ಇನ್ನು ಮಾನ ವರು ಭಯವಿಲ್ಲದೇ ಬದುಕಬಹುದೆಂದು ದೇವತೆಗಳು ಆನಂದಪಟ್ಟರು. ಈ ಎಲ್ಲ ಆನಂದ ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸುತ್ತಿತ್ತು. ಎಲ್ಲೆಲ್ಲೂ ಕೃತಜ್ಞತೆಯ ಸಂಕೇತವಾಗಿ ಪೂಜೆಗಳು ನಡೆದವು.

ಹನುಮಂತನಿಗೆ ಒಳ್ಳೆಯ ಸುದ್ದಿಯನ್ನು ಕೊಂಡೊಯ್ಯುವುದೆಂದರೆ ಆಸೆ. ರಾವಣನ ಸಾವಿನ ಸುದ್ದಿಯನ್ನು ತಿಳಿಸಲು ಅವನು ಸೀತೆಯಿದ್ದಲ್ಲಿಗೆ ಓಡಿದ. ಸೀತೆಗೆ ತನ್ನ ಕಿವಿಯನ್ನು ತಾನೇ ನಂಬಲಾಗಲಿಲ್ಲ. ರಾಮನ ಸುರಕ್ಷತೆಯ ಬಗ್ಗೆ ಆತಂಕಭರಿತವಾಗಿದ್ದ ಅವಳ ಮುಖದಲ್ಲಿ ನಗೆ ಹೊಮ್ಮಿತು. ಆ ಸಂತೋಷದ ಭರದಲ್ಲಿ ಅವಳು ನಗುತ್ತ, ಕಣ್ಣೀರಿಡುತ್ತ ಹನುಮಂತನನ್ನು ಹರಸಿದಳು, "ಪ್ರಿಯ ಹನುಮಂತ, ಸದಾ ನೀನು ಹೀಗೆಯೇ ಹರಕೆಗೆ ಪಾತ್ರನಾಗಿರು. ನಿನ್ನನ್ನು ಹೇಗೆ ವಂದಿಸಲಿ, ನೀನು ಮತ್ತೆ ಮತ್ತೆ ಪ್ರಿಯತಮನ ಸುದ್ದಿ ತಂದು ತಿಳಿಸುತ್ತಿದ್ದೀಯ, ಮತ್ತೆ ಮತ್ತೆ ನನಗೆ ಸಂತೋಷ ಕೊಡುತ್ತಿದ್ದೀಯ. ಹೇಳು ನಾನು ರಾಮನನ್ನು ಕಾಣುವುದು ಯಾವಾಗ?"

"ಬಾ ತಾಯಿ, ಈಗಲೇ ಹೋಗೋಣ" ಎನ್ನುತ್ತ ಹನುಮಂತ ಸೀತೆಯನ್ನು ರಾಮ ನಿದ್ದಲ್ಲಿಗೆ ಕರೆತಂದ. ಸಂತೋಷದಿಂದ ಕಂಪಿಸುತ್ತ ಸೀತೆ ರಾಮನಿಗೆ ವಂದಿಸಿದಳು. ಆದರೆ ಆಶ್ಚರ್ಯವೆಂದರೆ ಅವನು ನಿರುತ್ಸಾಹದಿಂದ ಉತ್ತರ ಕೊಟ್ಟ. ಸೀತೆಗೆ ಗಾಬರಿಯಾಯಿತು. ರಾಮನಿಗೆ ತನ್ನನ್ನು ಕಂಡು ಅತ್ಯಾನಂದವಾಗುವುದು ಎಂದುಕೊಂಡಿದ್ದರೆ ಅವನೇಕೆ ಕೋಪ ಬಂದವನಂತೆ ಕಾಣುತ್ತಿದ್ದಾನೆಂದು ಅವಳಿಗೆ ಅರ್ಥವಾಗಲಿಲ್ಲ.

ಸೀತೆಯ ಬಗ್ಗೆ ರಾಮನಿಗೆ ತುಂಬಾ ಪ್ರೀತಿಯಿತ್ತು. ಹಗಲು ರಾತ್ರಿ ಅವಳನ್ನು ಕುರಿತು ಯೋಚಿಸುವುದರಲ್ಲಿಯೇ ಕಳೆದಿದ್ದ. ಆದರೆ ಅವಳು ಈಗ ಎದುರು ನಿಂತಾಗ ಮನಸ್ಸಿನಲ್ಲಿ ಏನೋ ಶಂಕೆ ಎದ್ದಿತು. ಅವಳು ಇಲ್ಲಿಯವರೆಗೂ ತನಗೆ ನಿಷ್ಠಳಾಗಿಯೇ ಇದ್ದಳೆ? ರಾಮ ಅವಳನ್ನು ಚೆನ್ನಾಗಿ ಅರಿತಿದ್ದ. ಅವನಲ್ಲಿ ಅವಳ ಬಗ್ಗೆ ಕ್ಷಣಕಾಲ ಸಹ ಅಂತಹ ಶಂಕೆ ಬರಬಾರದಾಗಿತ್ತು. ಆದರೆ ಅವನು ಸಹ ಮನುಷ್ಯನೇ, ಅವನಿಗೂ ಮಾನವ ಸಹಜವಾದ ಅಸೂಯೆ ಕಾಡದೇ ಬಿಡಲಿಲ್ಲ. ಅದೃಷ್ಟಕ್ಕೆ, ರಾಮನ ಶಂಕೆಯನ್ನು ಪರಿಹರಿಸುವುದು ಹೇಗೆಂದು ಸೀತೆಗೆ ಗೊತ್ತಿತ್ತು. ರಾಮನ ಮುಖವನ್ನು ಆವರಿಸಿದ್ದ ಕಪ್ಪನೆಯ ಮೋಡಗಳು ಚದುರಿದವು, ಅದು ಮತ್ತೆ ಅರಳಿತು.

ರಾಮ ವಿಭೀಷಣನಿಗೆ ಲಂಕೆಯ ದೊರೆಯಾಗಿ ಪಟ್ಟಕಟ್ಟಿ, ಉತ್ತರದ ದಾರಿ ಹಿಡಿದು ಅಯೋಧ್ಯೆಗೆ ಹೊರಟ. ಈಗ ಅವನ ಹದಿನಾಲ್ಕು ವರ್ಷಗಳ ವನವಾಸ ಮುಗಿದಿತ್ತು. ಭರತ ತನ್ನ ಬರುವಿಗಾಗಿ ಎಷ್ಟು ಆತುರದಿಂದ ಕಾಯುತ್ತಿರುತ್ತಾನೆಂದು ಅವನಿಗೆ ಗೊತ್ತಿತ್ತು. ಭಾರವಾದ ಎದೆಯಿಂದ ವಾನರ ಮಿತ್ರರನ್ನು ಬೀಳ್ಕೊಟ್ಟ. "ನಿಮ್ಮನ್ನು ಎಂದೆಂದಿಗೂ ಮರೆಯುವುದಿಲ್ಲ. ಈ ಲೋಕದಲ್ಲಿ ರಾಮನ ಹೆಸರಿರುವವರೆಗೂ ನಿಮ್ಮ ಶೌರ್ಯದ ನೆನಪು ಉಳಿಯುತ್ತದೆ" ಎಂದು ಅವರಿಗೆ ಮಾತು ಕೊಟ್ಟ. ರಾಮನೊಂದಿಗೆ ಅವನ ಪಟ್ಟಾಭಿಷೇಕದಲ್ಲಿ ಭಾಗಿಯಾಗಲು ಸುಗ್ರೀವ ಹನುಮಂತರೂ ಇನ್ನೂ ಕೆಲವು ವಾನರರೂ ಹೊರಟರು.


ಭರತ ಮಿಲನ

ರಾಮ, ಸೀತೆ, ಲಕ್ಷ್ಮಣರು ಪುಷ್ಪಕ ವಿಮಾನ ಹತ್ತಿ ಕಡಲು ಕಾಡುಗಳನ್ನು ದಾಟುತ್ತ ವೇಗವಾಗಿ ಹಾರಿಬಂದರು. ದಾರಿಯಲ್ಲಿ, ರಾಮ ಸೀತೆಗೆ ಏನೆಲ್ಲ ನಡೆಯಿತು, ತಾನು ಅವ ಳನ್ನು ಹುಡುಕಿಕೊಂಡು ಊರಿಂದ ಊರಿಗೆ ಹೇಗೆ ಅಲೆದೆ ಎಂಬುದನ್ನು ವಿವರಿಸಿದ. "ನೋಡು, ಇಲ್ಲಿ ವಿಭೀಷಣ ಕಟ್ಟಿಕೊಟ್ಟ ಸೇತುವೆಯಿದೆ. ಅಲ್ಲಿ ದೂರದಲ್ಲಿ ಎಡಗಡೆಗೆ ನಾನು ಹನುಮಂತನನ್ನು ಮೊದಲು ಭೇಟಿಯಾದ ಬೆಟ್ಟವಿದೆ. ಜಟಾಯುವಿನ ನೆನಪಿದೆಯೆ, ಸೀತೆ? ಅವನು ಸಾಯುತ್ತ ಬಿದ್ದಿದುದು ಈ ಸ್ಥಳದಲ್ಲೇ. ಅಲ್ಲಿ, ಆ ಕಣಿವೆಯಲ್ಲಿ, ನಮಗೆ ದುರ್ಗತಿ ತಂದ ಚಿನ್ನದ ಜಿಂಕೆಯನ್ನು ಕೊಂದೆ," ರಾಮ ಹೇಳುತ್ತ ಹೋದ. ತಾನು ಪಟ್ಟ ಕಷ್ಟಗಳನ್ನು ನೆನೆದಂತೆ ಅವನ ಧ್ವನಿಯಲ್ಲಿ ಮಾರ್ದವ ಮೂಡಿತು. ಸೀತೆ ಅವನ ಕಡೆ ಪ್ರೀತಿಯ ದೃಷ್ಟಿ ಬೀರಿದಳು.


ರಾಮನಿಗೆ ಇದ್ದಕ್ಕಿದ್ದಂತೆ ಒಂದು ಯೋಚನೆ ಬಾಧಿಸತೊಡಗಿತು. ಮುಖ ಸಿಂಡರಿ ಸುತ್ತ ಅವನು ಹನುಮಂತನಿಗೆ ಹೇಳಿದ. "ಭರತ ಬಹಳ ಕಾಲದಿಂದ ದೊರೆಯಾಗಿದ್ದಾನೆ. ನಾನು ಹಿಂದಿರುಗುತ್ತಿರುವುದು ಅವನಿಗೆ ಇಷ್ಟವಿಲ್ಲವೇನೋ. ನೀನು ಮುಂದಾಗಿ ಹೋಗಿ, ನಾನು ಅಯೋಧ್ಯೆ ತಲಪುವ ಮೊದಲು, ಅವನ ಮನಸ್ಸನ್ನು ತಿಳಿದು ಬಾ."

ರಾಮ ದೇಶಾಂತರ ಹೋಗಿರುವಾಗ ತಾನು ಸಿರಿಸಂಪತ್ತುಗಳನ್ನು ಅನುಭವಿಸುತ್ತಾ ಸುಖ ಸೌಕರ್ಯಗಳಲ್ಲಿ ಬಾಳುವುದು ಭರತನಿಗೆ ಅಸಹ್ಯವಾಗಿತ್ತು. ಆದ್ದರಿಂದ ಅವನು ಅಯೋ ಧ್ಯೆಯ ಹೊರಗೆ ಋಷಿಯಂತೆ ಬಾಳುತ್ತಿದ್ದ. ಅವನು ಅಯೋಧ್ಯೆಯನ್ನೇನೋ ಆಳುತ್ತಿದ್ದ, ಆದರೆ ಅರಮನೆಯ ಸಿಂಹಾಸನದಿಂದಲ್ಲ, ಒಂದು ಬಡ ಗುಡಿಸಲಿನಲ್ಲಿ ಕುಳಿತೇ ದೊರೆಯಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುತ್ತಿದ್ದ. ದೂರದ ಪಂಚವಟಿಯಲ್ಲಿ ಅಣ್ಣಂದಿರು ಬಾಳು ತ್ತಿದ್ದಂತೆಯೇ ಅವನೂ ಸರಳ ಜೀವನ ಬಾಳುತ್ತಿದ್ದ.

ಆವೊತ್ತಿಗೆ ರಾಮ ವನವಾಸಕ್ಕೆ ಹೋಗಿ ಸರಿಯಾಗಿ ಹದಿನಾಲ್ಕು ವರ್ಷಗಳು ಕಳೆದಿದ್ದವು. ಭರತ ಆಸೆ ಅನುಮಾನಗಳಿಂದಲೇ ಎದ್ದ. ಚಿತ್ರಕೂಟದಲ್ಲಿ ರಾಮನನ್ನು ಬೀಳ್ಕೊಟ್ಟು ಬಂದಾಗಿನಿಂದ ಅವನ ಬಗ್ಗೆ ಮತ್ತೆ ಯಾವ ಸುದ್ದಿಯೂ ತಿಳಿದು ಬಂದಿರಲಿಲ್ಲ. ಅವನಿಗೆ ಬದುಕೇ ಭಾರವಾಗಿತ್ತು. ಅವನು ನಿರಾಶೆಯಲ್ಲಿ ಮುಳುಗಿದ್ದಾಗ ಮೇಲೆ ಆಕಾಶ ದಿಂದ ಹನುಮಂತ ಇಳಿದುಬರುತ್ತಿರುವುದು ಕಂಡಿತು. ಇದ್ದಕ್ಕಿದ್ದಂತೆ ಆ ರೂಪವನ್ನು ಕಂಡು ಭರತನಿಗೆ ಗಾಬರಿಯಾಯಿತು. ಆದರೆ ಅವನು ಚೇತರಿಸಿಕೊಳ್ಳುವ ಮೊದಲೇ ಹನುಮಂತ ಕೆಳಗಿಳಿದು ಬಂದು, ಮಾತಿನ ಮಳೆ ಸುರಿಸುತ್ತ ರಾಮ ಹಿಂದಿರುಗುತ್ತಿರುವ ಸುದ್ದಿಯನ್ನು ತಿಳಿಸಿದ. ಭರತನಿಗೆ ತನ್ನ ಭಾಗ್ಯವನ್ನು ನಂಬಲಾಗಲಿಲ್ಲ. ಆ ಸಂತೋಷಕ್ಕೆ ಮೂರ್ಛೆ ಹೋದ.



ಆಕಾಶದಿಂದ ಹನುಮಂತ ಇಳಿದು ಬರುತ್ತಿರುವುದನ್ನು ಕಂಡು ಭರತನಿಗೆ ಗಾಬರಿಯಾಯಿತು



ಅಯೋಧ್ಯೆಯಲ್ಲಿ ಎಲ್ಲೆಲ್ಲೂ ಹೂಗಳು, ದೀಪಗಳು, ಬಣ್ಣದ ತೋರಣಗಳು

ಹನುಮಂತ ಆಶ್ಚರ್ಯಚಕಿತನಾಗಿ ನೋಡುತ್ತಿದ್ದ. "ರಾಮನನ್ನು ಅತಿಯಾಗಿ ಪ್ರೀತಿಸುವವನು ನಾನೊಬ್ಬನೇ ಎಂದುಕೊಂಡಿದ್ದೆ. ಆದರೆ ನನ್ನನ್ನು ಮೀರಿಸುವವನು ಇಲ್ಲಿ ಇನ್ನೊಬ್ಬನಿದ್ದಾನೆ" ಎಂದು ತನಗೆ ತಾನೇ ಹೇಳಿಕೊಂಡ.

ರಾಮ ಹಿಂದಿರುಗಿ ಬರುತ್ತಿದ್ದಾನೆಂದು ಅಯೋಧ್ಯೆಯ ಪ್ರಜೆಗಳಿಗೆ ತಿಳಿದಾಗ ಅವರು ಆನಂದದಿಂದ ಆಕಾಶ ಹರಿಯುವಂತೆ ಹುಯಲಿಟ್ಟರು. ಹದಿನಾಲ್ಕು ವರ್ಷಕಾಲ ಸತ್ತು ಬಿದ್ದಿದ್ದ ನಗರದಲ್ಲಿ ಮತ್ತೆ ಜೀವ ಅಂಕುರಿಸಿತು. ರಾಮನ ಪುನರಾಗಮನಕ್ಕಾಗಿ ಜನ ನಗರವನ್ನು ಅಲಂಕರಿಸತೊಡಗಿದರು. ಎಲ್ಲೆಲ್ಲೂ ಹೂಗಳು, ದೀಪಗಳು, ಬಣ್ಣದ ತೋರಣಗಳು. ಮತ್ತೊಮ್ಮೆ ಅಯೋಧ್ಯೆ ಆನಂದನಗರಿಯಾಯಿತು. ಹಾದಿಬೀದಿಗಳು ಹಾಡು ನಗೆಗಳಿಂದ ಮೊಳಗಿದವು.

ಭರತನೂ ಅಯೋಧ್ಯೆಯ ಜನರೂ ಪುಷ್ಪಕ ವಿಮಾನಕ್ಕಾಗಿ ಕಾಯುತ್ತಾ, ಆತುರದಿಂದ ಆಕಾಶದ ಕಡೆ ನೋಡುತ್ತ ನಿಂತರು. ಮೋಡಗಳ ನಡುವೆ ಅದು ಕಾಣಿಸಿಕೊಂಡಾಗ, ರಾಮ ಮೇಲೆ ಆಕಾಶದಲ್ಲಿ ಉದಿಸುತ್ತಿರುವ ಸೂರ್ಯನಂತೆ ಬೆಳಗುತ್ತಿದ್ದ. ಹರ್ಷೋದ್ಗಾರಗಳು ಅವನನ್ನು ಸ್ವಾಗತಿಸಿದವು.

ಭರತ ಕೈ ಜೋಡಿಸಿ ಮೇಲೆತ್ತಿ 'ರಾಮ . . . ರಾಮ' ಎಂದು ಹಲಬುತ್ತಿದ್ದ. ಆದರೆ ಅವನ ತುಟಿಗಳಿಂದ ಯಾವ ಶಬ್ದವೂ ಹೊರಡುತ್ತಿರಲಿಲ್ಲ. ಪುಷ್ಪಕ ವಿಮಾನ ನೆಲ ಮುಟ್ಟಿದಂತೆ ರಾಮ ತೋಳು ಚಾಚಿದ. ಭರತ ರಥದ ಮೇಲಕ್ಕೆ ಹಾರಿದ, ರಾಮ ಅವನನ್ನು



ಅಯೋಧ್ಯೆಯ ದೊರೆಯಾಗಿ ರಾಮನ ಪಟ್ಟಾಭಿಷೇಕವಾಯಿತು

ಅಪ್ಪಿಕೊಂಡ. ಭರತನಿಗೆ ಆ ಆನಂದದ ಭರದಲ್ಲಿ ಮಾತೇ ಹೊರಡದಾಯಿತು. ಕೌಸಲ್ಯೆ ಮತ್ತು ಇತರ ರಾಣಿಯರು ಬಂದು ರಾಮನಿಗೆ ಸ್ವಾಗತ ಕೋರಿದರು.

ನಿಧಾನವಾಗಿ, ಮಾತು ಮರಳಿ ಬಂದಂತೆ, ಭರತ ಅಷ್ಟು ಕಾಲವೂ ರಾಮನ ಹೆಸರಿನಲ್ಲಿ ಅಯೋಧ್ಯೆಯನ್ನು ಆಳಿದ ಬಗೆಯನ್ನು ವಿವರಿಸಿದ. ತನ್ನಿಂದ ಆಗಿರಬಹುದಾದ


ಕೊರತೆಗಳನ್ನು ಮನ್ನಿಸಿ, ರಾಜ್ಯಭಾರ ವಹಿಸಿಕೊಳ್ಳಬೇಕೆಂದು ಬೇಡಿಕೊಂಡ. ರಾಮ ತಮ್ಮನ ಘನತೆ, ನಿಷ್ಠಾಭಕ್ತಿಗಳಿಗೆ ಕರಗಿಹೋದ.

ಸದ್ಯದಲ್ಲಿಯೇ ಆನಂದೋತ್ಸವಗಳ ನಡುವೆ ಅತ್ಯಂತ ವಿಜೃಂಭಣೆಯಿಂದ ರಾಮನ ಪಟ್ಟಾಭಿಷೇಕವಾಯಿತು. ಉದ್ದಕ್ಕೂ ಹನುಮಂತ ಭಕ್ತಿಯಿಂದ ರಾಮಸೀತೆಯರ ಸೇವೆಗೆ ಸಿದ್ಧನಾಗಿ ನಿಂತಿದ್ದ. ಸೀತೆ ನಾಚುತ್ತಲೇ ಸಿಂಹಾಸನದಿಂದ ಎದ್ದು ಅವನ ಕೊರಳಿಗೆ ಒಂದು ಸುಂದರವಾದ ಮುತ್ತಿನ ಹಾರ ಹಾಕಿದಳು.

ಭಾರತದಲ್ಲಿ ಎಲ್ಲೆಲ್ಲೂ 'ರಾಮರಾಜ್ಯ'ವೆಂದು ಪ್ರಸಿದ್ಧವಾಗಿರುವ ರಾಮನ ಆಳ್ವಿಕೆಯ ಭವ್ಯಕಾಲ ಮೊದಲಾಯಿತು. ನ್ಯಾಯ, ವಿವೇಕ ಹಾಗೂ ಕರುಣೆಗಳಿಂದ ಕೂಡಿ ರಾಮ ಆದರ್ಶ ದೊರೆಯಾಗಿದ್ದ. ನಾವು ಈಗ ಅನ್ನುವ 'ಧರ್ಮದ ಆಳಿಕೆ'ಯನ್ನು ಆರಂಭಿಸಿದವನು ಅವನು. ಋಷಿಗಳು ದೊರೆಗೆ ಬುದ್ಧಿ ಹೇಳುತ್ತಿದ್ದರು. ದೊರೆ ಪ್ರಜೆಗಳಿಗೆ ಮಾರ್ಗದರ್ಶನ ಮಾಡುತ್ತಿದ್ದ. ಮೇಲಿಂದ ಕೆಳಗಿನವರೆಗೆ ದೊಡ್ಡವರು ಚಿಕ್ಕವರೆಲ್ಲರೂ ಅವರವರ ಕರ್ತವ್ಯ ಮಾಡುತ್ತಿದ್ದರು. ಹೀಗೆ ರಾಮ ಒಂದು ಮೇಲುಪಂಕ್ತಿಯನ್ನು ಹಾಕಿಕೊಟ್ಟ. ಆದ್ದರಿಂದಲೇ ದುಷ್ಟದಂಡನೆ ಶಿಷ್ಟ ರಕ್ಷಣೆ ಮಾಡಿ, ಜಗತ್ತಿನಲ್ಲಿ ಶಾಂತಿ ನ್ಯಾಯಗಳನ್ನು ನೆಲೆಗೊಳಿಸಲು ದೇವರೇ ರಾಮನ ಅವತಾರವೆತ್ತಿ ಬಂದಿದ್ದನೆಂಬ ನಂಬಿಕೆ ಬೆಳೆದದ್ದು.

ರಾಮನಷ್ಟು ಒಳ್ಳೆಯವರು, ಲಕ್ಷ್ಮಣ ಭರತರಂತಹ ತಮ್ಮಂದಿರು, ಸುಗ್ರೀವ ಹನುಮಂತರಂತಹ ನಿಷ್ಠಾವಂತ ಸ್ನೇಹಿತರು ಯಾರಾದರೂ ಇರುವರೇ ಎಂದು ನೀವು ಆಶ್ಚರ್ಯ ಪಡಬಹುದು.

ಯಾರೂ ಪರಿಪೂರ್ಣರಾಗಿ ಹುಟ್ಟುವುದಿಲ್ಲ. ರಾಮನಿಗೂ ಅವನ ದೌರ್ಬಲ್ಯಗಳಿದ್ದವು. ಆದರೆ ಜನ ಶಂಕಾಭಯಗಳನ್ನು, ಕ್ರೋಧ ದ್ವೇಷಗಳನ್ನು ಹತ್ತಿಕ್ಕಿ ಉತ್ತಮರಾಗಿ ಬಾಳಲು ಸಹಾಯವಾಗಲೆಂದು ಕವಿ ವಾಲ್ಮೀಕಿ ರಾಮನನ್ನು ಒಬ್ಬ ಆದರ್ಶ ಪುರುಷನನ್ನಾಗಿ ಚಿತ್ರಿಸಿ ತೋರಿಸಿದ್ದಾನೆ.



ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಮಂತ್ರಿಶಾಖೆ
ಭಾರತ ಸರ್ಕಾರ